Sanjevani Daily | Bangalore | Monday 21 September 2026 | Vol: 44 Issue 280 | Pages 8 | RNI No: 36667/82 | Rs. 3.00

# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882

Excel Refrigeration Service
Refrigeration & Bakery Equipment
Bommasandra, Bangalore
ರೋಟ್ರಿ ರ್‍ಯಾಕ್ ಓವೆನ್‌ಗಳು
ಸ್ಪಿರಲ್ ಮಿಕ್ಸರ್ಸ್
ಪ್ಲಾನೆಟರಿ ಮಿಕ್ಸರ್ಸ್
ಇಂಪೋರ್ಟೆಡ್ ಓವೆನ್‌ಗಳು.
ಕಿಚನ್ ಫ್ರೀಜರ್‌ಗಳು
ಜ್ಯೂಸ್ ಮೆಷಿನ್‌ಗಳು
ವರ್ಟಿಕಲ್ ಕೇಕ್ ಡಿಸ್‌ಪ್ಲೇ.
Mob : 9902030007/9900021097

# ಮರುತನಿಖೆಗೆ ಸುಪ್ರೀಂ ಆದೇಶ

## ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣ: ಸಿಬಿಐ ತನಿಖೆಗೆ ಅಸಮಾಧಾನ : ವರದಿ ಸಲ್ಲಿಕೆಗೆ 3 ತಿಂಗಳು ಗಡುವು

The Best Jewellery
•GOLD •SILVER •DIAMOND
BIS 916 HALLMARKED GOLD JEWELLERY
ಚಿನ್ನ ಮತ್ತು ಬೆಳ್ಳಿ ಖರೀದಿಸಲು ಪ್ರತಿಷ್ಠಿತ ಆಭರಣ ಶೋರೂಮ್.
Making Charges Starting from 3%
GOLDEN FLEXI
*T & C Apply
Benefits
*Pay flexible amounts for 10 months and purchase on 11th month.
*50% off on making charges on all gold ornaments.
*This offer will be valid only on the total amount accumulated for 10 months.
#6, 1/1, 11th Main Road Gokula 1st Stage, Bombay Dyeing Road, Opp Comfort Inn Hotel, Yeshwanthpur, Bengaluru- 560 054. Call: 080-41146916 / +91-9686062916

ನವದೆಹಲಿ/ಬೆಳ್ತಂಗಡಿ, ಸೆ.21: ಧರ್ಮಸ್ಥಳದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಮತ್ತೆ ಸುದ್ದಿಯ ಮುನ್ನೆಲೆಗೆ ಬಂದಿದೆ. ಪ್ರಕರಣದ ತನಿಖೆಯನ್ನು ಹೊಸದಾಗಿ ನಡೆಸುವಂತೆ ಸುಪ್ರೀಂ ಕೋರ್ಟ್ ಮಹತ್ವದ ನಿರ್ದೇಶನ ನೀಡಿದ್ದು, ಹಿಂದಿನ ತನಿಖೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳನ್ನು ಹೊರಗಿಟ್ಟು ಹೊಸ ತನಿಖಾ ತಂಡ ರಚಿಸುವಂತೆ ಸೂಚಿಸಿದೆ.

ಪ್ರಕರಣದ ಮರುತನಿಖೆ ಪೂರ್ಣಗೊಳಿಸಿ ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕು ಎಂದು ನ್ಯಾಯಪೀಠ ಗಡುವು ನಿಗದಿಪಡಿಸಿದೆ. ಈ ಆದೇಶದಿಂದ ಹಲವು ವರ್ಷಗಳಿಂದ ಮುಂದುವರಿದಿದ್ದ ಪ್ರಕರಣಕ್ಕೆ ಮತ್ತೊಂದು ಮಹತ್ವದ ತಿರುವು ಸಿಕ್ಕಂತಾಗಿದೆ.

### ತಾಯಿಯ ಮೇಲ್ಮನವಿಗೆ ಸ್ಪಂದನೆ

ಸೌಜನ್ಯಾ ಅವರ ತಾಯಿ ಕುಸುಮಾವತಿ ಗೌಡ ಅವರು ಪ್ರಕರಣದ ತನಿಖೆ ಮತ್ತು ವಿಚಾರಣೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಸಿಬಿಐ ತನಿಖೆಯ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯ ಆರೋಪಿಗಳನ್ನು





ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಹೈಕೋರ್ಟ್‌ನಲ್ಲಿ ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ಕುಸುಮಾವತಿ ಗೌಡ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ, ಪ್ರಕರಣವನ್ನು ಸ್ವತಂತ್ರವಾಗಿ ಮರುತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಸಂಜೀವ್ ಸಚ್‌ದೇವ್ ಅವರ ಪೀಠ ಇದೀಗ ಮರುತನಿಖೆಗೆ ಆದೇಶಿಸಿದೆ.

ಪ್ರಕರಣದ ಹಿಂದಿನ ತನಿಖಾ ಪ್ರಕ್ರಿಯೆ ಬಗ್ಗೆಯೂ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ತನಿಖಾಧಿಕಾರಿ ಸ್ವತಂತ್ರವಾಗಿ ಪ್ರಕರಣವನ್ನು ಪರಿಶೀಲಿಸುವ ಬದಲು, ಹಿಂದಿನ ತನಿಖೆಯಲ್ಲಿ ಸಂಗ್ರಹಿಸಲಾಗಿದ್ದ ಸಾಕ್ಷ್ಯಗಳು ಮತ್ತು ದಾಖಲೆಗಳನ್ನೇ ಆಧರಿಸಿ ವರದಿ ಸಲ್ಲಿಸಿರುವುದು ಸೂಕ್ತ ತನಿಖಾ ಕ್ರಮವಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಹೊಸ ತನಿಖೆಯ ವೇಳೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಸ್ವತಂತ್ರವಾಗಿ ಪರಿಶೀಲಿಸುವ ಅಗತ್ಯವಿದೆ ಎಂಬ ಸಂದೇಶವನ್ನು ನ್ಯಾಯಪೀಠದ ನಿರ್ದೇಶನ ನೀಡಿದೆ.

ಮರುತನಿಖೆಗಾಗಿ ರಚಿಸಲಾಗುವ ತಂಡದಲ್ಲಿ ಹಿಂದಿನ ತನಿಖೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳಿಗೆ ಸ್ಥಾನ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹೊಸ ತಂಡವು ಪ್ರಕರಣದ ಲಭ್ಯ ದಾಖಲೆಗಳು, ಸಾಕ್ಷ್ಯಗಳು ಹಾಗೂ ಇತರ ಸಂಬಂಧಿತ ಅಂಶಗಳನ್ನು ಸ್ವತಂತ್ರವಾಗಿ ಪರಿಶೀಲಿಸಬೇಕಿದೆ.

ಮೂರು ತಿಂಗಳ ಗಡುವಿನೊಳಗೆ ತನಿಖೆ ಪೂರ್ಣಗೊಳಿಸಿ ಸಮಗ್ರ ವರದಿ ಸಲ್ಲಿಸುವ ಹೊಣೆ ಹೊಸ ತಂಡದ ಮೇಲಿದೆ.

ಸೌಜನ್ಯಾ ಪ್ರಕರಣದ ತನಿಖೆ ಹಾಗೂ ನ್ಯಾಯಕ್ಕಾಗಿ ಕುಟುಂಬ ನಡೆಸಿಕೊಂಡು ಬಂದಿರುವ ಕಾನೂನು ಹೋರಾಟದ ನಡುವೆ ಸುಪ್ರೀಂ ಕೋರ್ಟ್‌ನ ಈ ಆದೇಶ ಮಹತ್ವ ಪಡೆದಿದೆ. ಮರುತನಿಖೆಯ ಬಳಿಕ ಪ್ರಕರಣದ ಕುರಿತು ಯಾವ ಹೊಸ ಅಂಶಗಳು ಬೆಳಕಿಗೆ ಬರಲಿವೆ ಎಂಬುದು ಮುಂದಿನ ಹಂತದಲ್ಲಿ ನಿರ್ಧಾರವಾಗಲಿದೆ.

## ಪರಿಷತ್‌ನಲ್ಲಿ ಕಸ್ತೂರಿ ರಂಗನ್ ವರದಿ ಟಿಪ್ಪಣಿ ಮಂಡನೆ

ಬೆಂಗಳೂರು, ಸೆ.21– ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಮೇಲ್ಮನೆಯಲ್ಲಿ ವಂದೇ ಮಾತರಂ ಗೀತೆಯ ವಿಚಾರವು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಮಮಕಿ ಗದ್ದಲ ನಡುವೆ ಉಪಮುಖ್ಯಮಂತ್ರಿ ಪರಮೇಶ್ವರ್ ಕಸ್ತೂರಿರಂಗನ್ ವರದಿ ವಿಚಾರವನ್ನು ಪ್ರಸ್ತಾಪಿಸಿದ ಬಳಿಕವು ಪ್ರತಿಪಕ್ಷ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು.

ಗದ್ದಲದ ನಡುವೆ ಉಪಮುಖ್ಯಮಂತ್ರಿ ಪರಮೇಶ್ವರ್ ಅವರು

ಕಸ್ತೂರಿರಂಗನ್ ವರದಿಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರಗಳ ಮೂಲಕ ತಿಳಿಸಿದೆ. ಕೇಂದ್ರ ಸರ್ಕಾರ ಪದೇಪದೇ ಅಧಿಸೂಚನೆಗಳನ್ನು ಹೊರಡಿಸುತ್ತಿದ್ದು, ಇದೀಗ ಹೊರಡಿಸಿರುವ ಕರಡು ಅಧಿಸೂಚನೆಗೂ ರಾಜ್ಯ ಸರ್ಕಾರದ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಈ ಕಾರಣಕ್ಕಾಗಿಯೇ ವಿಶೇಷ ಅಧಿವೇಶನದಲ್ಲಿ ವಿಚಾರವನ್ನು ಚರ್ಚೆಗೆ ತಂದಿದ್ದೇವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ರೈತರು, ಸ್ಥಳೀಯ ಜನರು ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿರುವುದರಿಂದ, ಆ ಎಲ್ಲ ಅಭಿಪ್ರಾಯಗಳನ್ನೂ ಸದನದಲ್ಲಿ ಸಮಗ್ರವಾಗಿ ಚರ್ಚಿಸಬೇಕಾಗಿದೆ ಪುಟ 2

## ರೈತರ ರಕ್ಷಣೆ ನಮ್ಮ ಬದ್ಧತೆ: ಡಿಕೆಶಿ



ಬೆಂಗಳೂರು, ಸೆ., 21– ರೈತರ ರಕ್ಷಣೆ ನಮ್ಮ ಬದ್ಧತೆ, ರೈತರ ರಕ್ಷಣೆ ವಿಚಾರದಲ್ಲಿ ನಾನು ರಾಜಕಾರಣವನ್ನು ಬದಿಗಿಟ್ಟು ಒಗ್ಗೂಡಿ ಎಲ್ಲರೂ ರೈತರ ರಕ್ಷಣೆ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿಂದು ಹೇಳಿದರು.

ಪಶ್ಚಿಮಘಟ್ಟ ಭಾಗದ ಜನರ ಬದುಕಿಗೆ ಮಾರಕ ಎನಿಸಿರುವ ಡಾ. ಕಸ್ತೂರಿ ರಂಗನ್ ವರದಿ ಬಗ್ಗೆ ವಿಧಾನಸಭೆಯಲ್ಲಿಂದು ಮಹತ್ವದ ಚರ್ಚೆ ನಡೆದಿದ್ದು, ಪ್ರಾಸ್ತಾವಿಕವಾಗಿ ಚರ್ಚೆಯ ಆರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕಸ್ತೂರಿ ರಂಗನ್ ವರದಿಯ ಜಾರಿಯಿಂದ ಪಶ್ಚಿಮಘಟ್ಟದ ಜನರ ಬದುಕಿಗೆ ತೊಂದರೆಯಾಗುತ್ತದೆ ಎಂಬ ಆತಂಕ ವ್ಯಕ್ತವಾಗಿದೆ. ರೈತರ ಆತಂಕವನ್ನು ದೂರ ಮಾಡಿ ಅವರ ರಕ್ಷಣೆ ಮಾಡುವ ಬದ್ಧತೆ, ಆಶಯದೊಂದಿಗೆ ಈ ವಿಶೇಷ ಅಧಿವೇಶನವನ್ನು ಕರೆದಿದ್ದೇನೆ. ರೈತರ ರಕ್ಷಣೆ ನಮ್ಮ ಬದ್ಧತೆ ಎಂದರು.

ಪಶ್ಚಿಮಘಟ್ಟಕ್ಕೆ ಸಂಬಂಧಿಸಿದಂತೆ ಕಸ್ತೂರಿ ರಂಗನ್ ವರದಿಯ 10 ಜಿಲ್ಲೆಗಳ ಬದುಕಿಗೆ ಮಾರಕ, ಭಯದ ವಾತಾವರಣ ಆ ಭಾಗದಲ್ಲಿದ್ದು, ರೈತರ ಭಯ ಆತಂಕವನ್ನು ದೂರ ಮಾಡಲು ಏನು ಮಾಡಬೇಕು, ಯಾವ ರೀತಿಯ ತೀರ್ಮಾನಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂಬ ಬಗ್ಗೆ ಜನಪ್ರತಿನಿಧಿಗಳ ಅಭಿಪ್ರಾಯ ಪಡೆಯಲು ಈ ಅಧಿವೇಶನ ನಡೆಸಲಾಗುತ್ತಿದೆ. ಈ ಅಧಿವೇಶನದಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಜನರ ಬದುಕನ್ನು ರಕ್ಷಿಸಲು ಏನೆಲ್ಲಾ ಮಾಡಬೇಕೋ ಅದನ್ನು ನಾವು ನೀವು ಒಟ್ಟಾಗಿ ಮಾಡೋಣ. ರಾಜಕೀಯ ಬದಿಗಿಟ್ಟು ರೈತರ ರಕ್ಷಣೆ ಮಾಡೋಣ ಎಂದರು

ಕಸ್ತೂರಿ ರಂಗನ್ ವರದಿಯ ಭಯ ನಿವಾರಣೆಗೆ ಯಾವ ರೀತಿ ಕ್ರಮ ಕೈಗೊಳ್ಳಬೇಕು, ಏನು ಪರಿಹಾರ ಎಲ್ಲವನ್ನು ಚರ್ಚೆ ಮಾಡೋಣ. ಜನರ ಭಾವನೆ ಮೇಲೆ ನಾವುಗಳೆಲ್ಲಾ ತೀರ್ಮಾನ ಮಾಡಬೇಕಿದೆ ಎಂದು ಹೇಳಿದರು.

ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ವರದಿಯನ್ನು ತಿರಸ್ಕರಿಸಬೇಕು. ವರದಿ ಅಧ್ಯಯನಕ್ಕೆ ಉನ್ನತ ಮಟ್ಟದ ಸಮಿತಿ ರಚಿಸಬೇಕೋ, ಭೌತಿಕ ಸಮಿತಿ ರಚಿಸಬೇಕೋ, ಕೇರಳ ಮಾದರಿ ರಚಿಸಬೇಕೋ. ವಿಧಾನಸಭೆಯಲ್ಲಿ ವರದಿ ಜಾರಿ ವಿರೋಧಿಸಿ ನಿರ್ಣಯ ಕೈಗೊಳ್ಳಬೋಕೋ, ಕೇಂದ್ರ ಪುಟ 2



## ಆಡಳಿತ –ವಿಪಕ್ಷಗಳ ವಾಕ್ಸಮರ

ವಿಧಾನ ಮಂಡಲ ವಿಶೇಷ ಅಧಿವೇಶನ

ಬೆಂಗಳೂರು, ಸೆ. 21– ಕಸ್ತೂರಿ ರಂಗನ್ ವರದಿ ಹಾಗೂ ಬರದ ಬಗ್ಗೆ ಚರ್ಚೆ ನಡೆಸಲು ಇಂದಿನಿಂದ ಆರಂಭವಾಗಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮೊದಲ ದಿನವೇ ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರೀ ವಾಕ್ಸಮರ ನಡೆಯಿತು.

ಈ ಅಧಿವೇಶನವನ್ನು ವಿಶೇಷ ಅಧಿವೇಶನ ಎಂದು ಕರೆದಿರುವುದು ನಿಯಮಾವಳಿಗೆ ವಿರುದ್ಧ, ಇದು ಮುಂದುವರೆದ ಅಧಿವೇಶನವೇ, ಇಲ್ಲವೇ ವಿಶೇಷ ಎಂಬುದನ್ನು ಸ್ಪಷ್ಟಪಡಿಸಿ. ವಿಶೇಷ ಅಧಿವೇಶನ ಕರೆಯಲು ನಿಯಮಾವಳಿಯಲ್ಲಿ ಅವಕಾಶ ಇಲ್ಲ. ವಿಶೇಷ ಚರ್ಚೆಗೆ ನಮ್ಮ ತಕರಾರಿಲ್ಲ. ಯಾವ ನಿಯಮದಡಿ ಚರ್ಚೆ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಿ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದು ಮಾತಿನ ಚಕಮಕಿಗೆ ಕಾರಣವಾಗಿ ಸದನದಲ್ಲಿ ಸ್ವಲ್ಪಮಟ್ಟಿನ ಕಾವೇರಿದ ಚರ್ಚೆಗೆ ಎಡೆ ಮಾಡಿಕೊಟ್ಟಿತು.

ಪ್ರತಿಪಕ್ಷ ನಾಯಕರ ಮಾತಿಗೆ ನಿಯಮಾವಳಿಗಳನ್ನು ಉಲ್ಲೇಖಿಸಿ ಉತ್ತರ ನೀಡಿದ ಕೃಷ್ಣಬೈರೇಗೌಡ ಅವರು, ನಮಗೆ ಪ್ರತಿಷ್ಠೆ ಇಲ್ಲ. ವಿಶೇಷ ಅಧಿವೇಶನ ಎಂಬುದು ನನ್ನಿಂದಾದ ತಪ್ಪಾಗಿದೆ. ಆ ತಪ್ಪನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿ, ಈ ಕುರಿತ ಕಾವೇರಿದ ಚರ್ಚೆಗೆ ತೆರೆ ಎಳೆದರು.

ಇದಕ್ಕೂ ಮೊದಲು ನಿಲುವಳಿ ಸೂಚನೆ ಮಂಡನೆ ವಿಚಾರದಲ್ಲೂ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಕೃಷ್ಣ ಬೈರೇಗೌಡರ ನಡುವೆ ವಾಗ್ವಾದವೇ ನಡೆಯಿತು.

ಇಂದು ಸದನ ಆರಂಭವಾಗಿ ಸಂತಾಪ, ಕಾಗದ ಪತ್ರಗಳ ಮಂಡನೆ ಮುಗಿದ ನಂತರ ಪ್ರತಿಪಕ್ಷ ಪುಟ 2

## ಮೇಲ್ಮನೆಯಲ್ಲಿ ವಂದೇ ಮಾತರಂ ಕೋಲಾಹಲ, ಗದ್ದಲ

ಬೆಂಗಳೂರು, ಸೆ.21– ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಮೇಲ್ಮನೆಯಲ್ಲಿ ವಂದೇ ಮಾತರಂ ಗೀತೆಯ ವಿಚಾರವು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಮಮಕಿ ಗದ್ದಲ, ಘೋಷಣೆ ಕೋಲಾಹಲಕ್ಕೆ ಎಡೆಮಾಡಿಕೊಟ್ಟಿತ್ತು.

ಇದೇ ವಿಚಾರವಾಗಿ ಪ್ರತಿಪಕ್ಷ ಬಿಜೆಪಿ ಜೆಡಿಎಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಯಿತು.

ಮೇಲ್ಮನೆಯಲ್ಲಿ ಸುಗಮವಾಗಿ ನಡೆಯಬೇಕಾಗಿದ್ದ ರಾಜ್ಯದ ಬರ ಪರಿಸ್ಥಿತಿ ಹಾಗೂ ಕಸ್ತೂರಿರಂಗನ್ ವರದಿ ಚರ್ಚೆಯ ಆರಂಭದ ಮೊದಲ ದಿನವೇ ರಾಷ್ಟ್ರೀಯ ಗೀತೆ ವಂದೇ ಮಾತರಂ ನ್ನು ಆಡಳಿತ ಪಕ್ಷ ಮೊಟಕುಗಳಿಸಿದ್ದು, ರಾಜಕೀಯ ಸಂಘರ್ಷಕ್ಕೆ ವೇದಿಕೆಯಾಯಿತು.

ಸಭಾಪತಿ ಸಲೀಂ ಅಹಮದ್ ಅವರು ಕಲಾಪ ಆರಂಭಿಸಿದ ಕೂಡಲೇ ವಂದೇ ಮಾತರಂ ಗಾಯನಕ್ಕೆ ಚಾಲನೆ ನೀಡಲಾಯಿತು. ಸರ್ಕಾರದ ಇತ್ತೀಚಿನ ಆದೇಶದಂತೆ ಎರಡು ಚರಣಗಳ ಗಾಯನದ ಬಳಿಕ ಗೀತೆಯನ್ನು ಸ್ಥಗಿತಗೊಂಡಿತು.

ಇದನ್ನು ವಿರೋಧಿಸಿದ ಪ್ರತಿಪಕ್ಷ ಬಿಜೆಪಿ ಸದಸ್ಯರು ಸದನದಲ್ಲೇ ಪೂರ್ಣ ವಂದೇ ಮಾತರಂ ಗಾಯನ ಆರಂಭಿಸಿದರು. ಇದೇ ವೇಳೆ ಸಭಾಪತಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲು ಮುಂದಾದರು. ಸಂವಿಧಾನದ ಪೀಠಿಕೆ ಬೋಧನೆಯ ನಡುವೆಯೂ ಬಿಜೆಪಿ ಸದಸ್ಯರು ಪೂರ್ಣ ವಂದೇ ಮಾತರಂ ಹಾಡಿ ಬಳಿಕ ಸಂವಿಧಾನದ ಪೀಠಿಕೆಯನ್ನು ಓದಿದರು ಇದರಿಂದ ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಯಿತು.

ಬಿಜೆಪಿ ಸದಸ್ಯರು ಪೂರ್ಣ ಗೀತೆಯ ಗಾಯನಕ್ಕೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು. ವಂದೇ ಮಾತರಂ ಎರಡು ಚರಣಗಳಿಗೆ ಸೀಮಿತಗೊಳಿಸಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಬಿಜೆಪಿ ಸದಸ್ಯ ರವಿಕುಮಾರ್, ಹಿಂದೆ ಸದನದಲ್ಲಿ ಪೂರ್ಣ ವಂದೇ ಮಾತರಂ ಗೀತೆ ಹಾಡಲಾಗುತ್ತಿತ್ತು; ಈಗ ಏಕೆ ಎರಡು ಚರಣಗಳಿಗೆ ಸೀಮಿತಗೊಳಿಸಲಾಗಿದೆ ಇದು ಸಭಾಪತಿಗಳ ಪೀಠಕ್ಕೆ ಮಾಡಿದ ಅಪಮಾನ ಎಂದು ಪ್ರಶ್ನಿಸಿದರು.

ಇದನ್ನು ವಿರೋಧಿಸಿದ ಸಭಾನಾಯಕ ಯತೀಂದ್ರ ಅವರು, ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ಎರಡು ಚರಣಗಳನ್ನು ಮಾತ್ರ ಹಾಡುವಂತೆ ಸರ್ಕಾರವೇ ಆದೇಶ ಹೊರಡಿಸಿದೆ ಅದರಂತೆ ಸದನದಲ್ಲಿ ನಡೆದುಕೊಳ್ಳಲಾಗಿದೆ ಎಂದು ಸಮರ್ಥಿಸಿಕೊಂಡರು. ಪುಟ 2

## ವಂದೇಮಾತರಂ ಎರಡು ಚರಣ, ಪೂರ್ಣಚರಣ ತಂದ ಗೊಂದಲ

ಬೆಂಗಳೂರು, ಸೆ.21–ವಿಧಾನಮಂಡಲದ ವಿಶೇಷ ಅಧಿವೇಶನದಲ್ಲಿಂದು ವಂದೇ ಮಾತರಂ ಗೀತೆ ಗಾಯನ ಗೊಂದಲಕ್ಕೆ ಕಾರಣವಾಗಿ ಸದನದಲ್ಲಿ ಆಡಳಿತ ಪಕ್ಷದ ಸದಸ್ಯರು ವಂದೇಮಾತರಂನ್ನು ಎರಡು ಚರಣ ಹಾಡಿದರೆ, ಪ್ರತಿಪಕ್ಷ ಸದಸ್ಯರು ಪೂರ್ಣ ಚರಣ ಹಾಡಿ ತಮ್ಮ ತಮ್ಮ ನಿಲುವುಗಳಿಗೆ ಅಂಟಿಕೊಂಡರು.

ವಿಧಾನಸಭೆಯ ಅಧಿವೇಶನವನ್ನು ವಂದೇಮಾತರಂ ಗೀತೆಯೊಂದಿಗೆ ಆರಂಭಿಸುವ ಸಂಪ್ರದಾಯದಂತೆ ಸದನದಲ್ಲಿ ವಂತೇಮಾತರಂ ಗೀತೆ ಗಾಯನದ ಎರಡು ಚರಣವನ್ನು ನುಡಿಸಲಾಯಿತು. ಎರಡು ಚರಣ ಮುಗಿಯುತ್ತಿದ್ದಂತೆಯೇ ಸಭಾಧ್ಯಕ್ಷರು ತಮ್ಮ ಪೀಠದಲ್ಲಿ ಎದ್ದುನಿಂತು ಸಂವಿಧಾನ ಪೀಠಿಕೆಯನ್ನು ಓದಿದರು. ಅವರ ಜತೆಗೆ ಆಡಳಿತ ಪಕ್ಷದ ಸದಸ್ಯರು ದನಿಗೂಡಿಸಿದರು.

ಆದರೆ ಪ್ರತಿಪಕ್ಷ ಸದಸ್ಯರು ಮಾತ್ರ ವಂದೇಮಾತರಂನ ಪೂರ್ಣ ಚರಣವನ್ನು ಹಾಡುತ್ತಲೇ ಇದ್ದರು. ಹಾಗಾಗಿ ಸದನದಲ್ಲಿ ಗೊಂದಲದ ವಾತಾವರಣ ರೂಪುಗೊಂಡಿತ್ತು.

ಪ್ರತಿಪಕ್ಷ ಸದಸ್ಯರು ವಂದೇಮಾತರಂನ ಪೂರ್ಣ ಚರಣ ಹಾಡಿ, ನಂತರ ಸಂವಿಧಾನ ಪೀಠಿಕೆಯನ್ನು ಓದಿದರು.

ಇತ್ತ ಸಭಾಧ್ಯಕ್ಷರು ಸಂತಾಪ ಕಲಾಪವನ್ನು ಕೈಗೆತ್ತಿಕೊಂಡರು. ವಂದೇಮಾತರಂ ಗೀತೆ ಗಾಯನ ಸದನದಲ್ಲೂ ಗೊಂದಲಕ್ಕೆ ಕಾರಣವಾಗಿ ಆಡಳಿತ ಮತ್ತು ವಿಪಕ್ಷ ಸದಸ್ಯರ ಭಿನ್ನ ಭಿನ್ನ ನಿಲುವಿಗೂ ಕಾರಣವಾಯಿತು.

## ಅಧಿಕಾರಿಗಳಿಗೆ ಲಂಚ ಹೇಳಿಕೆ: ರಾಗ ಬದಲಿಸಿದ ಶಿವಲಿಂಗೇಗೌಡ

ಬೆಂಗಳೂರು.ಸೆ.21–ಅಧಿಕಾರಿಗಳಿಗೆ ಲಂಚ ನೀಡುವಂತೆ ತಾವು ಎಲ್ಲಿಯೂ ಹೇಳಿಲ್ಲ. ಅಧಿಕಾರಿಗಳು ಹಾಗೂ ಸಾರ್ವಜನಿಕರು ಪರಸ್ಪರ ಗೌರವದಿಂದ ನಡೆದುಕೊಳ್ಳಬೇಕು ಎಂದು ಮಾತ್ರ ಸೂಚಿಸಿದ್ದೇನೆ ಎಂದು ಅಬಕಾರಿ ಸಚಿವ ಶಿವಲಿಂಗೇಗೌಡ ಸ್ಪಷ್ಟಪಡಿಸಿದ್ದಾರೆ.

ತಮ್ಮ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವ ವಿಚಾರಕ್ಕೆ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿದ ಅವರು, ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಯಾವ ವಿಚಾರಕ್ಕೆ ದೂರು ನೀಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನೇನು ನೇರವಾಗಿ ಹಣ ಕೊಡಲು ಹೇಳಿದ್ದೀನಾ? ಲಂಚ ಕೊಡಿ ಎಂದು ಹೇಳಿದ್ದೀನಾ? ಎಂದು ಪ್ರಶ್ನಿಸಿದರು.

ಸಕಲೇಶಪುರದಲ್ಲಿ ಅಧಿಕಾರಿಗಳು ಹಾಗೂ ರೈತರ ನಡುವೆ ವಾಗ್ವಾದದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ರೈತರು ಪರಸ್ಪರ ಗೌರವದಿಂದ ನಡೆದುಕೊಳ್ಳಬೇಕು. ಸಾರ್ವಜನಿಕರ ಕೆಲಸಗಳನ್ನು ಸರಿಯಾಗಿ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

ಅಧಿಕಾರಿಗಳು ಮತ್ತು ರೈತರ ನಡುವೆ ಘರ್ಷಣೆ ನಡೆಯುತ್ತಿತ್ತು. ನಮ್ಮ ಮೇಲೆ ಗಲಾಟೆ ಮಾಡುತ್ತಾರೆ ಎಂದು ಅಧಿಕಾರಿಯೊಬ್ಬರು ಪುಟ 2

## ದೇವರ ನಾಡಲ್ಲಿ ಹಠಾತ್ ಪ್ರವಾಹ: 9 ಮಂದಿ ಸಾವು

ತಿರುವನಂತಪುರಂ, ಸೆ.21: ಕೇರಳದಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಹಲವು ಜಿಲ್ಲೆಗಳಲ್ಲಿ ಮಣ್ಣು ಕುಸಿತ, ಭೂಕುಸಿತ ಹಾಗೂ ಹಠಾತ್ ಪ್ರವಾಹದ ಘಟನೆಗಳು ಸಂಭವಿಸಿದ್ದು, ಕನಿಷ್ಠ 9 ಮಂದಿ ಮೃತಪಟ್ಟಿದ್ದಾರೆ. ಇಬ್ಬರು ನಾಪತ್ತೆಯಾಗಿದ್ದಾರೆ. ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಪರಿಸ್ಥಿತಿಯನ್ನು ಪ್ರತಿ ಗಂಟೆಗೊಮ್ಮೆ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇಡುಕ್ಕಿ, ಕೊಟ್ಟಾಯಂ ಹಾಗೂ ಮಲಪ್ಪುರಂ ಜಿಲ್ಲೆಗಳಲ್ಲಿ ಮಳೆಯ ಪರಿಣಾಮ ಹೆಚ್ಚು ಕಂಡುಬಂದಿದೆ. ಜನರ ಸುರಕ್ಷತೆ ದೃಷ್ಟಿಯಿಂದ



ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ. ಮಲಪ್ಪುರಂ ಜಿಲ್ಲೆಯ ನಿಲಂಬೂರ್–ಅಮರಂಬಲಂ ಪ್ರದೇಶದ ಕೊಟ್ಟಪುಳಾ ನದಿಯಲ್ಲಿ ಹಠಾತ್ ಪ್ರವಾಹ ಉಂಟಾಗಿ 9 ಮಂದಿ ಕೊಚ್ಚಿ ಹೋಗಿದ್ದಾರೆ. ವಂಡೂರ್‌ನಿಂದ ಬಂದಿದ್ದ ಈ ತಂಡ ನದಿಯಲ್ಲಿ ಸ್ನಾನಕ್ಕೆ ಇಳಿದಿದ್ದ ವೇಳೆ ನೀರಿನ ಮಟ್ಟ ಏಕಾಏಕಿ ಏರಿಕೆಯಾಗಿ ಪ್ರವಾಹದ ರಭಸಕ್ಕೆ ಸಿಲುಕಿದೆ.

ಸ್ಥಳೀಯರೊಬ್ಬರು ಒಬ್ಬರನ್ನು ರಕ್ಷಿಸಿದ್ದಾರೆ. ಅಗ್ನಿಶಾಮಕ ಮತ್ತು ರಕ್ಷಣಾ ಸಿಬ್ಬಂದಿ ಇಬ್ಬರ ಮೃತದೇಹಗಳನ್ನು ಪತ್ತೆಹಚ್ಚಿದ್ದಾರೆ. ಇನ್ನಿಬ್ಬರು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ವಿಶೇಷ ವಿಪತ್ತು ನಿರ್ವಹಣಾ ಪಡೆಯ ತಂಡವನ್ನು ತಕ್ಷಣವೇ ಸ್ಥಳಕ್ಕೆ ಕಳುಹಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

### ಕೊಟ್ಟಾಯಂನಲ್ಲಿ ಭೂಕುಸಿತಕ್ಕೆ ಮಹಿಳೆ ಬಲಿ

ಕೊಟ್ಟಾಯಂ ಜಿಲ್ಲೆಯ ಟೀಕಾಯ್ ಸಮೀಪದ ವೇಲಾಥುಸ್ಸೆರಿಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ತಮಿಳುನಾಡಿನ 35 ವರ್ಷದ ಸಂಗೀತಾ ಅರುಲ್ ಲಾಲ್ ಮೃತಪಟ್ಟಿದ್ದಾರೆ. ಚೆನ್ನೈನ ಜವಾಹರ್ ನಗರದ ನಿವಾಸಿಯಾಗಿದ್ದ ಅವರು ಪುಟ 2

## ಮಾರಕಾಸ್ತ್ರ ಹಿಡಿದು ಪುಂಡರ ಅಟ್ಟಹಾಸ ಎಂಟು ಮಂದಿ ಗಾಯ

ಬೆಂಗಳೂರು, ಸೆ.21– ಉತ್ತರಹಳ್ಳಿ ಅರಹಳ್ಳಿ ಗೇಟ್ ಬಳಿ ಮಾರಕಾಸ್ತ್ರ ಹಿಡಿದು ಬಂದ ಆರು ಮಂದಿ ದುಷ್ಕರ್ಮಿಗಳು ರಸ್ತೆಯಲ್ಲಿ ಸಿಕ್ಕವರಿಗೆ ಏಕಾಏಕಿ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ನಡೆದಿದೆ.

ಮೂರು ಬೈಕ್‌ಗಳಲ್ಲಿ ಮಾಸ್ಕ್ ಧರಿಸಿ ಬಂದಿದ್ದ ಆರು ಮಂದಿ ಲಾಂಗು, ಮಚ್ಚು ಸೇರಿದಂತೆ ಮಾರಕಾಸ್ತ್ರಗಳಿಂದ ಅಂಗಡಿ ಮುಂಭಾಗದಲ್ಲಿ ನಿಂತಿದ್ದವರ ಮೇಲೆ ದಾಳಿ ನಡೆಸಿದ್ದಾರೆ. ರಸ್ತೆಯಲ್ಲಿ ಸಿಕ್ಕ ಸುಮಾರು ಎಂಟು ಮಂದಿಯ ಮೇಲೆ ಹಲ್ಲೆ ನಡೆಸಿದ ಬಳಿಕ ಆರೋಪಿಗಳು ಬೈಕ್‌ಗಳಲ್ಲಿ ಪರಾರಿಯಾಗಿದ್ದಾರೆ.

ಘಟನೆಯಲ್ಲಿ ಮೀನು ಅಂಗಡಿ ಮಾಲೀಕ ಬಾಲಸುಬ್ರಹ್ಮಣ್ಯಂ ಹಾಗೂ ರವಿ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ರವಿ ಅವರ ಕಿವಿ ಹಾಗೂ ಕೈಗೆ ಗಂಭೀರ ಗಾಯಗಳಾಗಿದ್ದು, ಗಾಯಾಳುಗಳನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಯಾವುದೇ ಸ್ಪಷ್ಟ ಕಾರಣವಿಲ್ಲದೆ ಅಪರಿಚಿತರ ಮೇಲೆ ದಾಳಿ ನಡೆಸಲಾಗಿದೆ. ಘಟನೆ ಕುರಿತು ಮಾಹಿತಿ ಪಡೆದ ಸುಬ್ರಮಣ್ಯಪುರ ಠಾಣೆ ಪೊಲೀಸರು ತಡರಾತ್ರಿ ಘಟನಾ ಸ್ಥಳ ಹಾಗೂ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆರೋಪಿಗಳ ಪತ್ತೆಗಾಗಿ ಸುಬ್ರಮಣ್ಯಪುರ ಠಾಣೆ ಪೊಲೀಸರು ಶೋಧ ಕಾರ್ಯ ಮುಂದುವರಿಸಿದ್ದಾರೆ.

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)

## ದೇವರ ನಾಡಲ್ಲಿ ಹಠಾತ್ ಪ್ರವಾಹ: ೯ ಮಂದಿ ಸಾವು

ಅವರು ಸ್ನೇಹಿತೆಯೊಂದಿಗೆ ವಾಗಮನ್‌ನಿಂದ ಹಿಂದಿರುಗುತ್ತಿದ್ದ ವೇಳೆ ಘಟನೆ ನಡೆದಿದೆ.ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಸಂಗೀತಾ ಅವರ ಮೇಲೆ ರಸ್ತೆಗೆ ಕುಸಿದು ಬಂದ ಮಣ್ಣು ಬಿದ್ದಿದೆ. ಅವರ ಸ್ನೇಹಿತೆ ಅಪಾಯದಿಂದ ಪಾರಾದರೂ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಡುಕ್ಕಿ ಜಿಲ್ಲೆಯ ಕೊಟ್ಟಕಂಬೂರ್‌ನಲ್ಲಿ ಮಳೆಯಿಂದ ರಕ್ಷಿಸಿಕೊಳ್ಳಲು ಶೆಡ್‌ನಲ್ಲಿ ಆಶ್ರಯ ಪಡೆದಿದ್ದ ಮೂವರು ಭೂಕುಸಿತಕ್ಕೆ ಸಿಲುಕಿದ್ದಾರೆ. ಮಧ್ಯಾಹ್ನ ಸುಮಾರು 3.30ರ ವೇಳೆಗೆ ಬೆಟ್ಟದ ಮೇಲ್ಭಾಗದಿಂದ ಭಾರಿ ಪ್ರಮಾಣದ ಮಣ್ಣು ಕುಸಿದು ಶೆಡ್ ಮೇಲೆ ಬಿದ್ದಿದೆ. ಘಟನೆಯಲ್ಲಿ ಇಬ್ಬರು ಮೃತಪಟ್ಟಿದ್ದು, ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೇರಳದ ಹಲವು ಭಾಗಗಳಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಭಾರಿ ಮಳೆಯ ಮುನ್ಸೂಚನೆ ನೀಡಿದೆ. ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲೆಗಳಿಗೆ ನೀಡಲಾಗಿದ್ದ ಮಳೆ ಮುನ್ಸೂಚನೆಯನ್ನು ಆರೆಂಜ್ ಅಲರ್ಟ್‌ಗೆ ಹೆಚ್ಚಿಸಲಾಗಿದೆ.

ಮುಖ್ಯಮಂತ್ರಿ ಸತೀಶನ್ ಅವರ ಸೂಚನೆಯಂತೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತೆ ವಿಗ್ನೇಶ್ವರಿ ಐಎಎಸ್ ಅವರು ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ. ಹವಾಮಾನ ಪರಿಸ್ಥಿತಿ ಕುರಿತು ಇಡುಕ್ಕಿ ಮತ್ತು ಕೊಟ್ಟಾಯಂ ಜಿಲ್ಲೆಗಳ ಜನರಿಗೆ ಎಸ್‌ಎಂಎಸ್ ಎಚ್ಚರಿಕೆಗಳನ್ನು ಕಳುಹಿಸಲಾಗಿದೆ. ಅಪಾಯದ ಪ್ರದೇಶಗಳಲ್ಲಿರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದು ಸೇರಿದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

## ರೈತರ ರಕ್ಷಣೆ ನಮ್ಮ ಬದ್ಧತೆ: ಡಿಕೆಶಿ

ಸರ್ಕಾರಕ್ಕೆ ಸರ್ವಪಕ್ಷಗಳ ನಿಯೋಗ ಕರೆದೊಯ್ಯಬೇಕು ಹೀಗೆ ಹತ್ತು ಹಲವು ಸಲಹೆಗಳು ಬಂದಿವೆ. ಸರ್ಕಾರವೇ ಈ ಬಗ್ಗೆ ತೀರ್ಮಾನ ಮಾಡುವುದು ಬೇಡ. ವಿಧಾನಸಭೆಯಲ್ಲಿ ಈ ಬಗ್ಗೆ ತೀರ್ಮಾನ ಮಾಡೋಣ ಎಂಬ ಆಶಯದೊಂದಿಗೆ ಅಧಿವೇಶನ ಕರೆದಿದ್ದೇನೆ. ರೈತರ ಬದುಕನ್ನು ರಕ್ಷಿಸಲು ಏನು ಮಾಡಬೇಕು ಎಂಬ ಸಲಹೆಗಳನ್ನು ಜನಪ್ರತಿನಿಧಿಗಳು ನೀಡಿದರೆ ಅದನ್ನು ಸರ್ಕಾರ ಸ್ವೀಕಾರ ಮಾಡುತ್ತದೆ ಎಂದರು.

ಈ ಹಿಂದೆ ಅಧಿವೇಶನ ನಡೆದಿತ್ತಾದರೂ ಪ್ರತಿಪಕ್ಷಗಳ ರಾಜಕೀಯ ಉದ್ದೇಶದಿಂದ ಏನನ್ನೂ ಚರ್ಚೆ ಮಾಡಲು ಆಗಲಿಲ್ಲ. ಜನರ ಭಾವನೆ ಬದುಕು ಮುಖ್ಯ. ಈಗಾಗಲೇ ರಾಜ್ಯದಲ್ಲಿ ಬರ ಇದೆ. 123 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದ್ದೇವೆ. ಹಾಗಾಗಿ ಈ ಎಲ್ಲ ವಿಚಾರಗಳ ಬಗ್ಗೆ ಚರ್ಚಿಸಲು ಅಧಿವೇಶನ ಕರೆದಿದ್ದೇವೆ. ನಾನು ಬರಪೀಡಿತ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದೇನೆ. ಶಾಸಕರುಗಳ ಜತೆಯೂ ಸಭೆಗಳನ್ನು ನಡೆಸಿ ಚರ್ಚಿಸಿದ್ದೇನೆ ಎಂದರು

ರೈತರಿಗೆ ತೊಂದರೆಯಾದರೆ ಅವರ ನೋವಿಗೆ ನಾವು ಸ್ಪಂದಿಸಬೇಕು. ಈ ಹಿಂದಿನ ಅಧಿವೇಶನದಲ್ಲಿ ಪ್ರತಿಪಕ್ಷಗಳು ರಾಜಕೀಯವಾಗಿ ಸಚಿವರೊಬ್ಬರ ರಾಜೀನಾಮೆಗೆ ಆಗ್ರಹಿಸಿ ಹೋರಾಟ ಮಾಡಿದ್ದರಿಂದ ಯಾವ ವಿಚಾರವೂ ಚರ್ಚೆಯಾಗಲಿಲ್ಲ. ನಿರಪರಾಧಿ ಸಚಿವರೊಬ್ಬರು ರಾಜೀನಾಮೆ ನೀಡಿದಂತಾಯಿತು ಎಂದು ಹೇಳಿದರು.

ನಾನು ಪಶ್ಚಿಮಘಟ್ಟದ ಪ್ರದೇಶದಲ್ಲೂ ಕಳೆದ 3–4 ದಿನಗಳಲ್ಲಿ ನಾನು ಪ್ರವಾಸ ಕೈಗೊಂಡು ಕಸ್ತೂರಿ ರಂಗನ್ ವರದಿ ಅಲ್ಲಿನ ರೈತರ ದುಃಖ ದುಮ್ಮಾನಗಳನ್ನು ಕೇಳಿ ಬಂದಿದ್ದೇನೆ. ಈ ವಿಚಾರದಲ್ಲಿ ಸರ್ಕಾರ ನಡೆ ನಿಲುವು ಏನಿರಬೇಕು ಎಂಬ ಬಗ್ಗೆ ಈ ಸದನದಲ್ಲೇ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

## ಆಡಳಿತ -ವಿಪಕ್ಷಗಳ ವಾಕ್ಸಮರ

ನಾಯಕರಾದ ಆರ್. ಅಶೋಕ್ ಅವರು ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಪ್ರಸ್ತಾಪಕ್ಕೆ ಮುಂದಾದಾಗ ಸಚಿವರಾದ ಕೃಷ್ಣಬೈರೇಗೌಡ ಅವರು ಎದ್ದುನಿಂತು ನಿಲುವಳಿ ಸೂಚನೆ ಅವಶ್ಯ ಇಲ್ಲ. ಅದೇ ವಿಚಾರದ ಬಗ್ಗೆ ಸದನದಲ್ಲಿ ವಿಶೇಷ ಚರ್ಚೆ ಇದೆ. ನಿಲುವಳಿ ಕೈಗೆತ್ತಿಕೊಳ್ಳಲು ಬರಲ್ಲ ಎಂದು ಹೇಳಿದರು.

ಆದರೆ ಅದನ್ನು ಒಪ್ಪದ ಪ್ರತಿಪಕ್ಷ ನಾಯಕರು ನಿಲುವಳಿ ಪ್ರಸ್ತಾವಕ್ಕೆ ಅವಕಾಶ ಕೊಡಬೇಕು. ನಂತರ ಅದು ಬರುತ್ತದೋ, ಇಲ್ಲವೋ ಎಂಬುದನ್ನು ಸಭಾಧ್ಯಕ್ಷರು ತೀರ್ಮಾನ ಮಾಡಬೇಕು. ಅದು ಬಿಟ್ಟು ಅವಕಾಶವೇ ಕೊಡುವುದಿಲ್ಲ ಎನ್ನುವುದು ಸರಿಯಲ್ಲ ಎಂದು ಹೇಳಿದರು.

ಈ ಹಂತದಲ್ಲಿ ಬಿಜೆಪಿಯ ಸುನೀಲ್‌ಕುಮಾರ್, ಡಾ. ಸಿ.ಅಶ್ವತ್ಥ್‌ನಾರಾಯಣ, ಅರವಿಂದ ಬೆಲ್ಲದ ಇವರೆಲ್ಲಾ ಪ್ರತಿಪಕ್ಷನಾಯಕರ ಬೆಂಬಲಕ್ಕೆ ನಿಂತು, ಮೊದಲು ಮಾತನಾಡಲು ಅವಕಾಶ ಕೊಡಿ, ನಂತರ ತೀರ್ಮಾನ ಮಾಡಿ. ನಿಲುವಳಿ ಸೂಚನೆಯಡಿ ಮಾತನಾಡಲು ಅವಕಾಶ ಕೊಡದೇ ತೀರ್ಮಾನ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಸದನದಲ್ಲಿ ಸ್ವಲ್ಪಮಟ್ಟಿಗೆ ಗದ್ದಲದ ವಾತಾವರಣ ರೂಪುಗೊಂಡಿತು.

ನಂತರ ಮಾತು ಮುಂದುವರೆಸಿದ ಪ್ರತಿಪಕ್ಷನಾಯಕ ಆರ್. ಅಶೋಕ್, ವಿಶೇಷ ಅಧಿವೇಶನ ಇಲ್ಲವೇ ಮುಂದುವರೆದ ಅಧಿವೇಶನ ಎಂಬದುನ್ನು ಸ್ಪಷ್ಟಪಡಿಸಿ. ನಾನು ನನ್ನ ನಿಲುವಳಿ ಸೂಚನಾ ಪ್ರಸ್ತಾವವನ್ನು ವಾಪಸ್ ಪಡೆಯಲು ಸಿದ್ಧ. ಇದರಲ್ಲಿ ನನಗೆ ಯಾವುದೇ ಪ್ರತಿಷ್ಠೆ ಇಲ್ಲ. ಕಸ್ತೂರಿ ರಂಗನ್ ವರದಿಯ ಬಗ್ಗೆ ಒಂದು ದಿನ ಅಲ್ಲ, ಮೂರು ದಿನ ಮಾತನಾಡಲು ನಾವು ಸಿದ್ದರಿದ್ದೇವೆ. ಆದರೆ ಸರ್ಕಾರವೇ ಒಂದು ದಿನಕ್ಕೆ ಚರ್ಚೆಯನ್ನು ಸೀಮಿತಗೊಳಿಸಿದೆ ಎಂದು ಹೇಳಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಸಚಿವ ಕೃಷ್ಣಬೈರೇಗೌಡ ಅವರು, ವಿಶೇಷ ಅಧಿವೇಶನ, ಮುಂದುವರೆದ ಅಧಿವೇಶನ ಎಲ್ಲವೂ ಸರಿ. ಇದು ಮುಂದುವರೆದ ಅಧಿವೇಶನ ಎಂದು ಹೇಳಿದಾಗ, ಪ್ರತಿಪಕ್ಷನಾಯಕ ಆರ್. ಅಶೋಕ್ ಅವರು ತಾವು ನಿಲುವಳಿ ಸೂಚನೆ ಪ್ರಸ್ತಾವವನ್ನು ವಾಪಸ್ ಪಡೆದಿರುವುದಾಗಿ ಹೇಳಿ, ಕಸ್ತೂರಿ ರಂಗನ್ ವರದಿಯ ವಿಶೇಷ ಚರ್ಚೆಗೆ ಅನುವು ಮಾಡಿಕೊಟ್ಟರು.

## ಅಧಿಕಾರಿಗಳಿಗೆ ಲಂಚ ಹೇಳಿಕೆ: ರಾಗ ಬದಲಿಸಿದ ಶಿವಲಿಂಗೇಗೌಡ

ಹೇಳಿದ್ದರು. ನಿಮ್ಮ ಕೆಲಸವೆಂದ ಮೇಲೆ ಸರಿಯಾಗಿ ಮಾತನಾಡಿ, ಗೌರವ ನೀಡಿ ಎಂದು ನಾನು ಹೇಳಿದ್ದೇನೆ. ಇದನ್ನು ಬೇರೆ ರೀತಿಯಲ್ಲಿ ಅರ್ಥೈಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಈ ವಿಚಾರವನ್ನು ದೊಡ್ಡ ವಿವಾದವನ್ನಾಗಿ ಮಾಡುವ ಅಗತ್ಯವಿಲ್ಲ. ಸಾರ್ವಜನಿಕರ ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸುವುದು ಜನಪ್ರತಿನಿಧಿಗಳ ಕರ್ತವ್ಯ. ರೈತರ ಸಮಸ್ಯೆಗಳ ಬಗ್ಗೆ ಯಾರೂ ಮಾತನಾಡುವುದಿಲ್ಲ, ಆದರೆ ಈ ವಿಚಾರವನ್ನು ಮಾತ್ರ ದೊಡ್ಡದಾಗಿ ಚರ್ಚಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರು ಈ ವಿಚಾರವನ್ನು ಏಕೆ ಕೇಳುತ್ತಾರೆ. ತಾವು ಸಾರ್ವಜನಿಕರ ಕೆಲಸಗಳನ್ನು ಮಾಡುವುದು ತಪ್ಪೇನು ಎಂದು ಪ್ರಶ್ನಿಸಿದ ಅವರು, ರೈತರ ಸಮಸ್ಯೆ ಬಗೆಹರಿಸುವ ಉದ್ದೇಶದಿಂದಲೇ ಅಧಿಕಾರಿಗಳಿಗೆ ಸೂಕ್ತವಾಗಿ ನಡೆದುಕೊಳ್ಳುವಂತೆ ಸೂಚಿಸಿದ್ದಾಗಿ ಸ್ಪಷ್ಟಪಡಿಸಿದರು.

## ಪರಿಷತ್‌ನಲ್ಲಿ ಕಸ್ತೂರಿ ರಂಗನ್ ವರದಿ ಟಿಪ್ಪಣಿ ಮಂಡನೆ

ಎಂದು ಪರಮೇಶ್ವರ್ ಹೇಳಿದರು.

ವಿಶೇಷ ಅಧಿವೇಶನದಲ್ಲಿ ವರದಿ ಕುರಿತು ಸಮಗ್ರ ಚರ್ಚೆ ನಡೆಸುವ ಉದ್ದೇಶವಿದೆ ಎಂದು ಅವರು ಈ ಹಿಂದೆ ಕೂಡ ಹೇಳಿದ್ದರು ಎಂದರು. ಈ ವೇಳೆ, ಪರಮೇಶ್ವರ್ ಅವರು ಪ್ರತಿಪಕ್ಷಗಳ ನಿಲುವನ್ನೇ ಪ್ರಶ್ನಿಸಿ, ವಿಪಕ್ಷಗಳು ಕಸ್ತೂರಿರಂಗನ್ ವರದಿಯ ಪರವೋ ಅಥವಾ ವಿರೋಧವೋ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಪಕ್ಷಗಳು ತಮ್ಮ ನಿಲುವನ್ನು ಹೇಳದಿದ್ದರೆ, ಜನರಿಗೆ ಅವರು ವರದಿಯ ಪರವಾಗಿದ್ದಾರೆ ಎಂಬ ಸಂದೇಶ ಹೋಗಬೇಕಾಗುತ್ತದೆ ಎಂದು ಅವರು ಹೇಳಿದರು. ಈ ಹೇಳಿಕೆ ಸದನದಲ್ಲಿ ಮತ್ತಷ್ಟು ರಾಜಕೀಯ ಬಿಸಿ ಏರಲು ಕಾರಣವಾಯಿತು.

ಪರಮೇಶ್ವರ್ ಅವರ ಪ್ರಸ್ತಾಪದ ನಡುವೆಯೇ ವಿಪಕ್ಷ ಸದಸ್ಯರು ಕಸ್ತೂರಿರಂಗನ್ ವರದಿಗೆ ತಮ್ಮ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಆಡಳಿತ ಪಕ್ಷ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರ ನಡೆಯಿತು.

ಬಿಜೆಪಿ ನಾಯಕ ಸಿ.ಟಿ. ರವಿ ಅವರು ಕಸ್ತೂರಿರಂಗನ್ ವರದಿ ಹಾಗೂ ಅದರ ಹಿನ್ನೆಲೆಯ ಕುರಿತು ಕಾಂಗ್ರೆಸ್ ವಿರುದ್ಧ ಹೇಳಿಕೆ ನೀಡಿದರು. ವರದಿಯ ವಿಚಾರದಲ್ಲಿ ಕಾಂಗ್ರೆಸ್‌ನ ನಿಲುವನ್ನು ಪ್ರಶ್ನಿಸಿದ ಅವರು, ಈ ಕುರಿತು ವಿಷಾದ ವ್ಯಕ್ತಪಡಿಸಬೇಕು ಎಂಬ ಅಭಿಪ್ರಾಯವನ್ನು ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಕ್ತಪಡಿಸಿದರು. ಇದರ ನಡುವೆ ಸದನದಲ್ಲಿ ಘೋಷಣೆಗಳು ಮುಂದುವರಿದಿದ್ದರಿಂದ ಕಲಾಪದ ಸಹಜ ಪ್ರಕ್ರಿಯೆಗೆ ಅಡ್ಡಿಯಾಯಿತು.

ಸೆ.21ರಿಂದ 23ರವರೆಗೆ ನಡೆಯುತ್ತಿರುವ ವಿಶೇಷ ಅಧಿವೇಶನವನ್ನು ಮುಖ್ಯವಾಗಿ ಕಸ್ತೂರಿರಂಗನ್ ವರದಿ ಮತ್ತು ರಾಜ್ಯದ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಕರೆಯಲಾಗಿದೆ. ಸೆ.21ರಂದು ಕಸ್ತೂರಿರಂಗನ್ ವರದಿ, ನಂತರದ ದಿನಗಳಲ್ಲಿ ರೈತರ ಸಮಸ್ಯೆಗಳು ಮತ್ತು ಬರಕ್ಕೆ ಸಂಬಂಧಿಸಿದ ವಿಷಯಗಳ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ.

## ಮೇಲ್ಮನೆಯಲ್ಲಿ ವಂದೇ ಮಾತರಂ ಕೋಲಾಹಲ, ಗದ್ದಲ

ರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತಿತರ ಪ್ರಮುಖ ಸಂವಿಧಾನಿಕ ಗಣ್ಯರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡಲಾಗುತ್ತದೆ ಎಂದು ತಿಳಿಸಿದರು.

ಈ ಹೇಳಿಕೆ ಬಿಜೆಪಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು. ಸಭಾಪತಿಗೆ ಏನೂ ಮಾಡಲು ಸಾಧ್ಯವಿಲ್ಲ ಎಂಬ ರೀತಿಯಲ್ಲಿ ಸಭಾ ನಾಯಕರು ನೀಡಿದ ಹೇಳಿಕೆಯನ್ನು ಬಿಜೆಪಿ ಸದಸ್ಯರು ಪ್ರಶ್ನಿಸಿದರು.

ಸಭಾಪತಿಗಳ ಕೈಯಲ್ಲಿ ಏನೂ ಇಲ್ಲ ಎಂದು ಸಭಾ ನಾಯಕರು ಹೇಳುತ್ತಾರೆ. ನೀವು ಕಾಂಗ್ರೆಸ್ ಸಭಾಪತಿಗಳಾ? ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು. ಯತೀಂದ್ರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ, ಈ ವಿಚಾರದಲ್ಲಿ ಸಭಾಪತಿಯೇ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ಸಿ.ಟಿ. ರವಿ, ಸಭಾಪತಿ ಹೆಲ್ಪ್‌ಲೆಸ್ ಹಾಗಾದ್ರೆ? ಎಂದು ಪ್ರಶ್ನಿಸಿದರೆ, ಛಲವಾದಿ ನಾರಾಯಣಸ್ವಾಮಿ ಅವರು ಸಭಾಪತಿಯ ಅಧಿಕಾರ ಮತ್ತು ಸದನದ ಸ್ವಾಯತ್ತತೆಯ ಕುರಿತು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿದರು.

ಇದರಿಂದ ಯತೀಂದ್ರ ಮತ್ತು ಛಲವಾದಿ ನಾರಾಯಣಸ್ವಾಮಿ ನಡುವೆ ಮಾತಿನ ಚಕಮಕಿ ನಡೆಯಿತು. ಸಿ.ಟಿ. ರವಿ ಮತ್ತಷ್ಟು ತೀವ್ರವಾಗಿ ಪ್ರತಿಕ್ರಿಯಿಸಿ, ಸಭಾಪತಿ ಪೀಠ ಸಂವಿಧಾನ ಪೀಠವೋ? ಕಾಂಗ್ರೆಸ್ ಪೀಠವೋ? ಎಂದು ಪ್ರಶ್ನಿಸಿದರು.

### ಬಿಜೆಪಿ ತೀವ್ರ ವಿರೋಧ:

ಕಾಂಗ್ರೆಸ್ ಹಿರಿಯ ಸದಸ್ಯ ಬಿ.ಕೆ. ಹರಿಪ್ರಸಾದ್, ಈ ಸದನದಲ್ಲಿ ಈ ಹಿಂದೆ ಎರಡು ಚರಣಗಳೇ ಹಾಡಲಾಗುತ್ತಿತ್ತು ಎಂದು ಹೇಳಿದರು. ಬಿಜೆಪಿ ಸದಸ್ಯರು ಸಭಾಪತಿ ಬಂದ ಸಂದರ್ಭದಲ್ಲಿ ಪೂರ್ಣ ಗೀತೆ ಹಾಡಲು ಆರಂಭಿಸಿದ್ದಾರೆ ಎಂದು ಅವರು ಆಕ್ಷೇಪಿಸಿದರು.

ಇದಕ್ಕೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಇದು ಕಾಂಗ್ರೆಸ್ ಕಚೇರಿಯಲ್ಲ, ವಿಧಾನಪರಿಷತ್ ಎಂದು ಆಕ್ಷೇಪಿಸಿದರು. ಹರಿಪ್ರಸಾದ್ ಅವರ ಮಾತಿನ ನಡುವೆ ಘೋಷಣೆಗಳು ಮೊಳಗಿದವು. ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಕೆಲಕಾಲ ತೀವ್ರವಾಗ್ವಾದ ನಡೆಯಿತು.

### ಪರಮೇಶ್ವರ್ ಮನವಿ:

ಗದ್ದಲದ ನಡುವೆ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಸದನದ ಉದ್ದೇಶವನ್ನು ನೆನಪಿಸಿದರು. ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗಿದ್ದು, ಕಸ್ತೂರಿರಂಗನ್ ವರದಿ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಲಾಗಿದೆ. ಹೀಗಾಗಿ ಸದಸ್ಯರು ಸಹಕರಿಸಿ ಬರ, ರೈತರ ಸಮಸ್ಯೆಗಳು ಮತ್ತು ಕಸ್ತೂರಿರಂಗನ್ ವರದಿ ಕುರಿತು ಚರ್ಚೆ ನಡೆಸಬೇಕು ಎಂದು ಮನವಿ ಮಾಡಿದರು.

ಪರವಾಗಿಲ್ಲ, ವಿರೋಧವಾಗಿಲ್ಲ? ನಿಮ್ಮ ಅಭಿಪ್ರಾಯವನ್ನು ಹೇಳಿ. ಕಸ್ತೂರಿರಂಗನ್ ವರದಿ ಬಗ್ಗೆ ಚರ್ಚೆ ಮಾಡಿ, ರಾಜ್ಯದ ಹಿತದ ಬಗ್ಗೆ ಮಾತನಾಡಿ, ಟಿ ಎಂಬ ಅರ್ಥದಲ್ಲಿ ಪರಮೇಶ್ವರ್ ಪ್ರತಿಪಕ್ಷಕ್ಕೆ ಮನವಿ ಮಾಡಿದರು.

ಆದರೆ ಬಿಜೆಪಿ ಸದಸ್ಯರು ಕಸ್ತೂರಿ ರಂಗನ್ ವರದಿಯ ಜಾರಿಗೆ ತಮ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು. ಸಿ.ಟಿ. ರವಿ, ಕಸ್ತೂರಿರಂಗನ್ ವರದಿ ಕಾಂಗ್ರೆಸ್ ಸರ್ಕಾರದ ಹಿಂದಿನ ನೀತಿಗಳ ಪರಿಣಾಮ ಎಂಬ ಆರೋಪ ಮಾಡುತ್ತಾ ಪರಮೇಶ್ವರ್ ಅವರನ್ನು ತರಾಟೆಗೆ ತೆಗೆದುಕೊಂಡರು. ಇದರಿಂದ ಮತ್ತೆ ಎರಡೂ ಬದಿಯ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.



ನಗರದ ಅರಮನೆ ಮೈದಾನದಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ) ಇವರ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿ ಹಮ್ಮಿಕೊಳ್ಳಲಾಗಿರುವ ರಾಷ್ಟ್ರಮಟ್ಟದ 'ನಮ್ಮ ಸರಸ್ ಮೇಳಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಭೇಟಿ ನೀಡಿದರು.

## ಗದಗ್‌ನ ೩ ತಾಲೂಕು ಬರಪೀಡಿತ ಪಟ್ಟಿಗೆ ಸೇರಿಸಲು ಸಿಎಂಗೆ ಪತ್ರ

ಗದಗ.ಸೆ.21– ಗದಗ, ರೋಣ ಹಾಗೂ ಮುಂಡರಗಿ ತಾಲೂಕುಗಳನ್ನು ಬರಪೀಡಿತ ತಾಲೂಕುಗಳ ಪಟ್ಟಿಗೆ ತಕ್ಷಣ ಸೇರಿಸುವಂತೆ ಗದಗ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪತ್ರ ಬರೆದಿದ್ದಾರೆ

ಮೂರು ತಾಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಪರಿಗಣಿಸಿ, ರೈತರಿಗೆ ಅಗತ್ಯ ಪರಿಹಾರ ಹಾಗೂ ನೆರವು ಒದಗಿಸುವ ನಿಟ್ಟಿನಲ್ಲಿ ಕೂಡಲೇ ಬರಪೀಡಿತ ತಾಲೂಕುಗಳೆಂದು ಘೋಷಿಸುವಂತೆ ಪತ್ರದಲ್ಲಿ ಸಚಿವ ಬಸವರಾಜ ರಾಯರೆಡ್ಡಿ ಒತ್ತಾಯಿಸಿದ್ದಾರೆ.

ಇದರ ನಡುವೆ, ನಿನ್ನೆ ಮುಳಗುಂದದಲ್ಲಿ ರೈತರು ಬೃಹತ್ ಪ್ರತಿಭಟನೆ ನಡೆಸಿದ್ದು, ಹಿರಿಯ ಶಾಸಕ ಡಾ. ಎಚ್.ಕೆ. ಪಾಟೀಲ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮೂರು ತಾಲೂಕು ಬರಪೀಡಿತ ತಾಲೂಕುಗಳಾಗಿ ಘೋಷಿಸದಿದ್ದರೆ ರಾಜೀನಾಮೆ ನೀಡುವುದಾಗಿ ಪಾಟೀಲ್ ಹೇಳಿದ್ದರು.

ಶಾಸಕ ಡಾ. ಎಚ್.ಕೆ. ಪಾಟೀಲ್ ರಾಜೀನಾಮೆ ಹೇಳಿಕೆಯ ಬೆನ್ನಲ್ಲೇ ಸಚಿವ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪತ್ರ ಬರೆದಿದ್ದು, ಗದಗ, ರೋಣ ಹಾಗೂ ಮುಂಡರಗಿ ತಾಲೂಕುಗಳನ್ನು ತಕ್ಷಣ ಬರಪೀಡಿತ ತಾಲೂಕುಗಳೆಂದು ಘೋಷಿಸಿ, ರೈತರಿಗೆ ಅಗತ್ಯ ಪರಿಹಾರ ಮತ್ತು ನೆರವು ನೀಡುವಂತೆ ಆಗ್ರಹಿಸಿದ್ದಾರೆ.

## ಐವರು ಸಜಾಬಂಧಿಗಳ ಬ್ಯಾರಕ್ ಗೆ ಪವಿತ್ರಾ ಗೌಡ ಶಿಫ್ಟ್



ಬೆಂಗಳೂರು,ಸೆ.21–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎ1 ಆರೋಪಿ ಪವಿತ್ರಾ ಗೌಡರನ್ನು ಪರಪ್ಪನ ಅಗ್ರಹಾರ ಜೈಲಿನಲ್ಲಿ ಐವರು ಸಜಾಬಂಧಿಗಳಿರುವ ಬ್ಯಾರಕ್ ಗೆ ಬದಲಾವಣೆ ಮಾಡಲಾಗಿದೆ.

ಸೆಷನ್ಸ್ ಕೋರ್ಟ್ ಸೂಚನೆಯಂತೆ ಜೈಲಾಧಿಕಾರಿಗಳು ಈ ವ್ಯವಸ್ಥೆ ಮಾಡಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಅತ್ಯಾಚಾರ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಇದ್ದ ಬ್ಯಾರಕ್‌ನಲ್ಲಿ ಮೊಬೈಲ್ ಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಪವಿತ್ರಾಗೌಡರನ್ನು ಹಲವು ಸಜಾಬಂಧಿಗಳು ಇರುವ ಬ್ಯಾರಕ್‌ನಲ್ಲಿ ಇರಿಸಲಾಗಿತ್ತು.

ಈ ಬ್ಯಾರಕ್‌ನಲ್ಲಿ ಹಲವು ಅಪರಾಧಿಗಳೊಂದಿಗೆ ಒಂದೇ ಶೌಚಾಲಯ ಬಳಸಬೇಕಾಗಿದೆ. ಅಲ್ಲದೆ, ಇನ್ಸ್‌ಪೆಕ್ಷನ್ ನಡೆಯುತ್ತಿರುವುದರಿಂದ ಕೈದಿಗಳು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದಾರೆ. ಹೀಗಾಗಿ ಸೌಲಭ್ಯ ಹಾಗೂ ಸ್ವಚ್ಛತೆ ಇರುವ ಬ್ಯಾರಕ್‌ಗೆ ವರ್ಗಾವಣೆ ಮಾಡುವಂತೆ ಪವಿತ್ರಾ ಗೌಡ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿಯನ್ನು ಪರಿಗಣಿಸಿದ ಕೋರ್ಟ್, ಸೌಲಭ್ಯ ಇರುವ ಬ್ಯಾರಕ್‌ಗೆ ವರ್ಗಾವಣೆ ಮಾಡುವಂತೆ ಜೈಲು ಅಧಿಕಾರಿಗಳಿಗೆ ಸೂಚಿಸಿತ್ತು. ಜೈಲು ಮ್ಯಾನ್ಯುವಲ್ ಪ್ರಕಾರ ಇದೀಗ ಐವರು ಸಜಾಬಂಧಿಗಳು ಇರುವ ಬ್ಯಾರಕ್‌ಗೆ ಪವಿತ್ರಾ ಗೌಡ ಅವರನ್ನು ಶಿಫ್ಟ್ ಮಾಡಲಾಗಿದೆ.




ನಗರದ ಯುನಿವರ್ಸಿಟಿ ಲಿವರ್ ಪೂಲ್ ನಲ್ಲಿ ಇಂದು ನಡೆದ ಫೌಂಡಿಂಗ್ ಕ್ಲಾಸ್ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ರವರು ಉದ್ಘಾಟಿಸಿದರು. ವಿವಿಯ ಮುಖ್ಯ ಆಪರೇಟಿಂಗ್ ಅಧಿಕಾರಿ ಅನಿಲ್.ಎಸ್. ಕುಮಾರ್ ಮತ್ತಿತರರು ಇದ್ದಾರೆ.

## ಪೌರಕಾರ್ಮಿಕರಿಗೆ ಸೀರೆ ವಿತರಣೆ



ಕೆ.ಆರ್.ಪುರ, ಸೆ. 21– ಮಾಜಿ ಶಸಕರಾದ ಹೆಚ್. ಎಂ. ರಮೇಶ್ ಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ, ಬಾಬುಸಾಪಾಳ್ಯ ವಾರ್ಡ 4ರಲ್ಲಿ ವಿವಿಧ ಜನಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಅನ್ನದಾನ ಕಾರ್ಯಕ್ರಮ, ಪೌರಕಾರ್ಮಿಕರಿಗೆ ಸೀರೆ ವಿತರಣೆ ಹಾಗೂ ಸಾರ್ವಜನಿಕರಿಗಾಗಿ ಉಚಿತ ಫುಟ್ ಪಲ್ಸ್ ಥೆರಪಿ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ನಗರ ಹಾಗೂ ಬಡಾವಣೆಗಳ ಸ್ವಚ್ಛತೆಗಾಗಿ ಪ್ರತಿದಿನ ಶ್ರಮಿಸುತ್ತಿರುವ ಪೌರಕಾರ್ಮಿಕರ ಸೇವೆಯನ್ನು ಸ್ಮರಿಸಿ, ಅವರಿಗೆ ಗೌರವಪೂರ್ವಕವಾಗಿ ಸೀರೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ಬಾಬುಸಾಪಾಳ್ಯ ವಾರ್ಡ 4 ಜೆಡಿಎಸ್ ಆಕಾಂಕ್ಷಿ ದಿವ್ಯಾ ಶಿವಕುಮಾರ್ ಮುಖಂಡರಾದ ಶಿವಕುಮಾರ್ ಗೌಡ ಜೆಡಿಎಸ್ ನಾಯಕರು, ಬಾಬುಸಾಪಾಳ್ಯ ಅವರ ನೇತೃತ್ವದಲ್ಲಿ ಆಯೋಜಿಸಲಾಯಿತು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನ್ನದಾನ ಮಾಡಲಾಯಿತು ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಉಚಿತ ಫುಟ್ ಪಲ್ಸ್ ಥೆರಪಿ ಸೇವೆಯನ್ನು ಒದಗಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಜೆಡಿಎಸ್ ಕಾರ್ಯಾಧ್ಯಕ್ಷರಾದ ತುಳಸಿರಾಮ್ ,ಕೆ.ಆರ್. ಪುರಂ ಜೆಡಿಎಸ್ ಅಧ್ಯಕ್ಷ ಲಕ್ಷ್ಮಣ್ ,ಮುಖಂಡರಾದ ರಮೇಶ್ ಗೌಡ, ಸಂಧ್ಯಾ ಜಯಶೀಲ ಕುಮಾರ್ ಹಾಗೂ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಪೌರಕಾರ್ಮಿಕರು ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

## ಪ್ರತಾಪ್ ಸಿಂಹ ಹೇಳಿಕೆಗೆ ಪ್ರದೀಪ್ ಆಕ್ರೋಶ

ಬೆಂಗಳೂರು.ಸೆ.21– ದಲಿತರು ಹಾಗೂ ನೀಲಿ ಶಾಲಿನ ಕುರಿತು ಮಾತನಾಡುವಾಗ ಎಚ್ಚರಿಕೆ ವಹಿಸುವಂತೆ ಮೈಸೂರಿನ ಮಾಜಿ ಸಂಸದ ಪ್ರತಾಪ್ ಸಿಂಹಗೆ ಚಿಕ್ಕಬಳ್ಳಾಪುರ ಕಾಂಗ್ರೆಸ್ ಪ್ರದೀಪ್ ಈಶ್ವರ್ ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಂಸದ ಪ್ರತಾಪ್ ಸಿಂಹ ಟಿ.ನರಸೀಪುರ ಇನ್ಸ್ ಪೆಕ್ಟರ್ ಬಗ್ಗೆ ಏಕವಚನದಲ್ಲಿ ಮಾತನಾಡಿದ್ದಾರೆ ಎಂದು ಕಿಡಿಕಾರಿದರು. ಜೊತೆಗೆ ದಲಿತರ ಹಾಗೂ ನೀಲಿ ಶಾಲಿನ ಕುರಿತು ಮಾತನಾಡಲು ಅವರಿಗೆ ಹಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ನೀನು ಒಂದು ಕೇಸರಿ ಶಾಲು ಹಾಕಿಕೊಂಡು ಬಾ.ನಾವು ಸಾವಿರ ನೀಲಿ ಶಾಲು ಹಾಕಿಕೊಂಡೇ ಬರು ತ್ತೇವೆ. ದಲಿತ ಸಂಘಟನೆಗಳ ಕುರಿತು ಮಾತನಾಡುವಾಗ ಬಾಯಿ ನಿಯಂತ್ರಣ ದಲ್ಲಿರಬೇಕು. ದಲಿತ ಸಮುದಾಯದ ಬಗ್ಗೆ ಮಾತನಾಡುವ ಮುನ್ನ ಎಚ್ಚರಿಕೆ ವಹಿಸಬೇಕು. ನೀಲಿ ಶಾಲಿನ ಕುರಿತು ನೀಡಿರುವ ಹೇಳಿಕೆಗಾಗಿ ದಲಿತ ಸಮುದಾಯದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು

## ಸಬಲ ಮಹಿಳೆಯಿಂದ ನಾಡು ಸಶಕ್ತ: ಶರಣಪ್ರಕಾಶ್

ಬೆಂಗಳೂರು, ಸೆ. 21: ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಯಿಂದ ಮಾತ್ರ ಸಮಾಜದಲ್ಲಿ ನೈಜ ಬದಲಾವಣೆ ತರಲು ಸಾಧ್ಯ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಸಂಜೀವಿನಿ) ಇವರ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿ ಹಮ್ಮಿಕೊಳ್ಳಲಾಗಿರುವ ರಾಷ್ಟ್ರಮಟ್ಟದ 'ನಮ್ಮ ಸರಸ್ ಮೇಳ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶಾದ್ಯಂತ ಇರುವ ಸ್ವಸಹಾಯ ಸಂಘಗಳು ತಯಾರಿಸುವ ವೈವಿಧ್ಯಮಯ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವ ಉದ್ದೇಶ ದಿಂದ ಈ ಮೇಳವನ್ನು ಆಯೋಜಿಸಲಾಗಿದೆ. ಸಂಘದ ಸದಸ್ಯರಿಗೆ ಯಾವುದೇ ಶುಲ್ಕವಿಲ್ಲದೆ ಉಚಿತ ಮಳಿಗೆಗಳು, ಊಟ ಹಾಗೂ ವಸತಿ ಸೌಲಭ್ಯಗಳನ್ನು ಒದಗಿಸಿ, ಅವರು ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಅವಕಾಶವನ್ನು




ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಕಳೆದ ಬಾರಿ ಮಂಗಳೂರಿನಲ್ಲಿ ರಾಜ್ಯಮಟ್ಟದ ಮೇಳವನ್ನು ನಡೆಸಲಾಗಿತ್ತು. ಈ ವರ್ಷ ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಮೇಳಕ್ಕೆ ಇಂದು ಚಾಲನೆ ನೀಡಲಾಗಿದ್ದು. ಅತೀ ಶೀಘ್ರದಲ್ಲಿ ಮೈಸೂರು ಸೇರಿದಂತೆ ಎರಡು ಸ್ಥಳಗಳಲ್ಲಿ ರಾಜ್ಯಮಟ್ಟದ 'ಸರಸ್ ಮೇಳ' ಗಳನ್ನು ಆಯೋಜಿಸಲಾಗುವುದು ಎಂದರು.

### ಸ್ವಸಹಾಯ ಸಂಘಗಳ ನೆರವಿಗಾಗಿ ಶೀಘ್ರದಲ್ಲೇ 'ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ' ಸ್ಥಾಪನೆ:

ಸ್ವಸಹಾಯ ಸಂಘಗಳ ಮಹಿಳೆಯರು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹೆಚ್ಚಿನ ಬಡ್ಡಿ ದಂಧೆಯ ಸುಳಿಗೆ ಸಿಲುಕುವುದನ್ನು ತಪ್ಪಿಸಲು ಸರ್ಕಾರವೇ ಕನಿಷ್ಠ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಶೀಘ್ರದಲ್ಲೇ ಪ್ರತ್ಯೇಕ 'ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ' ಯನ್ನು ಆರಂಭಿಸಲಿದೆ ಎಂದು ಸಚಿವರು ತಿಳಿಸಿದರು. ತನ್ಮೂಲಕ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಸುಲಭ ಸಾಲ ಒದಗಿಸಿ, ಆರ್ಥಿಕ ಸ್ವಾವಲಂಬನೆಗೆ ಬಲ ತುಂಬಲಾಗುವುದು ಎಂದು ವಿವರಿಸಿದರು.

'ಬೆಂಗಳೂರು ಸಂತೆ' ಆರಂಭ: ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ನಿರಂತರ ಮಾರಾಟಕ್ಕಾಗಿ ರೊಟೇಷನ್ ಮಾದರಿಯಲ್ಲಿ ಮಳಿಗೆಗಳನ್ನು ಒದಗಿಸುವ 'ಬೆಂಗಳೂರು ಸಂತೆ' ಎಂಬ ಕಾಯಂ ಮಾರುಕಟ್ಟೆ ವ್ಯವಸ್ಥೆಯನ್ನು ಮುಂದಿನ ಒಂದು ತಿಂಗಳಲ್ಲಿ ಬೆಂಗಳೂರಿನಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಕರ್ನಾಟಕ ಹಾಗೂ ಇತರೆ ರಾಜ್ಯಗಳ ಜಿಐ ಮಾನ್ಯತೆ ಪಡೆದ ಉತ್ಪನ್ನಗಳು ಗ್ರಾಮೀಣ ಮಹಿಳಾ ಉದ್ಯಮಿಗಳ ಕರುಕುಶಲ, ಕೈಮಗ್ಗ, ಅಲಂಕಾರಿಕ ಗೃಹ ಉಪಯೋಗಿ ಉತ್ಪನ್ನಗಳನ್ನು ಒಟ್ಟು 150 ಮಳಿಗೆಗಳಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ ಎಂದು ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಸುಬೋಧ್ ಯಾದವ್ ಮಾಹಿತಿ ನೀಡಿದ ಅವರು ವಿವಿಧ ರಾಜ್ಯಗಳ ಸಾಂಪ್ರದಾಯಿಕ ಹಾಗೂ ವಿಶಿಷ್ಟ ಆಹಾರ ಮಳಿಗೆಗಳು ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನ ನಿರ್ದೇಶಕರಾದ ವಾಸಿರೆಡ್ಡಿ ವಿಜಯ ಜ್ಯೋತ್ಸ್ನ, ಉದ್ಯೋಗ ಹಾಗೂ ಕೈಗಾರಿಕಾ ತರಬೇತಿ ಇಲಾಖೆಯ ಆಯುಕ್ತರಾದ ಶಿಲ್ಪ ಎಂ., ಸೇರಿದಂತೆ ಇತರೆ ಹಿರಿಯ ಅಧಿಕಾರಿಗಳು ಸ್ವಸಹಾಯ ಗುಂಪುಗಳ ಸದಸ್ಯರುಗಳ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

Edited, Printed and Published by B.T.Amuthan. 11/2, Queen's Road, Bangalore - 560052. For M/s KARNATAKA PUBLICATIONS (P) Ltd, 11/2, Queen's Road, Bangalore -560052. Printed at Dinasudar Printing Division, 11/2, Queen's Road, Bangalore - 560052. RNI No.36667/82

# ವಾಯುಭಾರ ಕುಸಿತ: ರಾಜ್ಯದಲ್ಲಿ ಐದು ದಿನ ಮಳೆ



ಬೆಂಗಳೂರು,ಸೆ.21– ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಹಾಗೂ ಚಂಡಮಾರುತದ ಪ್ರಭಾವದಿಂದಾಗಿ ಕರ್ನಾಟಕದಾದ್ಯಂತ ಮಳೆಯ ವಾತಾವರಣ ಸೃಷ್ಟಿಯಾಗಿದ್ದು, ಮುಂದಿನ ಐದು ದಿನಗಳ ಕಾಲ ರಾಜ್ಯದ ವಿವಿಧೆಡೆ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ, ಮಲೆನಾಡು, ಉತ್ತರ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಮಳೆಯ ಆರ್ಭಟ ಮುಂದುವರಿಯಲಿದ್ದು, ಸೆಪ್ಟೆಂಬರ್ 25ರ ವರೆಗೆ ವರುಣನ ಆರ್ಭಟ ಇರಲಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಗಡಿಭಾಗ ಕಾಸರಗೋಡಿನಲ್ಲಿ ಹಗಲು ಹೊತ್ತು ಬಿಸಿಲು ಮತ್ತು ಮೋಡಕವಿದ ವಾತಾವರಣವಿರಲಿದ್ದು, ಮಧ್ಯಾಹ್ನದ ನಂತರ ಅಥವಾ ಸಂಜೆ ವೇಳೆ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಸೆಪ್ಟೆಂಬರ್ 21ರ ಸೋಮವಾರದಿಂದ ಸೆಪ್ಟೆಂಬರ್ 24ರ ಗುರುವಾರದವರೆಗೆ ಈ ಭಾಗಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ.

ಅಂತೆಯೇ ಉತ್ತರ ಒಳನಾಡಿನ ಜಿಲ್ಲೆಗಳಾದ ಗದಗ, ಹಾವೇರಿ ಮತ್ತು ಕೊಪ್ಪಳದಲ್ಲಿ ಸೋಮವಾರದಂದು ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಬಿರುಗಾಳಿ ಸಹಿತ ಸಾಧಾರಣದಿಂದ ಉತ್ತಮ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

# ಸವದತ್ತಿ ಯಲ್ಲಮ್ಮಗುಡ್ಡದ ಅಂಗಡಿಗಳ ಮೇಲೆ ಅಧಿಕಾರಿಗಳ ದಿಢೀರ್ ದಾಳಿ





ಬೆಳಗಾವಿ,ಸೆ.21–ಸವದತ್ತಿಯ ಐತಿಹಾಸಿಕ ಯಲ್ಲಮ್ಮನಗುಡ್ಡದ ಕುಂಕುಮ ಭಂಡಾರ, ಕಿರಾಣಿ ಅಂಗಡಿಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ತಂಪು ಪಾನೀಯ ಮತ್ತು ಆಹಾರ ಪ್ಯಾಕೇಟ್‌ಗಳ ಮೇಲೆ ಅವಧಿ ಮೀರಿದ ದಿನಾಂಕ ಇಲ್ಲದೇ ಇರುವುದು ಆತಂಕ ಮೂಡಿಸಿದೆ.

ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಭಾವತಿ ಫಕೀರಪುರ ಅವರ ನೇತೃತ್ವದಲ್ಲಿ ಈ ದಾಳಿ ಮಾಡಲಾಗಿದ್ದು, ಇಲ್ಲಿ ಮಾರಾಟ ಮಾಡುವ ವಸ್ತುಗಳ ಗುಣಮಟ್ಟ, ಎಕ್ಸ್‌ಪೈರಿ ದಿನಾಂಕ, ಅಂಗಡಿಗಳ ಪರವಾನಗಿ ನವೀಕರಣ ಪರೀಕ್ಷಿಸಲಾಯಿತು.

ದಾಳಿ ಕುರಿತು ಮಾಹಿತಿ ನೀಡಿರುವ ಪ್ರಭಾವತಿ ಫಕೀರಪುರ, ಹಲವು ಅಂಗಡಿಗಳಲ್ಲಿ ಮಾರಾಟ ಮಾಡುವ ತಂಪು ಪಾನೀಯಗಳ ಬಾಟಲಿಗಳು ಹಾಗೂ ಆಹಾರ ಪ್ಯಾಕೇಟ್‌ಗಳ ಮೇಲೆ, ಎಕ್ಸ್‌ಪೈರಿ ಡೇಟ್ ಇಲ್ಲ. ಕೆಲವರು ಪರವಾನಗಿ ಇಲ್ಲದೇ, ಪರವಾನಗಿ ನವೀಕರಿಸದೆ ವ್ಯವಹಾರ ಮಾಡುತ್ತಿರುವುದು ಕಂಡು ಬಂದಿದೆ ಎಂದು ತಿಳಿಸಿದರು.

ಕೊಳೆತ ತರಕಾರಿ ಬಳಕೆ: ಕೆಲವು ಹೋಟೆಲ್‌ನವರಿಂದ ಅಡುಗೆಗೆ ಕೊಳೆತ ತರಕಾರಿ ಬಳಸಲಾಗುತ್ತಿದೆ. ಕುಂಕುಮ ಭಂಡಾರ, ಕಿರಾಣಿ ಅಂಗಡಿಯಲ್ಲಿ ಔಷಧ ಮಾರಾಟ ಮಾಡಲಾಗುತ್ತಿದೆ. ಜೊತೆಗೆ ನಿಯಮ ಮೀರಿ ವ್ಯವಹಾರ ಮಾಡುತ್ತಿರುವವರ ಅಂಗಡಿಗಳ ವಿದ್ಯುತ್, ನೀರಿನ ಸಂಪರ್ಕ ಕಡಿತ ಮಾಡಲಾಗುವುದು. ಇದು ಮುಂದುವರಿದರೆ ಶಿಸ್ತು ಕ್ರಮಕ್ಕೆ ಮುಂದಾಗುತ್ತೇವೆ ಎಂದು ಎಚ್ಚರಿಕೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಒಂದು ಕೋಟಿ ಜನರು ಭೇಟಿ: ಪ್ರಸಿದ್ಧ ಧಾರ್ಮಿಕ ಸ್ಥಳವಾದ ಯಲ್ಲಮ್ಮನ ಗುಡ್ಡಕ್ಕೆ ಇಡೀ ವರ್ಷ ಒಂದು ಕೋಟಿಗೂ ಹೆಚ್ಚು ಭಕ್ತರು ಆಗಮಿಸಿ ವಿವಿಧ ವಸ್ತುಗಳನ್ನು ಇಲ್ಲಿ ಖರೀದಿ ಮಾಡುತ್ತಾರೆ. ಹೀಗೆ ಬಂದ ಭಕ್ತರಿಗೆ ಯಾವುದೇ ವರ್ತಕರು ಮೋಸ ಮಾಡಬಾರದು ಎಂದು ಪ್ರಭಾವತಿ ಫಕೀರಪುರ ತಿಳಿಸಿದರು.

ತಪಾಸಣೆ ವೇಳೆ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾಡಾನೆ ದಾಳಿಗೆ ವ್ಯಕ್ತಿ ಬಲಿ



ಮೈಸೂರು,ಸೆ.21– ಕಾಡಾನೆ ದಾಳಿಯಿಂದ ಓರ್ವ ಮೃತಪಟ್ಟು, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಸರಗೂರು ತಾಲೂಕಿನ ಕಾಡಗೆರೆ ಗ್ರಾಮದಲ್ಲಿ ನಡೆದಿದೆ.

ಆನೆ ದಾಳಿಯಿಂದ ಗ್ರಾಮದ ರೈತ ವೀರಭದ್ರೇಗೌಡ ಅಲಿಯಾಸ್ ಸಣ್ಣಪ್ಪ (60) ಸಾವನ್ನಪ್ಪಿದ್ದಾರೆ. ಮತ್ತೋರ್ವ ರೈತ ಮಹೇಶ್ ಗಾಯಗೊಂಡಿದ್ದು, ಇವರನ್ನು ಸರಗೂರು ತಾಲೂಕಿನಲ್ಲಿರುವ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಗಿದೆ.

ಸಣ್ಣಪ್ಪ ಹಾಗೂ ಮಹೇಶ್ ಇಬ್ಬರಿಗೂ ಅನಾರೋಗ್ಯ ಇದ್ದ ಕಾರಣ ಒಂದೇ ಬೈಕ್?ನಲ್ಲಿ ಮೈಸೂರಿಗೆ ಬರುತ್ತಿದ್ದಾಗ ಮಾರ್ಗ ಮಧ್ಯದ ಕಾಡಗೆರೆ–ದೊಡ್ಡಬರಗಿ ಗ್ರಾಮದ ಬಳಿ ಏಕಾಏಕಿ ಬೈಕ್ ಮೇಲೆ ಕಾಡಾನೆ ದಾಳಿ ಮಾಡಿದೆ. ಇದರಿಂದ ಸಣ್ಣಪ್ಪ ಸ್ಥಳದಲ್ಲೇ ಮೃತಪಟ್ಟರೆ, ಮಹೇಶ್ ಗಾಯಗೊಂಡಿದ್ದಾರೆ. ದಾಳಿಯ ನಂತರ ಆನೆ ಕಾಡಿನತ್ತ ಮರಳಿದೆ.

ಮಹೇಶ್ ಜೋರಾಗಿ ಕೂಗಿದ್ದರಿಂದ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದ ರೈತರು ಸ್ಥಳಕ್ಕಾಗಮಿಸಿ, ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ, ಮಹೇಶ್?ನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

# ಕಸ್ತೂರಿ ರಂಗನ್ ವರದಿ ವಿರೋಧಿಸಿ ಶೃಂಗೇರಿ ಬಂದ್

ಚಿಕ್ಕಮಗಳೂರು,ಸೆ.21–ಕಸ್ತೂರಿ ರಂಗನ್ ವರದಿ ಜಾರಿ ವಿರೋಧಿಸಿ ಮಲೆನಾಡಿಗರು ನಡೆಸುತ್ತಿರುವ ಹೋರಾಟದ ಭಾಗವಾಗಿ ಶೃಂಗೇರಿ ತಾಲೂಕು ಸಂಪೂರ್ಣವಾಗಿ ಬಂದ್ ಆಗಿದೆ.

ಶೃಂಗೇರಿ ರೈತ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ. ಬಂದ್‌ಗೆ ಬೆಂಬಲ ಸೂಚಿಸಿರುವ ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿದ್ದಾರೆ

ಬಂದ್ ಹಿನ್ನೆಲೆಯಲ್ಲಿ ಶೃಂಗೇರಿ ತಾಲೂಕಿನಲ್ಲಿ ಜನಜೀವನ ಬಹುತೇಕ ಸ್ಥಗಿತಗೊಂಡಿದ್ದು, ವರದಿ ವಿರೋಧಿಸಿ ಮಲೆನಾಡಿಗರ ಹೋರಾಟ ತೀವ್ರಗೊಂಡಿದೆ.

ಕಸ್ತೂರಿ ರಂಗನ್ ವರದಿ ಜಾರಿಯಾದರೆ ಮಲೆನಾಡಿನ ಗ್ರಾಮಗಳು ಹಾಗೂ ಜನಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿಂದ ನಿರಂತರವಾಗಿ ಹೋರಾಟ ನಡೆಸಲಾಗುತ್ತಿದ್ದು, ಇಂದು ಶೃಂಗೇರಿ ಪಟ್ಟಣದಲ್ಲಿ ವಿವಿಧ ಸಂಘಟನೆಗಳ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಕಸ್ತೂರಿ ರಂಗನ್ ವರದಿ ವ್ಯಾಪ್ತಿಗೆ ಚಿಕ್ಕಮಗಳೂರು ಜಿಲ್ಲೆಯ 3,666 ಚದರ ಕಿ.ಮೀ. ಪ್ರದೇಶ ಒಳಪಡಲಿದೆ ಎಂದು ಹೋರಾಟಗಾರರು ತಿಳಿಸಿದ್ದಾರೆ. ವರದಿ ಜಾರಿಯಾದರೆ ಐದು ತಾಲೂಕುಗಳ 137ಕ್ಕೂ ಹೆಚ್ಚು ಗ್ರಾಮಗಳ ಮೇಲೆ ಪರಿಣಾಮ ಬೀರಲಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮಲೆನಾಡು ಭಾಗಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿದ ಬೆನ್ನಲ್ಲೇ ಶೃಂಗೇರಿ ಬಂದ್‌ಗೆ ನಡೆಸಲಾಗಿದ್ದು,

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರ ವಿಶೇಷ ಅಧಿವೇಶನದಲ್ಲಿ ಕಸ್ತೂರಿ ರಂಗನ್ ವರದಿ ಬಗ್ಗೆ ಚರ್ಚೆ ನಡೆಸುತ್ತಿದೆ.

# ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು, ಸೆ. 21– ಕಾವೇರಿ ನೀರು ಸರಬರಾಜು ಯೋಜನೆಯ 1ನೇ ಹಂತದ ಜಲರೇಚಕ ಯಂತ್ರಾಗಾರದಲ್ಲಿ ಪಂಪ್ ಸಂಖ್ಯೆ–4 ರಲ್ಲಿ ತುರ್ತು ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ.

ಸದರಿ ತುರ್ತು ದುರಸ್ತಿ ಕಾಮಗಾರಿಯನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ, ಕಾವೇರಿ ನೀರು ಸರಬರಾಜು ಯೋಜನೆ 1ನೇ ಹಂತದ ಜಲರೇಚಕ ಯಂತ್ರಾಗಾರಗಳನ್ನು ದಿನಾಂಕ 22–09–2026 ರಂದು ಬೆಳಿಗ್ಗೆ 06:00 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯವರೆಗೆ ಒಟ್ಟು 6 ಗಂಟೆಗಳ ಕಾಲ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು.

ಈ ಸ್ಥಗಿತದಿಂದ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇರುವುದರಿಂದ, ಸಂಬಂಧಪಟ್ಟ ಪ್ರದೇಶಗಳ ನಾಗರಿಕರು ಮುಂಜಾಗ್ರತಾ ಕ್ರಮವಾಗಿ ಅಗತ್ಯ ಪ್ರಮಾಣದ ನೀರನ್ನು ಮುಂಚಿತವಾಗಿ ಸಂಗ್ರಹಿಸಿಟ್ಟುಕೊಳ್ಳುವಂತೆ ಬೆಂಗಳೂರು ಜಲಮಂಡಳಿ ಮನವಿ ಮಾಡಿದೆ.

ನೀರಿನ ವ್ಯತ್ಯಯ ಉಂಟಾಗುವ ಪ್ರದೇಶಗಳ ವಿವರಗಳನ್ನು ಈ ಮಾಹಿತಿಯೊಂದಿಗೆ ಲಗತ್ತಿಸಲಾಗಿದೆ.

ಸಾರ್ವಜನಿಕರು ಬೆಂಗಳೂರು ಜಲಮಂಡಳಿಯೊಂದಿಗೆ ಸಹಕರಿಸುವಂತೆ ಕೋರಲಾಗಿದೆ.



ಭಾರತ ರತ್ನ ಎಂ.ಎಸ್. ಸುಬ್ಬಲಕ್ಷ್ಮಿ ಅವರ 110ನೇ ಜನ್ಮ ದಿನಾಚರಣೆ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಇಂಟರ್ ನ್ಯಾಷನಲ್ ಆರ್ಟ್ಸ್ ಅಂಡ್ ಕಲ್ಚರಲ್ ಫೌಂಡೇಶನ್ ಸಂಸ್ಥೆ ಸ್ಥಾಪಿಸಿರುವ "ಸ್ವರ ಲಕ್ಷ್ಮಿ" ಬಿರುದನ್ನು ವಿದುಷಿ ಎಸ್. ಐಶ್ವರ್ಯ, ವಿದುಷಿ ಎಸ್. ಸೌಂದರ್ಯ ಅವರಿಗೆ ನೀಡಿ ಗೌರವಿಸಲಾಯಿತು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ರಮಣಶ್ರೀ ಸಮೂಹದ ಅಧ್ಯಕ್ಷ ಎಸ್. ಷಡಾಕ್ಷರಿ, ವಿದ್ವಾಂಸ ಡಾ. ಹಂಪನಾಗರಾಜಯ್ಯ, ಸಂಸ್ಥೆ ನಿರ್ದೇಶಕ ಶ್ರೀಮತ್ಸ ಶಾಂಡಿಲ್ಯ ಕಲಾವಿದೆ, ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್‌ರವರ ಪತ್ನಿ ಕನ್ನಿಕಾ ಪರಮೇಶ್ವರ್ ಇದ್ದಾರೆ.

# ಪಾನಮತ್ತ ಚಾಲನೆ 504 ಪ್ರಕರಣ ದಾಖಲು

ಬೆಂಗಳೂರು,ಸೆ.21–ಮದ್ಯಸೇವಿಸಿ ವಾಹನ ಚಲಾಯಿಸುವವರ ವಿರುದ್ಧ ವಿಶೇಷ ಕಾರ್ಯಾಚರಣೆ ಕೈಗೊಂಡ ಸಂಚಾರ ಪೊಲೀಸರು 32,322 ವಾಹನಗಳನ್ನು ತಪಾಸಣೆ ನಡೆಸಿ 504 ಪ್ರಕರಣಗಳನ್ನು ದಾಖಲಿಸಿದ್ದಾರೆ.

ಕಳೆದ ಸೆ.14 ರಿಂದ ಆ.20 ರವರೆಗೆ ನಗರದ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೈಗೊಂಡ ಪಾನಮತ್ತ ಚಾಲಕರ ವಿಶೇಷ ಕಾರ್ಯಾಚರಣೆ ಕೈಗೊಂಡು ತಪಾಸಣೆಗೆ ಒಳಪಡಿಸಿ ಪಾನಮತ್ತ ಚಾಲಕರ ವಿರುದ್ಧ 504 ಪ್ರಕರಣಗಳನ್ನು ದಾಖಲಿಸಿ ಚಾಲನಾ ಪರವಾನಗಿ ಜಪ್ತಿ ಮಾಡಲಾಗಿದೆ.

ಅಲ್ಲದೆ, ?ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸುತ್ತಿದ್ದ 205 ಮಂದಿಯ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಕೇವಲ ಒಂದೇ ವಾರದಲ್ಲಿ ಈ ನಿಯಮ ಉಲ್ಲಂಘನೆಗಳಿಗಾಗಿ 20.6 ಲಕ್ಷ ರೂ ದಂಡ ವಸೂಲಿ ಮಾಡಲಾಗಿದೆ.

ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸದಂತೆ ಸಂಚಾರ ಪೊಲೀಸ್ ಜಂಟಿ ಆಯುಕ್ತ ಕಾರ್ತಿಕ್ ರೆಡ್ಡಿ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ಮಾಜಿ ಸದಸ್ಯ ಶಿರಿಯಣ್ಣನವರ್ ನಿಧನಕ್ಕೆ ಸಂತಾಪ

ಬೆಂಗಳೂರು,ಸೆ.21–ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ. ಆರ್.ಬಿ. ಶಿರಿಯಣ್ಣನವರ್ ಅವರ ನಿಧನಕ್ಕೆ ವಿಧಾನಸಭೆಯಲ್ಲಿಂದು ಸಂತಾಪ ಸೂಚಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಧಾನಸಭಾಧ್ಯಕ್ಷರಾದ ಬಿ.ಎಸ್. ಪಾಟೀಲ್ ಅವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ. ಆರ್.ಬಿ. ಶಿರಿಯಣ್ಣನವರ್ ಅವರು ಕಳೆದ ಆಗಸ್ಟ್ 27 ರಂದು ನಿಧನರಾಗಿರುತ್ತಾರೆ, ಅವರು ವೃತ್ತಿಯಲ್ಲಿ ವೈದ್ಯರಾಗಿದ್ದು, 2004ರಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದಿಂದ 12ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸರಳತೆಗೆ ಹೆಸರಾಗಿದ್ದ ಆರ್.ಬಿ. ಶಿರಿಯಣ್ಣನವರ್ ಸಜ್ಜನ ರಾಜ–ಕಾರಣಿ ಎಂದು ಹೇಳಿದರು.

ಸಭಾಧ್ಯಕ್ಷರ ಸಂತಾಪ ಸೂಚನಾ ನಿರ್ಣಯಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ, ಸಚಿವರಾದ ಲಕ್ಷ್ಮಣ ಸವದಿ ಅವರು ಮಾತನಾಡಿ, ಶಿರಿಯಣ್ಣನವರ್ ರವರ ಸೇವೆ, ನಡೆ–ನುಡಿ ಎಲ್ಲವನ್ನೂ ಸ್ಮರಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು.

ಇದಾದ ಬಳಿಕ ವಿಧಾನಸಭೆಯಲ್ಲಿ ಒಂದು ನಿಮಿಷಗಳ ಕಾಲ ಮೌನ ಆಚರಿಸಿ ಡಾ. ಆರ್.ಬಿ. ಶಿರಿಯಣ್ಣನವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ತಾ.ಪಂ. ಇಒ ಮೇಲೆ ಹಲ್ಲೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿರುದ್ಧ ಪ್ರಕರಣ

ಚಿಕ್ಕಮಗಳೂರು.ಸೆ.21– ಶೃಂಗೇರಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ(ಇಒ)ಸುದೀಪ್ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿದ ಆರೋಪದಡಿ ಕೊಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಕ್ಕುಡಿಗೆ

ರವೀಂದ್ರ ವಿರುದ್ಧ ಬಾಳೆಹೊನ್ನೂರು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಎನ್.ಆರ್.ಪುರ ತಾಲೂಕಿನ ಬಾಳೆಹೊನ್ನೂರು ಸಮೀಪದ ಹೇರೂರು ಬಳಿ ಘಟನೆ ನಡೆದಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಬಾಳೆಹೊನ್ನೂರಿನಲ್ಲಿ ಕಸ್ತೂರಿ ರಂಗನ್ ವರದಿ ಸಂಬಂಧ ನಡೆದ ಸಭೆಯಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದ ಸಂದರ್ಭದಲ್ಲಿ ಗಲಾಟೆ ನಡೆದಿದೆ ಎಂದು ತಿಳಿದುಬಂದಿದೆ.

ಸಭೆ ಮುಗಿದ ಬಳಿಕ ರಾತ್ರಿ ಹೋಟೆಲ್ ನಲ್ಲಿ ಊಟ ಊಟ ಮುಗಿಸಿ ಹೊರಬಂದಾಗ ತಮ್ಮನ್ನು ಅಡ್ಡಗಟ್ಟಿ ಹಲ್ಲೆ ನಡೆಸಲಾಗಿದೆ ಎಂದು ಇಒ ಸುದೀಪ್, ಪೊಲೀಸರಿಗೆ ದೂರು ನೀಡಿದ್ದಾರೆ. ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಲಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ಹಲ್ಲೆಯಿಂದ ಗಾಯಗೊಂಡ ಸುದೀಪ್ ಅವರಿಗೆ ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗೇಶ್ ಕೂಡ ಇಒ ಸುದೀಪ್ ವಿರುದ್ಧ ದೂರು ನೀಡಿದ್ದು, ತಮ್ಮ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ. ಎರಡೂ ದೂರುಗಳನ್ನು ಸ್ವೀಕರಿಸಿರುವ ಬಾಳೆಹೊನ್ನೂರು ಪೊಲೀಸರು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಹಲ್ಲೆ ಆರೋಪ ಹಾಗೂ ಪ್ರತಿದೂರುಗಳ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ನಗರದ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿ ಟ್ರಸ್ಟ್ ಆಶ್ರಯದಲ್ಲಿ ಇಂದು ನಡೆದ ರಾಜ್ಯಮಟ್ಟದ ಕನ್ನಡ ಸಾಹಿತ್ಯ, ಸಂಸ್ಕೃತಿ ಸಮ್ಮೇಳನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಉದ್ಘಾಟಿಸಿದರು. ಶ್ರೀ ಶಿವರುದ್ರ ಮಹಾಸ್ವಾಮೀಜಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಸಾಹಿತಿ ಡಾ. ಬೈರಮಂಗಲ ರಾಮೇಗೌಡ, ಡಾ. ಸಿಸಿರಾ, ಸಿ. ಹೇಮಾವತಿ, ಅರಬಗಟ್ಟ ನಾಗರಾಜು, ಸಿ. ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

# ಚಾಲಕನ ನಿಯಂತ್ರಣ ತಪ್ಪಿ ಕ್ಯಾಂಟರ್ ಪಲ್ಟಿ

ಬೆಂಗಳೂರು.ಸೆ.21– ಚಾಲಕನ ನಿಯಂತ್ರಣ ತಪ್ಪಿದ ಕ್ಯಾಂಟರ್‌ವೊಂದು ಡಿವೈಡರ್‌ಗೆ ಡಿಕ್ಕಿಹೊಡೆದು, ಬಳಿಕ ಮರಕ್ಕೆ ಅಪ್ಪಳಿಸಿ ರಸ್ತೆಯಲ್ಲೇ ಪಲ್ಟಿಯಾದ ಘಟನೆ ಬೆಂಗಳೂರಿನ ಸಂಜಯನಗರ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕಳೆದ ತಡರಾತ್ರಿ ಓಆರ್‌ಆರ್ ರಸ್ತೆಯಲ್ಲಿ, ಬ್ರಿಗೇಡ್ ಸೆನೆಟ್ ಎದುರು ಭದ್ರಪ್ಪ ಲೇಔಟ್‌ನಿಂದ ಹೆಬ್ಬಾಳ ಕಡೆ ಸಾಗುವ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ.

ಮೊದಲು ಕ್ಯಾಂಟರ್ ಡಿವೈಡರ್‌ಗೆ ಡಿಕ್ಕಿಹೊಡೆದಿದ್ದು, ಬಳಿಕ ರಸ್ತೆಬದಿಯ ಮರಕ್ಕೆ ಅಪ್ಪಳಿಸಿ ಪಲ್ಟಿಯಾಗಿದೆ. ಅಪಘಾತದಲ್ಲಿ ಕ್ಯಾಂಟರ್ ಚಾಲಕ ಗಾಯಗೊಂಡಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಾಹಿತಿ ತಿಳಿದು ಸ್ಥಳಕ್ಕೆ ಸಂಜಯನಗರ ಸಂಚಾರ ಪೊಲೀಸರು ಧಾವಿಸಿದ್ದಾರೆ. ಕ್ರೇನ್ ಸಹಾಯದಿಂದ ಪಲ್ಟಿಯಾಗಿದ್ದ ಕ್ಯಾಂಟರ್‌ನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಅಪಘಾತದ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿತ್ತು. ಬಳಿಕ ಸಂಚಾರ ಪೊಲೀಸರು ವಾಹನ ಸಂಚಾರವನ್ನು ಸುಗಮಗೊಳಿಸಿದರು.

# ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಕ್ರಮ: ಅನ್ಬುಕುಮಾರ್

ಬೆಂಗಳೂರು, ಸೆ.21– 18 ವರ್ಷ ಮೇಲ್ಪಟ್ಟ ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಖಖಖ)–2026ರ ವಿಶೇಷ ನೋಂದಣಿ ಅಭಿಯಾನವನ್ನು ಭಾನುವಾರ ಪರಿಶೀಲಿಸಿದ ಅವರು, ಶಾಂತಿನಗರ ಕ್ಷೇತ್ರದ ಶಾಂತಲಾನಗರ ವಾರ್ಡ್‌ನ ಬಾಲ್ಡ್‌ವಿನ್ ಗರ್ಲ್ಸ್ ಶಾಲೆಯ ಬೂತ್ ಸಂಖ್ಯೆ 47 ಮತ್ತು 48 ಹಾಗೂ ಅಗರಂ ವಾರ್ಡ್‌ನ ಆಸ್ಟಿನ್ ಟೌನ್ ಸರ್ಕಾರಿ ತಮಿಳು ಮತ್ತು ಆಂಗ್ಲ ಪ್ರೌಢಶಾಲೆಯಲ್ಲಿನ ಮತದಾರರ ವಿಚಾರಣಾ ಕೇಂದ್ರಕ್ಕೆ ಭೇಟಿ ನೀಡಿದರು.

ಈ ವೇಳೆ ಖಖಖ ನೋಟಿಸ್‌ಗಳ ವಿಚಾರಣೆ, ನಮೂನೆ–6 ವಿತರಣೆ ಹಾಗೂ ಹೊಸ ಮತದಾರರ ನೋಂದಣಿ ಪ್ರಕ್ರಿಯೆಯನ್ನು ಪರಿಶೀಲಿಸಿದರು. ಬಳಿಕ ಲ್ಯಾಂಗ್‌ಫೋರ್ಡ್ ರಸ್ತೆಯ ಅಪಾರ್ಟ್‌ಮೆಂಟ್‌ವೊಂದಕ್ಕೆ ಭೇಟಿ ನೀಡಿ ನಮೂನೆ–6 ಅನ್ನು ವಿತರಿಸಿದರು. ವಿಚಾರಣಾ ಕೇಂದ್ರಗಳಿಗೆ ಆಗಮಿಸಿದ್ದ ಸಾರ್ವಜನಿಕರಿಗೂ ನಮೂನೆ–6 ಅರ್ಜಿಗಳನ್ನು ವಿತರಿಸಿ, ಅರ್ಜಿ ಭರ್ತಿ ಮಾಡುವಲ್ಲಿ ಸಮಸ್ಯೆ ಎದುರಾದವರಿಗೆ ಸಹಾಯ ಮಾಡುವಂತೆ ಸಿಬ್ಬಂದಿಗೆ ಸೂಚಿಸಿದರು.

ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ

ಮತದಾರರು ದೇಶದ ಅತ್ಯಮೂಲ್ಯ ಆಸ್ತಿಯಾಗಿದ್ದು, ಅರ್ಹತೆ ಹೊಂದಿರುವ ಪ್ರತಿಯೊಬ್ಬರಿಗೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಹಕ್ಕಿದೆ. ಹೀಗಾಗಿ ಖಖಖ ಪ್ರಕ್ರಿಯೆಯ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಅನ್ಬುಕುಮಾರ್ ಹೇಳಿದರು.

ವಿಶೇಷವಾಗಿ ಹಿರಿಯ ನಾಗರಿಕರು, ಮಹಿಳೆಯರು ಹಾಗೂ ಯುವಜನರು ವಿಚಾರಣಾ ಕೇಂದ್ರಗಳಿಗೆ ಆಗಮಿಸಿದಾಗ ಅವರಿಗೆ ಅಗತ್ಯ ಮಾಹಿತಿ ನೀಡಿ, ಯಾವುದೇ ರೀತಿಯ ತೊಂದರೆ–ಯಾಗದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರು ನೀಡುವ ದಾಖಲೆಗಳನ್ನು ಪರಿಶೀಲಿಸಿ, ಅವುಗಳಲ್ಲಿ ಲೋಪವಿದ್ದರೆ ಕೂಡಲೇ ಮಾಹಿತಿ ನೀಡಿ ಸರಿಯಾದ ದಾಖಲೆ ಒದಗಿಸಲು ಮಾರ್ಗದರ್ಶನ ನೀಡಬೇಕು ಎಂದು ಸೂಚಿಸಿದರು.

ಅನಕ್ಷರಸ್ಥರಿಗೆ ನಮೂನೆ–6 ಭರ್ತಿ ಮಾಡಲು ಸಿಬ್ಬಂದಿ ನೆರವಾಗಬೇಕು. ಸಾರ್ವಜನಿಕರ ಸಮಯ ವ್ಯರ್ಥವಾಗದಂತೆ ಸಾಧ್ಯವಾದಷ್ಟು ತ್ವರಿತವಾಗಿ ಅವರ ಕೆಲಸ ಪೂರ್ಣಗೊಳಿಸಬೇಕು. ವಿಚಾರಣಾ ಕೇಂದ್ರಗಳಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆಯೂ ಸೂಚಿಸಿದರು.

ಬಿಎಲ್‌ಒಗಳಿಗೆ ಕಿರುಕುಳ ಬೇಡ: ಎಸ್‌ಐಆರ್ ಪ್ರಕ್ರಿಯೆಯ ಯಶಸ್ಸಿಗೆ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಪಾತ್ರ ಪ್ರಮುಖವಾಗಿದೆ. ಹೀಗಾಗಿ ಅವರ ಮಾತ್ರ ಇಲಾಖೆಯ ಅಧಿಕಾರಿಗಳು ಅಥವಾ ಎಸ್‌ಐಆರ್ ಕಾರ್ಯಕ್ಕೆ ನಿಯೋಜಿತ ಅಧಿಕಾರಿಗಳು ಯಾವುದೇ ರೀತಿಯ ಅನಗತ್ಯ ತೊಂದರೆ ನೀಡಬಾರದು. ಬಿಎಲ್‌ಒಗಳೊಂದಿಗೆ ಸಂಯಮದಿಂದ ನಡೆದುಕೊಂಡು ಅವರಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಮತದಾರರ ನೋಂದಣಾಧಿಕಾರಿಗಳಿಗೆ ಅನ್ಬುಕುಮಾರ್ ನಿರ್ದೇಶನ ನೀಡಿದರು.

ಅಧಿಕಾರಿಗಳ ಸಭೆ

ಮತದಾರರ ವಿಚಾರಣಾ ಕೇಂದ್ರಗಳ ಪರಿಶೀಲನೆಯ ಬಳಿಕ ಎಂ.ಜಿ. ರಸ್ತೆಯ ಪಿಯುಬಿ ಕಟ್ಟಡದ 10ನೇ ಮಹಡಿಯಲ್ಲಿರುವ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಖಖಖ ಕಾರ್ಯವನ್ನು ಮತ್ತಷ್ಟು ತ್ವರಿತ ಹಾಗೂ ಪರಿಣಾಮಕಾರಿಯಾಗಿ ನಡೆಸಲು ಇಖಔ, ಂಇಖಔ ಮತ್ತು ಃಐಔಗಳು ತಂಡವಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಅಥವಾ ಕೈಬಿಟ್ಟಿರುವ ಕುರಿತು ಸಾರ್ವಜನಿಕರು ತಮ್ಮ ಅಕ್ಕಪಕ್ಕದವರಿಗೂ ಮಾಹಿತಿ ನೀಡುವಂತೆ ಜಾಗೃತಿ ಮೂಡಿಸಬೇಕು. ಅಗತ್ಯ ದಾಖಲೆಗಳ ಕುರಿತು ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯ ಬಳಿಕ ಮಾತನಾಡಿದ ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಜಿ., ಮುಖ್ಯ ಚುನಾವಣಾಧಿಕಾರಿಗಳು ನೀಡಿರುವ ಸೂಚನೆ ಹಾಗೂ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ನಿಯಮಬದ್ಧವಾಗಿ ಕಾರ್ಯನಿರ್ವಹಿಸಿ ಖಖಖ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಅಭಿವೃದ್ಧಿ ಅಪರ ಆಯುಕ್ತ ವೆಂಕಟಾಚಲಪತಿ, ಕಂದಾಯ ಅಪರ ಆಯುಕ್ತೆ ಲಕ್ಷ್ಮಮ್ಮ, ಜಂಟಿ ಆಯುಕ್ತರಾದ ರಂಗನಾಥ್ ಕೆ. ಮತ್ತು ಹೇಮಂತ್ ಶರಣ್, ಕಂದಾಯ ಅಧಿಕಾರಿಗಳು, ಚುನಾವಣಾ ತಹಶೀಲ್ದಾರ್ ವಿಭಾ ರಾಠೋಡ್, ಸಹಾಯಕ ಕಂದಾಯ ಅಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

# ನಕಲಿ ಔಷಧ ಜಾಲ ಪ್ರಕರಣ: ಎಫ್‌ಡಿಎ ಅಧಿಕಾರಿ ಅಮಾನತು

ಬೆಂಗಳೂರು.ಸೆ.21– ನಕಲಿ ಔಷಧ ಜಾಲದ ವಿರುದ್ಧದ ತನಿಖೆ ನಡೆಯುತ್ತಿರುವ ಬೆನ್ನಲ್ಲೇ, ಆಹಾರ ಮತ್ತು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಯೊಬ್ಬರನ್ನು ಸರ್ಕಾರ ಅಮಾನತುಗೊಳಿಸಿದೆ.

ಸರ್ಕಲ್–1 ಸಹಾಯಕ ಔಷಧ ನಿಯಂತ್ರಕ ಓಂಕಾರೇಶ್ವರ್ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಚಾಮರಾಜಪೇಟೆಯ ಕೃಪಾ ಹೆಲ್ತ್ ಕೇರ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಸೂಕ್ತ ಕ್ರಮ ಕೈಗೊಳ್ಳದೆ ಕರ್ತವ್ಯಲೋಪ ಎಸಗಿದ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ನಕಲಿ ಔಷಧಗಳ ಮಾರಾಟ ಹಾಗೂ ಜಾಲದ ಕುರಿತು ತನಿಖೆ ತೀವ್ರಗೊಂಡಿರುವ ಸಂದರ್ಭದಲ್ಲಿ ಈಆಂ ಅಧಿಕಾರಿಯೊಬ್ಬರ ವಿರುದ್ಧ ಕೈಗೊಂಡಿರುವ ಮೊದಲ ಅಮಾನತು ಕ್ರಮ ಇದಾಗಿದೆ.

ಕೃಪಾ ಹೆಲ್ತ್ ಕೇರ್ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವಲ್ಲಿ ಅಧಿಕಾರಿಯ ಮಟ್ಟದಲ್ಲಿ ನಿರ್ಲಕ್ಷ್ಯ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಇಲಾಖಾ ಮಟ್ಟದಲ್ಲಿ ಪರಿಶೀಲನೆ ನಡೆಸಿದ ಬಳಿಕ ಅಮಾನತು ಆದೇಶ ಹೊರಡಿಸಲಾಗಿದೆ.

ನಕಲಿ ಔಷಧ ಜಾಲಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಇನ್ನಷ್ಟು ಅಧಿಕಾರಿಗಳು ಹಾಗೂ ಸಂಬಂಧಿತ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

# ಪಾಪರಾಜಿ-ಟ್ರೋಲರ್‌ಗಳಿಗೆ ಸಲ್ಮಾನ್ ಖಾನ್ ಛೀಮಾರಿ

ಮುಂಬೈ, ಸೆ. 21– ರಿಯಾಲಿಟಿ ಶೋ 'ಬಿಗ್ ಬಾಸ್ 20' ರ 'ವೀಕೆ-ಂಡ್ ಕಾ ವಾರ್' ಸಂಚಿಕೆಯಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ಪಾಪರಾಜಿಗಳು ಮತ್ತು ಸಾಮಾಜಿಕ ಜಾಲತಾಣಗಳ ಟ್ರೋಲರ್‌ಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಮಹಿಳಾ ಕಲಾವಿದರ ಅನುಚಿತ ಕೋನಗಳಿಂದ, ವಿಶೇಷವಾಗಿ ಕಾರಿನಿಂದ ಇಳಿಯುವಾಗ ಅಥವಾ ಕುಳಿತುಕೊಳ್ಳುವಾಗ ಹಿಂಭಾಗ ಹಾಗೂ ತೊಡೆಗಳ ಭಾಗಗಳನ್ನು ಸೆರೆಹಿಡಿದು ಪೋಸ್ಟ್ ಮಾಡುವ ಪಾಪರಾಜಿಗಳ ವಿಕೃತ ಮನಸ್ಥಿತಿಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ. ಇಂತಹ ಚಿತ್ರಗಳ ಮೇಲೆ "ಇವರು ಯಾರು ಎಂದು ಊಹಿಸಿ"ಎನ್ನುವ ಶೀರ್ಷಿಕೆಗಳನ್ನು ಹಾಕಿ ಹಂಚಿಕೊಳ್ಳುವುದನ್ನು ಪ್ರಶ್ನಿಸಿದ ಅವರು, ಸಾಯಿ ಮಂಜ್ರೇಕರ್, ನೇಹಾ ಧೂಪಿಯಾ ಮತ್ತು ಮತ್ತು ಸ್ವತಃ ಸೋನಿಯ ಮೇಲೂ ಇಂತಹ ಪ್ರಸಂಗಗಳು ನಡೆದಿರುವುದನ್ನು ಉಲ್ಲೇಖಿಸಿದರು. ಇಂತಹ ಅನುಚಿತ ವರ್ತನೆಯಿಂದ ಅನಾನುಕೂಲತೆಯನ್ನು ಅನುಭವಿಸುವ ಮಹಿಳೆಯರು ಮೌನವಾಗಿರದೆ, ತಕ್ಷಣ ತಿರುಗಿ ನಿಂತು ಕಪಾಳಮೋಕ್ಷ ಮಾಡುವ ಮೂಲಕ ಪ್ರತಿಭಟಿಸಬೇಕು ಎಂದು ಕರೆ ನೀಡಿದ್ದಾರೆ.



ಸಲ್ಮಾನ್ ಖಾನ್ ಅವರ ಈ ದಿಟ್ಟ ನಿಲುವಿಗೆ ಚಲನಚಿತ್ರೋದ್ಯಮದಿಂದ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ನಟಿ ನೇಹಾ ಧೂಪಿಯಾ ತಮ್ಮ ಬೆಂಬಲ ಸೂಚಿಸುತ್ತಾ "ಟೈಗರ್ ಜೀವಂತವಾಗಿದೆ" ಎಂದು ಬರೆದು-ಕೊಂಡಿದ್ದರೆ, ನಟ ವರುಣ್ ಧವನ್ ತಮ್ಮ ತಂದೆ ಡೇವಿಡ್ ಧವನ್ ಅವರೊಂದಿಗಿನ ವಿಡಿಯೋ ಹಂಚಿಕೊಂಡು ಸಲ್ಮಾನ್ ಹೇಳಿಕೆಗೆ ಸಂತಸ ವ್ಯಕ್ತಪಡಿಸಿದ್ದಾರೆ. ಹಾಗೆಯೇ ನಿರ್ದೇಶಕ ಕುನಾಲ್ ಕೊಹ್ಲಿ ಕೂಡ ಸಾಮಾಜಿಕ ಜಾಲತಾಣದ ನಡವಳಿಕೆ ಹಾಗೂ ಪಾಪರಾಜಿ ಸಂಸ್ಕೃತಿಯ ಬಗ್ಗೆ ಸಲ್ಮಾನ್ ಎತ್ತಿರುವ ಪ್ರಮುಖ ಅಂಶಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಇನ್ನೊಂದೆಡೆ, ಕತ್ರಿನಾ ಕೈಫ್ ಅವರ ತೂಕದ ಕುರಿತು, ತಮ್ಮ ಸಹೋದರ ಸೊಹೈಲ್ ಅವರ ಮುಖ ಮತ್ತು ಸನ್ನಿ ಡಿಯೋಲ್ ಅವರ ಹರಿದ ಶೂಗಳ ಬಗ್ಗೆ ಟ್ರೋಲ್ ಮಾಡುವವರನ್ನು ಸಲ್ಮಾನ್ ಇದೇ ವೇದಿಕೆಯಲ್ಲಿ ತೀಕ್ಷ್ಣವಾಗಿ ಖಂಡಿಸಿದ್ದಾರೆ. ಆದರೆ, 'ಬಿಗ್ ಬಾಸ್ 7' ರ ಮಾಜಿ ಸ್ಪರ್ಧಿ ಸೋಫಿಯಾ ಹಯಾತ್ ಮಾತ್ರ ಸಲ್ಮಾನ್ ಖಾನ್ ಅವರನ್ನು ಕಪಟಿ ಎಂದು ಟೀಕಿಸಿದ್ದು, ಹಿಂದೆ ಬಿಗ್ ಬಾಸ್ ಶೋನಲ್ಲಿದ್ದಾಗ ಸಲ್ಮಾನ್ ತಮ್ಮ ದೇಹ ಮತ್ತು ಮುಖದ ಕುರಿತು ಟೀಕೆ ಮಾಡಿದ್ದರೆಂದು ಆರೋಪಿಸಿದ್ದಾರೆ.

# ಅಕ್ರಮ ಮನೆಗಳ ಸಕ್ರಮಕ್ಕೆ ಸರ್ಕಾರದಿಂದ ಯೋಜನೆ

ಬೆಂಗಳೂರು.ಸೆ.21–ಬಿಡಿಎ ಜಾಗದಲ್ಲಿ ನಿಯಮಬಾಹಿರವಾಗಿ ನಿರ್ಮಿಸಿರುವ ಮನೆಗಳನ್ನು ನಿಯಮಾನುಸಾರ ಸಕ್ರಮಗೊಳಿಸಲು ಸರ್ಕಾರ ಯೋಜನೆ ರೂಪಿಸುತ್ತಿದೆ.

ಸಕ್ರಮ ಪ್ರಕ್ರಿಯೆಯಲ್ಲಿ ಪಾವತಿಸಬೇಕಾದ ದಂಡ ಹಾಗೂ ಮಾರ್ಗದರ್ಶಿ ಮೌಲ್ಯ ಶುಲ್ಕದಲ್ಲಿ ಶೇ.50ರಷ್ಟು ವಿನಾಯಿತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಈ ಯೋಜನೆ ಜಾರಿಯಾದಲ್ಲಿ ಬಿಡಿಎ ಜಾಗದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿರುವ ಸಾವಿರಾರು ಕುಟುಂಬಗಳಿಗೆ ಅನುಕೂಲವಾಗುವ ನಿರೀಕ್ಷೆಯಿದೆ. ಆದರೆ, ಸಕ್ರಮಕ್ಕೆ ಕೆಲವು ಷರತ್ತುಗಳನ್ನು ವಿಧಿಸಲಾಗುತ್ತಿದೆ.

ಬಿಡಿಎ ಜಾಗದಲ್ಲಿ ಕನಿಷ್ಠ 12 ವರ್ಷಗಳಿಂದ ನೆಲೆಸಿರುವವರಿಗೆ ಮಾತ್ರ ಈ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಗರಿಷ್ಠ 4,000 ಚದರ ಅಡಿ ವಿಸ್ತೀರ್ಣದೊಳಗಿನ ಕಟ್ಟಡಗಳಿಗೆ ಮಾತ್ರ ಯೋಜನೆ ಅನ್ವಯವಾಗಲಿದೆ.

**ವಸತಿ ಕಟ್ಟಡಗಳಿಗೆ ಮಾತ್ರ:**

ಯೋಜನೆಯಡಿ ಕೇವಲ ವಸತಿ ಉದ್ದೇಶಕ್ಕಾಗಿ ನಿರ್ಮಿಸಿರುವ ಕಟ್ಟಡಗಳನ್ನು ಮಾತ್ರ ಸಕ್ರಮಗೊಳಿಸಲು ಅವಕಾಶ ನೀಡಲಾಗುತ್ತದೆ. ವಾಣಿಜ್ಯ ಉದ್ದೇಶಕ್ಕಾಗಿ ಅಥವಾ ವ್ಯಾಪಾರ–ವಹಿವಾಟಿಗೆ ಬಳಸುತ್ತಿರುವ ಕಟ್ಟಡಗಳಿಗೆ ಈ ಯೋಜನೆಯಡಿ ಸಕ್ರಮದ ಅವಕಾಶ ಇರುವುದಿಲ್ಲ.

ಈಗಾಗಲೇ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ಬಾಕಿ ಉಳಿದಿರುವ ಪ್ರಕರಣಗಳಿಗೂ ಈ ಯೋಜನೆಯಿಂದ ಪರಿಹಾರ ದೊರೆಯುವ ನಿರೀಕ್ಷೆಯಿದೆ. ಸುಮಾರು 4,000ಕ್ಕೂ ಹೆಚ್ಚು ಪ್ರಕರಣಗಳಿಗೆ ಯೋಜನೆಯಿಂದ ಅನುಕೂಲವಾಗಬಹುದು ಎಂಬ ಮಾಹಿತಿ ಲಭ್ಯವಾಗಿದೆ.

ಸಕ್ರಮ ಪ್ರಕ್ರಿಯೆ ಜಾರಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಯೋಜನೆಯ ಅಂತಿಮ ರೂಪುರೇಷೆ ಹಾಗೂ ನಿಯಮಾವಳಿಗಳ ಕುರಿತು ಮುಂದಿನ ಹಂತದಲ್ಲಿ ಸ್ಪಷ್ಟತೆ ದೊರೆಯುವ ನಿರೀಕ್ಷೆಯಿದೆ.

# ಲೈಂಗಿಕ ದೌರ್ಜನ್ಯ: ಕುಸ್ತಿಪಟು ಸೌರವ್ ನ್ಯಾಯಾಂಗ ಬಂಧನಕ್ಕೆ

ಮುಂಬೈ, ಸೆ. 21–ಹಲವಾರು ಜನಪ್ರಿಯ ಟಿವಿ ಧಾರಾವಾಹಿಗಳು ಹಾಗೂ ರಣಬೀರ್ ಕಪೂರ್ ಅಭಿನಯದ "ಬ್ರಹ್ಮಾಸ್ತ್ರ" ಚಿತ್ರದಲ್ಲಿ ನಕಾರಾತ್ಮಕ ಪಾತ್ರದ ಮೂಲಕ ಗಮನ ಸೆಳೆದಿದ್ದ ನಟ ಮತ್ತು ಮಾಜಿ ಡಬ್ಲ್ಯೂ ಡಬ್ಲ್ಯೂ ಇ ಕುಸ್ತಿಪಟು ಸೌರವ್ ಗುರ್ಜರ್ ವಿರುದ್ಧ ಲೈಂಗಿಕ ದೌರ್ಜನ್ಯ ಮತ್ತು ವಂಚನೆ ಆರೋಪ ಕೇಳಿಬಂದಿದೆ. ಮದುವೆಯ ಸುಳ್ಳು ಭರವಸೆ ನೀಡಿ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು 29 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಸೌರವ್ ಅವರನ್ನು ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ನಂತರ ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ನಟನನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಬಾಧಿತ ಮಹಿಳೆಯ ದೂರಿನ ಪ್ರಕಾರ, 2021 ರಲ್ಲಿ ಇನ್‌ಸ್ಟಾಗ್ರಾಮ್ ಮೂಲಕ ಇಬ್ಬರ ಪರಿಚಯವಾಗಿದ್ದು, ನಂತರ ವಾಟ್ಸಾಪ್ ಮೂಲಕ ಸಂವಹನ ಮುಂದುವರಿದಿತ್ತು. ಅದೇ ವರ್ಷದ ಡಿಸೆಂಬರ್ 25 ರಂದು ಪ್ರತ್ಯಕ್ಷವಾಗಿ ಭೇಟಿಯಾದ ವೇಳೆ, ಸೌರವ್ ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿದ್ದರು. ಈ ಭರವಸೆಯ ಮೇರೆಗೆ ಇಬ್ಬರೂ ಮೊದಲು ಅಮೆರಿಕದಲ್ಲಿ ಹಾಗೂ ನಂತರ ಭಾರತದಲ್ಲಿ ಒಟ್ಟಿಗೆ ವಾಸಿಸಲು ಪ್ರಾರಂಭಿಸಿದ್ದರು. ಅಷ್ಟೇ ಅಲ್ಲದೆ, ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಗೆ ಜಂಟಿಯಾಗಿ ಹೊಸ ವ್ಯವಹಾರ ಪ್ರಾರಂಭಿಸುವ ಭರವಸೆ ನೀಡಿ, ಕೆಲಸಕ್ಕೆ ರಾಜೀನಾಮೆ ನೀಡುವಂತೆ ಸೌರವ್ ಒತ್ತಾಯಿಸಿದ್ದರು.

?ಆದಾಗ್ಯೂ, ಮಹಿಳೆ ಮದುವೆಯ ಬಗ್ಗೆ ಚರ್ಚಿಸಲು ಮುಂದಾದಾಗಲೆಲ್ಲಾ ಸೌರವ್ ವಿಷಯವನ್ನು ತಳ್ಳಿಹಾಕಿ, ಆಕೆಯಿಂದ ಅಂತರ ಕಾಯ್ದುಕೊಳ್ಳಲು ಪ್ರಾರಂಭಿಸಿದರು. ಮದುವೆಯ ಹೆಸರಿನಲ್ಲಿ ತನ್ನನ್ನು ಲೈಂಗಿಕವಾಗಿ ಬಳಸಿಕೊಂಡು ವಂಚಿಸಲಾಗಿದೆ ಎಂದು ಆರೋಪಿಸಿ ಮಹಿಳೆ ಪೊಲೀಸರ ಮೆಟ್ಟಿಲೇರಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ, ಮುಂಬೈ ವಿಮಾನ ನಿಲ್ದಾಣದಲ್ಲಿ ನಟನನ್ನು ವಶಕ್ಕೆ ಪಡೆದು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದರು. ಮ್ಯಾಜಿಸ್ಟ್ರೇಟ್ ಆದೇಶದಂತೆ ಸೌರವ್ ಗುರ್ಜರ್ ಈಗ 14 ದಿನಗಳ ಕಾಲ ಜೈಲು ಪಾಲಾಗಿದ್ದಾರೆ. 2022 ರಲ್ಲಿ ಬಿಡುಗಡೆಯಾದ "ಬ್ರಹ್ಮಾಸ್ತ್ರ" ಚಿತ್ರದ ಜೊತೆಗೆ ಸೌರವ್ ಅವರು "ಮಹಾಭಾರತ," "ಸಂಕಟಮೋಚನ ಮಹಾಬಲಿ ಹನುಮಾನ್," ಮತ್ತು "ಪೃಥ್ವಿ ವಲ್ಲಭ – ಇತಿಹಾಸ ಮತ್ತು ನಿಗೂಢತೆ" ಮುಂತಾದ ಪ್ರಸಿದ್ಧ ಧಾರಾವಾಹಿಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು.

# ಇರಾನ್ ಜಿಡಿಪಿ ಕುಸಿತ: ಹಣದುಬ್ಬರ ಭಾರತಕ್ಕಿಂತ ಹೆಚ್ಚು

ನವದೆಹಲಿ,ಸೆ.21–ಮತ್ತು ಕಠಿಣ ಅಮೆರಿಕನ್ ನಿರ್ಬಂಧಗಳ ಪರಿಣಾಮವಾಗಿ ಇರಾನ್‌ನ ಆರ್ಥಿಕತೆಯು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ದೇಶದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಗಣನೀಯವಾಗಿ ಕುಸಿದಿದೆ ಹಾಗೂ ಹಣದುಬ್ಬರ ದರವು ಭಾರತಕ್ಕಿಂತ ಸುಮಾರು 15 ಪಟ್ಟು ಹೆಚ್ಚಾಗಿದೆ. ಇರಾನ್ ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರ, ಪರ್ಷಿಯನ್ ಕ್ಯಾಲೆಂಡರ್‌ನ ಮೊದಲ ತ್ರೈಮಾಸಿಕವಾದ ಮಾರ್ಚ್ ಅಂತ್ಯದಿಂದ ಜೂನ್ ಅಂತ್ಯದ ಅವಧಿಯಲ್ಲಿ, ಯುಎಸ್ ಮತ್ತು ಇಸ್ರೇಲ್‌ನೊಂದಿಗಿನ ಸಂಘರ್ಷದ ನಡುವೆಯೇ ದೇಶದ ಜಿಡಿಪಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 10.1 ರಷ್ಟು ಭಾರಿ ಕುಸಿತ ಕಂಡಿದೆ. ಈ ಹಿನ್ನೆಲೆಯಲ್ಲಿ ಇರಾನ್ ತನ್ನ ಪ್ರಸ್ತುತ ನಿಲುವನ್ನು ಮರುಪರಿಶೀಲಿಸಿ ಯುದ್ಧವನ್ನು ಕೊನೆಗೊಳಿಸಬೇಕೆಂಬ ಒತ್ತಡ ಹೆಚ್ಚುತ್ತಿದೆ.



ಅಂತರರಾಷ್ಟ್ರೀಯ ಹಣಕಾಸು ನಿಧಿ ಅಂದಾಜಿನ ಪ್ರಕಾರ 2026 ರಲ್ಲಿ ಇರಾನ್‌ನ ನೈಜ ಜಿಡಿಪಿ ಶೇಕಡಾ 5.4 ರಷ್ಟು ಕುಸಿಯಲಿದ್ದು, ಸರಾಸರಿ ಹಣದುಬ್ಬರವು ಶೇಕಡಾ 68.9 ತಲುಪಲಿದೆ. ಆಗಸ್ಟ್ 2026 ರಲ್ಲಿ ಭಾರತದ ಚಿಲ್ಲರೆ ಹಣದುಬ್ಬರವು ಶೇಕಡಾ 4.82 ರಷ್ಟಿದ್ದ ಪರಿಣಾಮ, ಇರಾನ್‌ನ 12 ತಿಂಗಳ ಸರಾಸರಿ ಹಣದುಬ್ಬರ ದರವಾದ ಶೇಕಡಾ 69.9 ಭಾರತಕ್ಕಿಂತ ಸುಮಾರು 14.3 ಪಟ್ಟು ಹೆಚ್ಚಾಗಿದೆ. ಇರಾನ್‌ನ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್ ವ್ಯಕ್ತಪಡಿಸಿದಂತೆ, ತೈಲ ಮತ್ತು ಅನಿಲ ರಫ್ತಿನ ಮೇಲಿನ ಹೊಸ ದಿಗ್ಬಂಧನಗಳು ಹಾಗೂ ಹಾರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರ ಕಡಿತಗೊಂಡಿರುವುದು ದೇಶದ ವಿದೇಶಿ ಕರೆನ್ಸಿ ಸಂಗ್ರಹವನ್ನು ಸಂಪೂರ್ಣವಾಗಿ ಕುಸಿದುಬೀಳುವಂತೆ ಮಾಡಿದೆ. ರಾಯಿಟರ್ಸ್ ವರದಿಯ ಪ್ರಕಾರ, ಇರಾನ್‌ನ ಕಚ್ಚಾ ತೈಲ ಲೋಡ್ ಮಾರ್ಚ್‌ನಲ್ಲಿ ದಿನಕ್ಕೆ 2 ಮಿಲಿಯನ್ ಬ್ಯಾರೆಲ್‌ಗಳಷ್ಟಿದ್ದುದು ಆಗಸ್ಟ್ ವೇಳೆಗೆ ಕೇವಲ 220,000 ದಿಂದ 255,000 ಬ್ಯಾರೆಲ್‌ಗಳಿಗೆ ಇಳಿಕೆಯಾಗಿದೆ.

ಇರಾನ್ ಕರೆನ್ಸಿಯ ಮೌಲ್ಯವು ತೀವ್ರವಾಗಿ ಕುಸಿದಿದ್ದು, ಸೆಪ್ಟೆಂಬರ್ ಆರಂಭದ ವೇಳೆಗೆ ಮುಕ್ತ ಮಾರುಕಟ್ಟೆಯಲ್ಲಿ ಒಂದು ಅಮೆರಿಕನ್ ಡಾಲರ್ ಮೌಲ್ಯವು 2.2 ಮಿಲಿಯನ್ ರಿಯಾಲ್‌ಗಳನ್ನು ದಾಟಿದೆ. ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಗ್ರಾಹಕ ಬೆಲೆಗಳು ಶೇಕಡಾ 89 ಕ್ಕಿಂತ ಹೆಚ್ಚು ಏರಿಕೆಯಾಗಿದ್ದು, ಆಹಾರ ಪದಾರ್ಥಗಳ ಬೆಲೆಗಳು ಜನಸಾಮಾನ್ಯರಿಗೆ ಎಟುಕದಂತಾಗಿವೆ. ಯುದ್ಧದ ಪ್ರಭಾವದಿಂದಾಗಿ ದೇಶದ ಕೈಗಾರಿಕಾ ವಲಯವೂ ಸಂಕಷ್ಟದಲ್ಲಿದ್ದು, ಆಗಸ್ಟ್‌ನಲ್ಲಿ ಕಚ್ಚಾ ವಸ್ತುಗಳ ಸ್ಟಾಕ್ ಸೂಚ್ಯಂಕವು 39.3 ಕ್ಕೆ ಮತ್ತು ಆರ್ಥಿಕ ಪಿ ಎಮ್ ಐ 46.9 ಕ್ಕೆ ಕುಸಿದಿದೆ. ಪಿ ಎಮ್ ಐ 50 ಕ್ಕಿಂತ ಕಡಿಮೆಯಿರುವುದು ಆರ್ಥಿಕ ಚಟುವಟಿಕೆಗಳ ತೀವ್ರ ಹಿಂಜರಿತವನ್ನು ಸೂಚಿಸುತ್ತಿದ್ದು, ಕಚ್ಚಾ ವಸ್ತುಗಳ ಕೊರತೆಯಿಂದಾಗಿ ಹಲವು ಕಾರ್ಖಾನೆಗಳು ಉತ್ಪಾದನೆಯನ್ನು ಸ್ಥಗಿತಗೊಳಿಸುವ ಅಥವಾ ಸಂಪೂರ್ಣವಾಗಿ ಮುಚ್ಚಲ್ಪಡುವ ಆತಂಕದಲ್ಲ ಮುಳುಗಿವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಉತ್ಪಾದನಾ ಸಾಮರ್ಥ್ಯವು ಕ್ಷೀಣಿಸಿ ಆರ್ಥಿಕ ಬಿಕ್ಕಟ್ಟು ಮತ್ತಷ್ಟು ವಿಕೋಪಕ್ಕೆ ಹೋಗಲಿದ್ದು, ಇದನ್ನು ತಡೆಯಲು ಇರಾನ್ ತಕ್ಷಣವೇ ಯುದ್ಧವನ್ನು ತಡೆಯುವುದು ಅನಿವಾರ್ಯವಾಗಿದೆ.

# ಡಯಾನಾ 'ಪ್ರತೀಕಾರದ ಉಡುಪು' ಪ್ರದರ್ಶನ

ಲಂಡನ್, ಸೆ.21: 'ಜನರ ರಾಜಕುಮಾರಿ' ಎಂದೇ ಜನಪ್ರಿಯರಾಗಿದ್ದ ಡಯಾನಾ ಅವರ 'ಪ್ರತೀಕಾರದ ಉಡುಪು' ಶುಕ್ರವಾರ ಲಂಡನ್‌ನಲ್ಲಿ ಪ್ರದರ್ಶನಗೊಂಡಿದೆ. ರಾಜ ಚಾರ್ಲ್ಸ್ ಅವರ ಸಾವಿನ ಕುರಿತ ಹೊಸ ಆರೋಪಗಳು ಪ್ರಕಟವಾದ ಕೆಲವೇ ದಿನಗಳಲ್ಲಿ ನಡೆದ ಈ ಪ್ರದರ್ಶನವು, ಸುಮಾರು 30 ವರ್ಷಗಳ ಬಳಿಕವೂ ರಾಜಮನೆತನದ ಮೇಲೆ ಡಯಾನಾ ಬೀರಿರುವ ಪ್ರಭಾವವನ್ನು ತೋರಿಸಿದೆ.



1990ರ ದಶಕದ ಆರಂಭದಲ್ಲಿ ಚಾರ್ಲ್ಸ್?ಡಯಾನಾ ದಾಂಪತ್ಯ ಮುರಿದುಬಿದ್ದ ಸಂದರ್ಭದಲ್ಲಿ, ಚಾರ್ಲ್ಸ್ ತಮ್ಮ ದಾಂಪತ್ಯೇತರ ಸಂಬಂಧ ಒಪ್ಪಿಕೊಂಡ ಕೆಲವೇ ದಿನಗಳಲ್ಲಿ ಡಯಾನಾ ಭುಜ ತೆರೆದ ಕಪ್ಪು ರೇಷ್ಮೆ ಉಡುಪು ಧರಿಸಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಅದು ದಂಪತಿಯ ನಡುವಿನ ಅಸಮಾಧಾನದ ಸಂಕೇತವಾಯಿತು.

ಡಯಾನಾ ಅವರ ಸಹೋದರ ಚಾರ್ಲ್ಸ್ ಸ್ಪೆನ್ಸರ್ ಅವರ ಶೀಘ್ರದಲ್ಲೇ ಪ್ರಕಟವಾಗಲಿರುವ ಪುಸ್ತಕದ ಭಾಗಗಳು ಈ ವಾರ ಪ್ರಕಟಗೊಂಡಿದ್ದು, ಡಯಾನಾ ಸಾವಿನ ತಕ್ಷಣ ಚಾರ್ಲ್ಸ್ 'ಅತಿಯಾದ ಉಲ್ಲಾಸದಲ್ಲಿದ್ದರು' ಎಂದು ಆರೋಪಿಸಿವೆ. ಬಕಿಂಗ್‌ಹ್ಯಾಮ್ ಅರಮನೆ, ದುಃಖದಿಂದ ಲೇಖಕರ ನೆನಪು ಪ್ರಭಾವಿತವಾಗಿರಬಹುದು ಎಂದು ಪ್ರತಿಕ್ರಿಯಿಸಿದೆ.

ಸೋಥೆಬೀಸ್‌ನಲ್ಲಿ ಅನಾವರಣಗೊಂಡ ಉಡುಪು ಹಾಂಗ್‌ಕಾಂಗ್, ಜಿನೀವಾ ಮತ್ತು ನ್ಯೂಯಾರ್ಕ್ ಪ್ರವಾಸ ಕೈಗೊಳ್ಳಲಿದೆ. ಡಿಸೆಂಬರ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ಹರಾಜಾಗಲಿರುವ ಇದರ ಅಂದಾಜು ಬೆಲೆ 1.5 ಲಕ್ಷದಿಂದ 3 ಲಕ್ಷ ಡಾಲರ್. 1994ರಲ್ಲಿ ಧರಿಸಿದ್ದ ಈ ಉಡುಪು, ಕ್ಯಾಮಿಲಾ ಅವರೊಂದಿಗಿನ ಚಾರ್ಲ್ಸ್ ಸಂಬಂಧದ ಹಿನ್ನೆಲೆಯಲ್ಲಿ ಡಯಾನಾ ತೋರಿದ ಧೈರ್ಯದ ಸಂಕೇತವೆಂದು ಪರಿಗಣಿಸಲಾಗಿತ್ತು. ಕ್ಯಾಮಿಲಾರನ್ನು ಅವರು 2005ರಲ್ಲಿ ವಿವಾಹವಾದರು.

ಸೋಥೆಬೀಸ್‌ನ ಜಾಗತಿಕ ಫ್ಯಾಷನ್ ಮುಖ್ಯಸ್ಥೆ ಮೋರ್ಗನ್ ಹಲೀಮಿ, "ಅತ್ಯಂತ ಸುಂದರ, ಶಕ್ತಿಶಾಲಿಯಾಗಿ ಕಾಣಲು ಅವರು ಈ ಉಡುಪು ಆಯ್ದುಕೊಂಡರು. ಇದು ಆತ್ಮವಿಶ್ವಾಸ ಮತ್ತು ಸ್ವಾಭಿಮಾನದ ಸಂಕೇತ" ಎಂದರು.

ಶುಕ್ರವಾರ ಜನರು ಉಡುಪು ವೀಕ್ಷಿಸಲು ಬಂದಾಗ, ಸ್ಪೆನ್ಸರ್ ಆರೋಪಗಳು ಬ್ರಿಟನ್‌ನ ಪತ್ರಿಕೆಗಳು, ರೇಡಿಯೊ ಮತ್ತು ಪಬ್‌ಗಳ ಚರ್ಚೆಗಳಲ್ಲಿ ಪ್ರಮುಖವಾಗಿದ್ದವು. "ಎಲ್ಲರೂ ಅವರನ್ನು ಇಷ್ಟಪಟ್ಟಿದ್ದರು; ಅವರ ಕಥೆ ಎಂದಿಗೂ ಸಾಯದು," ಎಂದು 54 ವರ್ಷದ ಮಕ್ಕಳ ವೈದ್ಯಕೀಯ ನರ್ಸ್ ಮೆರೆಟೆ ಲುಂಡ್ ಜೆನ್ಸನ್ ಹೇಳಿದರು.

ಡಯಾನಾ ನಿರಾಶ್ರಿತರು, ಆಸ್ಪತ್ರೆಯ ಮಕ್ಕಳು ಮತ್ತು ಏಡ್ಸ್ ಪೀಡಿತರನ್ನು ಆತ್ಮೀಯವಾಗಿ ಭೇಟಿಯಾಗುವುದಕ್ಕಾಗಿ ಪ್ರಸಿದ್ಧರಾಗಿದ್ದರು. 1997ರಲ್ಲಿ ಪ್ಯಾರಿಸ್‌ನಲ್ಲಿ ಕಾರು ಅಪಘಾತದಲ್ಲಿ ಮೃತಪಟ್ಟಾಗ ಅವರಿಗೆ 36 ವರ್ಷ. ಹಿಂದಿನ ವರ್ಷವೇ ಚಾರ್ಲ್ಸ್‌ನಿಂದ ವಿಚ್ಛೇದನ ಅಂತಿಮಗೊಂಡಿತ್ತು. ಆಗ ವಿಲಿಯಂ ಮತ್ತು ಹ್ಯಾರಿ ಕ್ರಮವಾಗಿ 15 ಮತ್ತು 12 ವರ್ಷದವರಾಗಿದ್ದರು.

ಅವರ ಸಾವಿನಿಂದ ರಾಜಮನೆತನ ಬಿಕ್ಕಟ್ಟಿಗೆ ಸಿಲುಕಿತು. ದೇಶಾದ್ಯಂತ ವ್ಯಕ್ತವಾದ ದುಃಖಕ್ಕೆ ವಿರುದ್ಧವಾಗಿದ್ದ ರಾಜಮನೆತನದ ಭಾವನಾರಹಿತ ನಿಲುವು ಜನರ ಆಕ್ರೋಶಕ್ಕೆ ಕಾರಣವಾಗಿ, ಸಂಸ್ಥೆ ತನ್ನ ಧೋರಣೆ ಬದಲಾಯಿಸಬೇಕಾಯಿತು.

ಚಾರ್ಲ್ಸ್ 'ಡಯಾನಾಳನ್ನು ಶೀಘ್ರದಲ್ಲೇ ಮರೆತುಬಿಡುತ್ತೇವೆ' ಎಂದಿದ್ದರು ಎಂದು ಸ್ಪೆನ್ಸರ್ ಬರೆದಿದ್ದಾರೆ. "ಇತರರು ದುಃಖದಿಂದ ಮಾತೇ ಆಡಲಾಗದೆ ಇದ್ದರೆ, ಅವರು ಲಾಟರಿ ಗೆದ್ದವನಂತೆ ಅತಿಯಾದ ಉಲ್ಲಾಸದಲ್ಲಿದ್ದರು," ಎಂದು ಅವರು ಹೇಳಿದ್ದಾರೆ.

ಕ್ಯಾನ್ಸರ್ ಚಿಕಿತ್ಸೆಯಲ್ಲಿರುವ 77 ವರ್ಷದ ಚಾರ್ಲ್ಸ್, ದೂರವಾಗಿರುವ ಪುತ್ರ ಹ್ಯಾರಿಯೊಂದಿಗೆ ಸಂಬಂಧ ಸುಧಾರಿಸಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಕಿರಿಯ ಸಹೋದರ ಆಂಡ್ರ್ಯೂ ಮೌಂಟ್‌ಬ್ಯಾಟನ್–ವಿಂಡ್ಸರ್ ಬಂಧನದ ಪರಿಣಾಮವನ್ನೂ ಎದುರಿಸುತ್ತಿದ್ದಾರೆ. ಡೈಲಿ ಮೇಲ್‌ನಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವ ಪುಸ್ತಕ ಮಂಗಳವಾರ ಬಿಡುಗಡೆಯಾಗಲಿದೆ.

ಅರಮನೆ ವಕ್ತಾರರು, "ಸಹೋದರನ ಸಾವಿನ ನೋವು ವಿವೇಕ, ತೀರ್ಮಾನ ಮತ್ತು ನೆನಪನ್ನು ಮಸುಕುಗೊಳಿಸಬಹುದು," ಎಂದರು. ರಾಜಕೀಯ ವಿಶ್ಲೇಷಕಿ ಅಪುವಾ ಹಗನ್, ಪ್ರತಿಕ್ರಿಯೆ 'ಚಳಿಯುತ, ದೂರದ'ದ್ದಾಗಿದ್ದು, ಡಯಾನಾ ಇನ್ನೂ ಎಷ್ಟು ಜನಪ್ರಿಯರೆಂಬುದನ್ನು ರಾಜಮನೆತನ ಅರಿತಿಲ್ಲವೆಂಬುದನ್ನು ತೋರಿಸಿದೆ ಎಂದರು.

# ಚಿತ್ರಸಂತೆ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

## ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ಅಗತ್ಯ–ದೀಪುಗೌಡ

ಬೆಂಗಳೂರು,ಸೆ21: ನಗರದ ಅರಮನೆ ಮೈದಾನದಲ್ಲಿ ನಡೆದ 'ಚಿತ್ರಸಂತೆ ಚಲನಚಿತ್ರ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಹಾಗೂ ಯುವ ಕಲಾವಿದರು, ನಿರ್ದೇಶಕರು, ನಿರ್ಮಾಪಕರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.




ಸಮಾರಂಭದಲ್ಲಿ 'ಕಾಂತಾರ' ಖ್ಯಾತಿಯ ನಿರ್ದೇಶಕ ಹಾಗೂ ನಟ ರಿಷಬ್ ಶೆಟ್ಟಿ, ನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಉಮಾಶ್ರೀ, ನಟ ವಿನೋದ್ ಪ್ರಭಾಕರ್ , ಚಿತ್ರಸಂತೆಯ ಗಿರೀಶ್ ಗೌಡ ಹಾಗೂ ಸ್ಮಾರ್ಟ್ ಕ್ವಿಕ್ ಮತ್ತು ನಿಯೋ ಫ್ರೆಶ್ ಸಂಸ್ಥಾಪಕ ದೀಪುಗೌಡ ಅವರು ಚಿತ್ರರಂಗದ ಸಾಧಕರಿಗೆ 'ಚಿತ್ರಸಂತೆ ಪ್ರಶಸ್ತಿ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಿರ್ದೇಶಕ ಸುಧೀರ್, ನಟಿ ಪ್ರಿಯಾಂಕಾ ಉಪೇಂದ್ರ, ನಿರ್ಮಾಪಕಿ ನಿವೇದಿತಾ ಶಿವಕುಮಾರ್ ಸೇರಿದಂತೆ ಹಲವು ಕಲಾವಿದರು ಹಾಗೂ ಚಿತ್ರರಂಗದ ಸಾಧಕರಿಗೆ 'ಚಿತ್ರಸಂತೆ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಿಷಬ್ ಶೆಟ್ಟಿ, ಕನ್ನಡ ಚಲನಚಿತ್ರಗಳು ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತಿವೆ. ಚಿತ್ರರಂಗದ ಬೆಳವಣಿಗೆಗೆ ಹೊಸ ನಿರ್ದೇಶಕರು ಹಾಗೂ ಕಲಾವಿದರಿಗೆ ಪ್ರೋತ್ಸಾಹ ಮತ್ತು ಸಹಕಾರ ದೊರೆಯಬೇಕು. ಉತ್ತಮ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಿದಾಗ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಂದು ಬೆಂಬಲಿಸುತ್ತಾರೆ. ಇಂತಹ ಪ್ರೋತ್ಸಾಹವೇ ಚಿತ್ರರಂಗವನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಸ್ಮಾರ್ಟ್ ಕ್ವಿಕ್ ಮತ್ತು ನಿಯೋ ಫ್ರೆಶ್ ಸಂಸ್ಥಾಪಕ ದೀಪುಗೌಡ ಮಾತನಾಡಿ, ಕಲೆ ಮತ್ತು ಕಲಾವಿದರು ಉಳಿಯಬೇಕು ಹಾಗೂ ಬೆಳೆಯಬೇಕು ಎಂಬ ಉದ್ದೇಶದಿಂದ ತಮ್ಮ ಸಂಸ್ಥೆಗಳ ಮೂಲಕ ಸಹಕಾರ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ. ಹಿರಿಯ ಕಲಾವಿದರು ಹಾಗೂ ಸಂಕಷ್ಟದಲ್ಲಿರುವ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಗಿರೀಶ್ ಗೌಡರು ಚಲನಚಿತ್ರ ಮತ್ತು ಜನರ ನಡುವೆ ಅವಿನಾಭವ ಸಂಭಂದವಿದೆ. ಚಲನಚಿತ್ರದಲ್ಲಿರುವ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳುತ್ತಾರೆ. ಚಿತ್ರಸಂತೆ ಕಳೆದ 14ವರ್ಷಗಳಿಂದ ಕಲೆ, ಕಲಾವಿದರು, ನಟ, ನಟಿಯರನ್ನ ಗುರುತಿಸಿ ಕಾರ್ಯ ಮಾಡುತ್ತಿದೆ.

ಸಮಾರಂಭದಲ್ಲಿ ಚಿತ್ರರಂಗದ ಹಲವು ಗಣ್ಯರು, ಕಲಾವಿದರು, ನಿರ್ದೇಶಕರು, ನಿರ್ಮಾಪಕರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

# 46ನೇ ವಸಂತಕ್ಕೆ ಕಾಲಿಟ್ಟ ಕರೀನಾ ಕಪೂರ್

ಬಾಲಿವುಡ್ ನಟಿ ಕರೀನಾ ಕಪೂರ್ ಇಂದು 46ನೇ ವಸಂತಕ್ಕೆ ಕಾಲಿಡುತ್ತಿದ್ದಾರೆ. ಸೆಪ್ಟೆಂಬರ್ 21, 1980 ರಂದು ಜನಿಸಿದ ಕರೀನಾ, ಎರಡೂವರೆ ದಶಕಗಳಿಗೂ ಹೆಚ್ಚು ಕಾಲದ ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ವೈವಿಧ್ಯಮಯ ಪಾತ್ರಗಳ ಮೂಲಕ ಹಿಂದಿ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.



2000 ರಲ್ಲಿ 'ರೆಫ್ಯೂಜಿ' ಚಿತ್ರದ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ಅವರು, ಆರಂಭದಲ್ಲಿ ಗ್ಲಾಮರಸ್ ನಟಿಯಾಗಿ ಗುರುತಿಸಿಕೊಂಡರು. 'ಕಭಿ ಖುಷಿ ಕಭಿ ಗಮ್' ಚಿತ್ರದ 'ಪೂ' (ಪೂಜಾ ಶರ್ಮಾ) ಪಾತ್ರವು ಅವರನ್ನು ಅಪಾರ ಜನಪ್ರಿಯತೆಯ ತುದಿಗೆ ತಲುಪಿಸಿತು. 'ಮುಝೆ ಕುಚ್ ಕೆಹನಾ ಹೈ', 'ಅಜ್ನಬೀ' ಮತ್ತು 'ಮುಜ್ಸೆ ದೋಸ್ತಿ ಕರೋಗೆ!' ನಂತಹ ವಾಣಿಜ್ಯ ಚಿತ್ರಗಳು ಅವರ ಗ್ಲಾಮರಸ್ ಇಮೇಜ್ ಅನ್ನು ಮತ್ತಷ್ಟು ಗಟ್ಟಿಮಾಡಿದವು. ಆದರೆ, ಕೇವಲ ಗ್ಲಾಮರ್‌ಗೆ ಸೀಮಿತವಾಗದೆ ಕಥೆಗೆ ಆಳವಿರುವ ಪಾತ್ರಗಳನ್ನು ಆಯ್ಕೆ ಮಾಡಲು ತೊಡಗಿದ ಕರೀನಾ ಅವರಿಗೆ 'ಚಮೇಲಿ' (2004) ಚಿತ್ರ ದೊಡ್ಡ ತಿರುವು ನೀಡಿತು. ಇದರಲ್ಲಿ ಲೈಂಗಿಕ ಕಾರ್ಯಕರ್ತೆಯಾಗಿ ನಟಿಸಿ ಸಬಾ ಸೈ ಎನಿಸಿಕೊಂಡರು. ನಂತರ 'ದೇವ್' ಮತ್ತು ವಿಶಾಲ್ ಭಾರದ್ವಾಜ್ ಅವರ 'ಓಂಕಾರ' (ಡಾಲಿ ಮಿಶ್ರಾ ಪಾತ್ರ) ಚಿತ್ರಗಳಲ್ಲಿನ ಪ್ರಬುದ್ಧ ಅಭಿನಯಕ್ಕಾಗಿ ಫಿಲ್ಮ್‌ಫೇರ್ ವಿಮರ್ಶಕರ ಪ್ರಶಸ್ತಿಯನ್ನು ಪಡೆದರು. 2007 ರ 'ಜಬ್ ವಿ ಮೆಟ್' ಚಿತ್ರದ ಉತ್ಸಾಹಿ 'ಗೀತ್' ಪಾತ್ರವು ಅವರ ವೃತ್ತಿಜೀವನದ ಅತ್ಯಂತ ಸ್ಮರಣೀಯ ಅಭಿನಯವಾಗಿ ಹೊರಹೊಮ್ಮಿತು.

2012ರಲ್ಲಿ ಸೈಫ್ ಅಲಿ ಖಾನ್ ಅವರನ್ನು ವಿವಾಹವಾದ ನಂತರವೂ ಕರೀನಾ ತಮ್ಮ ನಟನಾ ಪಯಣವನ್ನು ಮುಂದುವರಿಸಿದರು. 'ಹೀರೋಯಿನ್' ಚಿತ್ರದ ಮಾಹಿ ಅರೋರಾ, 'ತಲಾಶ್' ಚಿತ್ರದ ರೋಸಿ, 'ಉಡ್ತಾ ಪಂಜಾಬ್' ಮತ್ತು 'ಬಜರಂಗಿ ಭಾಯಿಜಾನ್' ನಂತಹ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳನ್ನು ಪೋಷಿಸಿದರು. 'ವೀರೆ ದಿ ವೆಡ್ಡಿಂಗ್' ಮತ್ತು 'ಗುಡ್ ನ್ಯೂಸ್' ನಂತಹ ಕಮರ್ಷಿಯಲ್ ಹಿಟ್‌ಗಳ ಜೊತೆಗೆ, ನೆಟ್‌ಫ್ಲಿಕ್ಸ್‌ನ 'ಜಾನೆ ಜಾನ್' ಮತ್ತು 'ದಿ ಬಕಿಂಗ್ಹ್ಯಾಮ್ ಮರ್ಡರ್ಸ್' ಮೂಲಕ ಒಟಿಟಿ ಹಾಗೂ ಗಂಭೀರ ತನಿಖಾ ಪಾತ್ರಗಳಿಗೂ ಸೈ ಎನಿಸಿಕೊಂಡರು.

ಇತ್ತೀಚೆಗೆ ಮೇಘನಾ ಗುಲ್ಜಾರ್ ನಿರ್ದೇಶನದ 'ದಯಾರ' ಚಿತ್ರದಲ್ಲಿ ಕರೀನಾ 'ಡಿಸಿಪಿ ಅಜೂನಿ ಕೊಹ್ಲಿ' ಎಂಬ ಶಕ್ತಿಶಾಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಎನ್‌ಕೌಂಟರ್ ಮತ್ತು ಪೊಲೀಸ್ ಹೊಣೆಗಾರಿಕೆಯ ಸುತ್ತ ಸಾಗುವ ಈ ಸಸ್ಪೆನ್ಸ್ ಡ್ರಾಮಾದಲ್ಲಿ ಅವರ ಅಭಿನಯವು, ಗ್ಲಾಮರಸ್ 'ಪೂ' ಪಾತ್ರದಿಂದ ಗಂಭೀರ ಪೊಲೀಸ್ ಅಧಿಕಾರಿಯವರೆಗಿನ ಅವರ ಅದ್ಭುತ ನಟನಾ ಪಯಣಕ್ಕೆ ಸಾಕ್ಷಿಯಾಗಿದೆ.

# ಅ.8ರಿಂದ ಗ್ರೇಟ್ ಇಂಡಿಯನ್ ಫೆಸ್ಟಿವಲ್

ಬೆಂಗಳೂರು,ಸೆ.21: 'ಅಮೆಜಾನ್ ಗ್ರೇಟ್ ಇಂಡಿಯನ್ ಫೆಸ್ಟಿವಲ್' ಅ.8, 2026ರಿಂದ ಆರಂಭವಾಗಲಿದೆ. ಸ್ಮಾರ್ಟ್‌ಫೋನ್, ಎಲೆಕ್ಟ್ರಾನಿಕ್ಸ್, ಟಿವಿ, ಫ್ಯಾಷನ್, ಸೌಂದರ್ಯ, ಕಿಚನ್, ಮನೆಬಳಕೆ ಹಾಗೂ ದಿನಸಿ ಸೇರಿದಂತೆ ಹಲವು ವಿಭಾಗಗಳಲ್ಲಿ ವಿಶೇಷ ಕೊಡುಗೆಗಳು ಲಭ್ಯವಾಗಲಿವೆ.

ಎಸ್‌ಬಿಐ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳು ಹಾಗೂ ಇಎಂಐ ವಹಿವಾಟುಗಳಿಗೆ ಶೇ.10ರಷ್ಟು ತತ್‌ಕ್ಷಣದ ರಿಯಾಯಿತಿ ದೊರೆಯಲಿದೆ. ಪ್ರೈಮ್ ಸದಸ್ಯರಿಗೆ ಶೇ.10ರವರೆಗೆ ಹೆಚ್ಚುವರಿ ಉಳಿತಾಯದ ಅವಕಾಶವಿದೆ. 'ನೋ ಕಾಸ್ಟ್ ಇಎಂಐ', ಎಕ್ಸ್‌ಚೇಂಜ್ ಹಾಗೂ 'ಬೈ ಮೋರ್ ಸೇವ್ ಮೋರ್' ಸೇರಿದಂತೆ ಹಲವು ಆಫರ್‌ಗಳನ್ನೂ ನೀಡಲಾಗಿದೆ.

ಎಐ ಆಧಾರಿತ ವೈಶಿಷ್ಟ್ಯಗಳ ಮೂಲಕ ಉತ್ಪನ್ನಗಳ ಹೋಲಿಕೆ, ಬೆಲೆ ಇತಿಹಾಸ ಪರಿಶೀಲನೆ ಹಾಗೂ ಶಿಫಾರಸು ಪಡೆಯುವ ಸೌಲಭ್ಯವಿದೆ. ಹಬ್ಬದ ಹಿನ್ನೆಲೆಯಲ್ಲಿ 400 ನಗರಗಳಲ್ಲಿ 1.60 ಲಕ್ಷಕ್ಕೂ ಹೆಚ್ಚು ಕಾಲೋಚಿತ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ.

ವೇಗದ ಡೆಲಿವರಿಗಾಗಿ 20 ಹೊಸ ಫುಲ್‌ಫಿಲ್‌ಮೆಂಟ್ ಕೇಂದ್ರ, 6 ವಿಂಗಡಣಾ ಕೇಂದ್ರ ಹಾಗೂ 150 ಡೆಲಿವರಿ ಕೇಂದ್ರಗಳನ್ನು ಸೇರ್ಪಡೆ ಮಾಡಲಾಗಿದೆ. 'ಅಮೆಜಾನ್ ನೌ' ಸೇವೆಯನ್ನು ದೀಪಾವಳಿಗೂ ಮುನ್ನ 100 ನಗರಗಳಿಗೆ ವಿಸ್ತರಿಸಲು ಕಂಪನಿ ಮುಂದಾಗಿದೆ.

# ಆಫ್ಘಾನ್ ಮೇಲೆ ಮತ್ತೆ ಪಾಕ್ ದಾಳಿ: ಮೂವರ ಸಾವು

ಕಾಬೂಲ್, ಸೆ.21: ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಗಡಿ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದ್ದು, ಪಾಕಿಸ್ತಾನ ಸೇನೆ ಇಂದು ಬೆಳಗ್ಗೆ ಅಫ್ಘಾನಿಸ್ತಾನದ ಕುನಾರ್ ಮತ್ತು ಪಕ್ತಿಕಾ ಪ್ರಾಂತ್ಯಗಳ ಹಲವು ಪ್ರದೇಶಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ ಎಂದು ವರದಿಯಾಗಿದೆ. ಕುನಾರ್‌ನಲ್ಲಿ ನಡೆದ ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಪಕ್ತಿಕಾ ಪ್ರಾಂತ್ಯದ ಬರ್ಮಲ್ ಜಿಲ್ಲೆಯ ರಖಾ ಮತ್ತು ತೋರ್ಕಂಡಿ ಪ್ರದೇಶಗಳಲ್ಲಿ ಎರಡು ಪ್ರತ್ಯೇಕ ದಾಳಿಗಳು ನಡೆದಿವೆ. ಒಂದು ದಾಳಿ ಖಾಲಿ ಮನೆಯೊಂದರ ಮೇಲೆ ಹಾಗೂ ಮತ್ತೊಂದು ಹಿಂದಿನ ಅಂಗಡಿಯೊಂದರ ಮೇಲೆ ನಡೆದಿದ್ದು, ಎರಡೂ ಕಟ್ಟಡಗಳಿಗೆ ಹಾನಿಯಾಗಿದೆ. ಈ ದಾಳಿಗಳಲ್ಲಿ ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ವರದಿಗಳು ತಿಳಿಸಿವೆ.

ಕುನಾರ್ ಪ್ರಾಂತ್ಯದಲ್ಲಿ ನಡೆದ ಪ್ರತ್ಯೇಕ ವೈಮಾನಿಕ ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಮೃತಪಟ್ಟವರ ಗುರುತು ಹಾಗೂ ದಾಳಿ ನಡೆದ ನಿಖರ ಸ್ಥಳದ ಕುರಿತು ತಕ್ಷಣದ ಮಾಹಿತಿ ಲಭ್ಯವಾಗಿಲ್ಲ. ANI, TOLOnews ವರದಿಗಳನ್ನು ಉಲ್ಲೇಖಿಸಿ ಈ ಮಾಹಿತಿ ನೀಡಿದೆ.

ಪಾಕಿಸ್ತಾನ–ಅಫ್ಘಾನಿಸ್ತಾನ ಗಡಿ ಸಂಘರ್ಷದಿಂದ ನಾಗರಿಕರ ಮೇಲಿನ ಪರಿಣಾಮದ ಬಗ್ಗೆ ವಿಶ್ವಸಂಸ್ಥೆಯ ಅಫ್ಘಾನಿಸ್ತಾನ ಸಹಾಯ ಮಿಷನ್ ಕಳವಳ ವ್ಯಕ್ತಪಡಿಸಿದೆ. 2026ರ ಏಪ್ರಿಲ್‌ನಿಂದ ಜೂನ್‌ವರೆಗೆ ಗಡಿ ಸಂಘರ್ಷಕ್ಕೆ ಸಂಬಂಧಿಸಿದಂತೆ 399 ನಾಗರಿಕರ ಸಾವು–ನೋವುಗಳನ್ನು ಗಓಂಒಂ ದಾಖಲಿಸಿದೆ. ಇದರಲ್ಲಿ 57 ಮಂದಿ ಮೃತಪಟ್ಟಿದ್ದು, 342 ಮಂದಿ ಗಾಯಗೊಂಡಿದ್ದಾರೆ. ಸಂತ್ರಸ್ತರಲ್ಲಿ 40 ಮಹಿಳೆಯರು ಮತ್ತು 112 ಮಕ್ಕಳು ಸೇರಿದ್ದಾರೆ.

ಪಕ್ತಿಯಾ, ಪಕ್ತಿಕಾ ಮತ್ತು ಕುನಾರ್ ಪ್ರಾಂತ್ಯಗಳಲ್ಲಿ ವೈಮಾನಿಕ ದಾಳಿಗಳು ಹಾಗೂ ಭೂ ಸಂಘರ್ಷಗಳಿಂದ ಹೆಚ್ಚಿನ ನಾಗರಿಕ ಹಾನಿ ಸಂಭವಿಸಿದೆ ಎಂದು ಗಓಂಒಂ ತಿಳಿಸಿದೆ. ಜೂನ್ 28ರಂದು ಈ ಮೂರು ಪ್ರಾಂತ್ಯಗಳಲ್ಲಿ ನಡೆದ ದಾಳಿಗಳಲ್ಲಿ ಕನಿಷ್ಠ 28 ನಾಗರಿಕರು ಮೃತಪಟ್ಟಿದ್ದು, 49 ಮಂದಿ ಗಾಯಗೊಂಡಿದ್ದರು ಎಂದು ವಿಶ್ವಸಂಸ್ಥೆ ಹೇಳಿತ್ತು. ಅಫ್ಘಾನಿಸ್ತಾನದ ನೆಲವನ್ನು ಬಳಸಿಕೊಂಡು ಉಗ್ರ ಸಂಘಟನೆಗಳು ಪಾಕಿಸ್ತಾನದ ವಿರುದ್ಧ ದಾಳಿ ನಡೆಸಲು ಯೋಧರನ್ನು ನೇಮಕ, ತರಬೇತಿ ಹಾಗೂ ಶಸ್ತ್ರಸಜ್ಜಿತಗೊಳಿಸುತ್ತಿವೆ ಎಂದು ಪಾಕಿಸ್ತಾನ ಆರೋಪಿಸುತ್ತಿದೆ. ಈ ಭದ್ರತಾ ಬೆದರಿಕೆಯ ಹಿನ್ನೆಲೆಯಲ್ಲಿ ತನ್ನ ಸೇನಾ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಇಸ್ಲಾಮಾಬಾದ್ ಹೇಳಿಕೊಂಡಿದೆ.



ಆದರೆ, ತಾಲಿಬಾನ್ ಆಡಳಿತ ಈ ಆರೋಪಗಳನ್ನು ತಳ್ಳಿಹಾಕಿದ್ದು, ಅಫ್ಘಾನಿಸ್ತಾನದೊಳಗೆ ಪಾಕಿಸ್ತಾನ ನಡೆಸುವ ಯಾವುದೇ ಸೇನಾ ಕಾರ್ಯಾಚರಣೆಯನ್ನು ದೇಶದ ಸಾರ್ವಭೌಮತ್ವದ ಉಲ್ಲಂಘನೆ ಎಂದು ವಿರೋಧಿಸಿದೆ.

**ತಾಲಿಬಾನ್‌ನಿಂದ ಕಠಿಣ ಎಚ್ಚರಿಕೆ**

ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದು, ಅಫ್ಘಾನಿಸ್ತಾನದ ನೆಲದ ಮೇಲೆ ಸೇನಾ ಕಾರ್ಯಾಚರಣೆ ನಡೆಸಿದರೆ ಅದಕ್ಕೆ ಪ್ರತಿಕ್ರಿಯಿಸುವ ಹಕ್ಕು ತಮ್ಮ ದೇಶಕ್ಕಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನವು ಅಂತರರಾಷ್ಟ್ರೀಯ ಕಾನೂನಿನ ವಿಧಿಗಳನ್ನು ಉಲ್ಲೇಖಿಸಿ ಅಫ್ಘಾನ್ ಪ್ರದೇಶ ಪ್ರವೇಶಿಸಿದರೂ, ತಮ್ಮ ದೇಶದ ರಕ್ಷಣೆಗಾಗಿ ಪ್ರತಿಕ್ರಿಯಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪಾಕಿಸ್ತಾನದ ಹೊಸ ವೈಮಾನಿಕ ದಾಳಿಗಳ ಹಿನ್ನೆಲೆಯಲ್ಲಿ ಎರಡೂ ದೇಶಗಳ ನಡುವಿನ ಗಡಿ ಉದ್ವಿಗ್ನತೆ ಮತ್ತಷ್ಟು ತೀವ್ರವಾಗುವ ಆತಂಕ ವ್ಯಕ್ತವಾಗಿದೆ. ದಾಳಿಯ ಸಂಪೂರ್ಣ ಹಾನಿ ಮತ್ತು ಸಾವು–ನೋವಿನ ಕುರಿತು ಸ್ಥಳೀಯ ಅಧಿಕಾರಿಗಳ ಪರಿಶೀಲನೆ ಮುಂದುವರಿದಿದ್ದು, ಸೋಮವಾರದ ದಾಳಿಯ ಸಾವಿನ ಸಂಖ್ಯೆ ಬದಲಾಗುವ ಸಾಧ್ಯತೆಯೂ ಇದೆ.

# ದೆಹಲಿಯಲ್ಲಿ ಡಂಪರ್ ಹರಿದು ನಾಲ್ವರು ಕಾರ್ಮಿಕರು ಸಾವು



ನವದೆಹಲಿ, ಸೆ.21: ರಾಜಧಾನಿ ದೆಹಲಿಯ ಸರಿತಾ ವಿಹಾರ್‌ನಲ್ಲಿ ರಾತ್ರಿ ರಸ್ತೆ ಕಾಮಗಾರಿ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಡಂಪರ್ ಹರಿದು ನಾಲ್ವರು ಮೃತಪಟ್ಟಿದ್ದಾರೆ. ಇಂದು ಮುಂಜಾನೆ ಘಟನೆ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಅವರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ.

ಸಂಚಾರ ಪೊಲೀಸರಿಗಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸುತ್ತಿದ್ದ ಕಾರ್ಮಿಕರ ಕ್ರೇನ್ ಮತ್ತು ಆಟೋರಿಕ್ಷಾಗೆ ಡಂಪರ್ ಡಿಕ್ಕಿ ಹೊಡೆದಿದೆ. ಮೃತರನ್ನು ಉಮೇಶ್ (23), ಪ್ರವೀಣ್ (35), ಸೂರಜ್ (34) ಮತ್ತು ಅನೂಪ್ (26) ಎಂದು ಗುರುತಿಸಲಾಗಿದೆ.

ದುರಂತದಲ್ಲಿ ಒಂದೇ ಕುಟುಂಬದ ಪ್ರವೀಣ್ ಮತ್ತು ಅನೂಪ್ ಮೃತಪಟ್ಟಿದ್ದು, ಅವರ ಸಂಬಂಧಿ ಆಕಾಶ್ ಅಲಿಯಾಸ್ ತುಷಾರ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಪ್ರವೀಣ್ ಅವರೇ ಅನೂಪ್ ಹಾಗೂ ಆಕಾಶ್ ಅವರನ್ನು ಕೆಲಸಕ್ಕೆ ಸೇರಿಸಿದ್ದರು. "ಮೂವರು ಕೆಲಸಕ್ಕೆ ಹೋಗಿದ್ದರು. ಇಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಜೀವಕ್ಕಾಗಿ ಹೋರಾಡುತ್ತಿದ್ದಾರೆ" ಎಂದು ಕುಟುಂಬಸ್ಥರು ನೋವು ವ್ಯಕ್ತಪಡಿಸಿದ್ದಾರೆ.

ಮೃತ ಉಮೇಶ್ ಹಗಲಿನಲ್ಲಿ ಆಟೋ ಚಾಲನೆ ಮಾಡುತ್ತಿದ್ದು, ಕುಟುಂಬದ ನೆರವಿಗಾಗಿ ರಾತ್ರಿ ಸಿಸಿಟಿವಿ ಅಳವಡಿಕೆ ಕೆಲಸ ಮಾಡುತ್ತಿದ್ದರು. ಅವರಿಗೆ ಇಬ್ಬರು ಚಿಕ್ಕಮಕ್ಕಳಿದ್ದಾರೆ. ಅಪಘಾತದ ಬಳಿಕ ಕುಟುಂಬಗಳಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ.

# ಜಿಗಣಿಯ ಹೆನ್ನಾಗರದಲ್ಲಿ ಆರಂಭವಾಗದ ಬಟಾನಿಕಲ್ ಗಾರ್ಡನ್, ಸ್ಥಳೀಯರ ಅಸಮಾಧಾನ

ಬೆಂಗಳೂರು, ಸೆ, 21– ಆನೇಕಲ್ ತಾಲೂಕಿನ ಜಿಗಣಿ ಹೋಬಳಿಯ ಹೆನ್ನಾಗರ ಗ್ರಾಮದ ಸರ್ವೆ ನಂ.5ರಲ್ಲಿರುವ ಸುಮಾರು 520 ಕೋಟಿ ರೂ.ಗೂ ಅಧಿಕ ಮೌಲ್ಯದ ಸರ್ಕಾರಿ ಗೋಮಾಳದ ಜಾಗ ಒತ್ತುವರಿಯಾಗುವ ಹಾಗೂ ದುರುಪಯೋಗವಾಗುವ ಭೀತಿ ಎದುರಾಗಿದೆ. ಬಟಾನಿಕಲ್ ಗಾರ್ಡನ್ ನಿರ್ಮಾಣಕ್ಕಾಗಿ 1995 ರಲ್ಲೇ ಅರಣ್ಯ ಇಲಾಖೆಗೆ ಜಾಗ ವರ್ಗಾವಣೆ ಮಾಡಲಾಗಿದ್ದರೂ ಕಾಮಗಾರಿ ಇನ್ನೂ ಆರಂಭವಾಗಿಲ್ಲ ಎಂಬುದು ಸ್ಥಳೀಯರ ಆಕ್ಷೇಪವಾಗಿದೆ.

ಸರ್ವೆ ನಂ.5ರಲ್ಲಿ ಒಟ್ಟು 78.5 ಎಕರೆ ಜಾಗ ವಿದ್ದು, ಈ ಪೈಕಿ ಬಟಾನಿಕಲ್ ಗಾರ್ಡನ್ ನಿರ್ಮಾಣ ಹಾಗೂ ಸಂರಕ್ಷಣೆ ಗಾಗಿ ಅರಣ್ಯ ಇಲಾಖೆಗೆ 52.25 ಎಕರೆ, ಸರ್ಕಾರಿ ಪ್ರೌಢ ಶಾಲೆಯ ಆಟದ ಮೈದಾನಕ್ಕೆ 8 ಎಕರೆ, ಸಾರ್ವಜನಿಕ ಸ್ಮಶಾನಕ್ಕೆ 7 ಎಕರೆ, ಯಲ್ಲಮ್ಮ ದೇವಿ ದೇವಾಲಯಕ್ಕೆ 2.20 ಎಕರೆ, ಆಶ್ರಯ ಯೋಜನೆಯ ಮನೆಗಳ ನಿರ್ಮಾಣಕ್ಕೆ 8 ಎಕರೆ ಭೂಕಂದಾಯ ಕಾಯ್ದೆ 1964ರ ಕಲಂ 94 ಸಿಸಿ ಅಡಿಯಲ್ಲಿ 1 ಎಕರೆ ಹಾಗೂ ಕಾವೇರಿ ನೀರು ಸಂಗ್ರಹಣ ಟ್ಯಾಂಕ್‌ಗೆ 7 ಗುಂಟೆ ಜಾಗ ಮೀಸಲಿಡಲಾಗಿದೆ. ಬಟಾನಿಕಲ್ ಗಾರ್ಡನ್ ನಿರ್ಮಾಣಕ್ಕೆ ಮೀಸಲಿಟ್ಟಿರುವ ಜಾಗದಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಅನಧಿಕೃತ ಕಟ್ಟಡಗಳು ಹಾಗೂ ಒತ್ತುವರಿಗೆ ಅವಕಾಶ ನೀಡುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.



ಹೆನ್ನಾಗರ ಗ್ರಾಮದ ಮುಖಂಡರಾದ ಎಂ. ಬಾಬುರೆಡ್ಡಿ ಮಾತನಾಡಿ ಸರ್ಕಾರಿ ಗೋಮಾಳವನ್ನು ಸಂರಕ್ಷಿಸಿ ನಿಗದಿತ ಉದ್ದೇಶಗಳಿಗೆ ಸದುಪಯೋಗ ಪಡಿಸಿಕೊಳ್ಳಬೇಕು. ಇಲ್ಲವಾದರೆ ಜಾಗ ಭೂಕಬಳಿಕೆದಾರರ ಪಾಲಾಗುವ ಸಾಧ್ಯತೆ ಇದೆ ಎಂದು ಹೇಳಿದರು.

ಆನೇಕಲ್‌ನಲ್ಲಿ ಭೂಮಿಯ ಬೆಲೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಜಮೀನುಗಳ ಒತ್ತುವರಿಯೂ ಹೆಚ್ಚುತ್ತಿದೆ. ಕೆಲ ವರ್ಷಗಳ ಕಾಲ ಗಮನಹರಿಸದ ಜಾಗಗಳಲ್ಲಿ ಶೆಡ್ ನಿರ್ಮಿಸಿ, ಬಳಿಕ ಬಾಡಿಗೆ ಮನೆಗಳನ್ನಾಗಿ ಪರಿವರ್ತಿಸುವ ಮೂಲಕ ಹಂತ ಹಂತವಾಗಿ ಒತ್ತುವರಿ ಮಾಡಲಾಗುತ್ತಿದೆ. ಹೆನ್ನಾಗರ ಸರ್ವೆ ನಂ.5ರಲ್ಲೂ ಕೆಲವೆಡೆ ಶೆಡ್‌ಗಳನ್ನು ನಿರ್ಮಿಸಲಾಗುತ್ತಿದೆ ಎಂದು ಸ್ಥಳೀಯ ಮಧು ಆರೋಪಿಸಿದರು.

3 ಸಂಬಂಧಪಟ್ಟ ಅಧಿಕಾರಿಗಳು ಸರ್ವೆ ನಂ.5ರ ಜಾಗವನ್ನು ಸಮಗ್ರವಾಗಿ ಸರ್ವೆ ಮಾಡಿಸಿ, ವಿವಿಧ ಉದ್ದೇಶಗಳಿಗೆ ಮೀಸಲಿಟ್ಟಿರುವ ಜಾಗಕ್ಕೆ ಬೇಲಿ ಹಾಕಿ ರಕ್ಷಿಸಬೇಕು. ಸರ್ಕಾರಿ ಜಾಗ ಎಂಬ ಫಲಕಗಳನ್ನುರು ಅಳವಡಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಜಾಗ ಬಲಾಢ್ಯರ ಪಾಲಾಗುವ ಸಾಧ್ಯತೆ ಇದೆ ಎಂದು ತ ಅವರು ಹೇಳಿದರು. 250 ಕೋಟಿ ರೂ.ಗೂ ಅಧಿಕ ದಿತ ಮೌಲ್ಯದ ಸರ್ಕಾರಿ ಜಾಗವನ್ನು ಸಂರಕ್ಷಿಸುವುದರ ಜತೆಗೆ, ಅರಣ್ಯ ಇಲಾಖೆಗೆ ಬೊಟಾನಿಕಲ್ ಗಾರ್ಡನ್ ವ ನಿರ್ಮಾಣಕ್ಕಾಗಿ ಮೀಸಲಿಟ್ಟಿರುವ 52.25 ಎಕರೆ ಜಾಗವನ್ನು ನಿಗದಿತ ಉದ್ದೇಶಕ್ಕೆ ಬಳಸಬೇಕು ವ ಎಂಬುದು ಸ್ಥಳೀಯರ ಒತ್ತಾಸೆಯಾಗಿದೆ.

ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹೆನ್ನಾಗರ ಗ್ರಾಮದ ಸೈಟ್ ನಂ. 5ರಲ್ಲಿ 78 ಎಕರೆ 5 ಗುಂಟೆ ಭೂಮಿಯಲ್ಲಿ ಸರ್ಕಾರಿ ಗೋಮಾಳ ಒತ್ತುವರಿಯಾಗಿದ್ದು ಅರಣ್ಯ ಇಲಾಖೆಗೆ ಜಮೀನು ಮಂಜೂರಾದರೂ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಗಾರ್ಡನ್ ನಿರ್ಮಾಣಕ್ಕೆ ಕ್ರಮ ಕೈಗೊಂಡಿಲ್ಲ ಎಂದು ತಿಳಿಸಿರುವ ಬಾಬುರೆಡ್ಡಿ ಅವರು ಕೂಡಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಅರಣ್ಯ ಸಚಿವ ರಾಮಲಿಂಗಾರೆಡ್ಡಿಯವರು ಕ್ರಮ ಕೈಗೊಳ್ಳಬೇಕು ಮತ್ತು ಈ ಜಾಗದಲ್ಲಿ ಉದ್ಯಾನವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

# ಗೆಲುವಿನ ಸವಿ ಅರಿಯಲು ಸೋಲಿನ ಅನುಭವವೂ ಅಗತ್ಯ



ಬೆಂಗಳೂರು, ಸೆ.21: "ಗೆಲುವಿನ ಸವಿಯನ್ನು ಅರಿಯಲು ಸೋಲಿನ ಅನುಭವವೂ ಅಗತ್ಯ. ನೀವು ಇನ್ನು 10 ವರ್ಷಗಳ ನಂತರ ಏನಾಗಬೇಕೆಂದು ಬಯಸುತ್ತೀರೋ, ಅದನ್ನು ಇಂದೇ ಕಲ್ಪಿಸಿಕೊಳ್ಳಿ. ಆ ಗುರಿಯತ್ತ ನಿರಂತರವಾಗಿ ಸಾಗುತ್ತಿರಿ," ಎಂದು ಮಾಜಿ ವಿಧಾನಸಭಾ ಸದಸ್ಯೆ ಹಾಗೂ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ರೆಡ್ಡಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸುರಾನ ಕಾಲೇಜಿನ ಸೌತ್ ಎಂಡ್ ಕ್ಯಾಂಪಸ್‌ನಲ್ಲಿ ನಡೆದ 'ಮಲ್ಟಿವರ್ಸ್ ಎಕ್ಸ್‌ಪೋ 2026' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲೇ ಗುರಿ, ಪರಿಶ್ರಮ ಮತ್ತು ಸೋಲನ್ನು ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಅಂತರರಾಷ್ಟ್ರೀಯ ಚಿತ್ರಕಲಾವಿದ ಹಾಗೂ ಸಾಹಿತಿ ಡಾ. ಎಂ.ಎಸ್. ಮೂರ್ತಿ, "ವಿದ್ಯಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವ ಬೆಳವಣಿಗೆಗೆ ಇಂತಹ ಅನುಭವಾಧಾರಿತ ಕಾರ್ಯಕ್ರಮಗಳು ಅತ್ಯಂತ ಅಗತ್ಯ," ಎಂದು ಹೇಳಿದರು.

'ಮಲ್ಟಿವರ್ಸ್ ಎಕ್ಸ್‌ಪೋ 2026' ಅನ್ನು ವಿದ್ಯಾರ್ಥಿಗಳ ಸೃಜನಶೀಲತೆ, ನಾಯಕತ್ವ, ತಂಡದ ಕೆಲಸ ಮತ್ತು ಪ್ರತಿಭೆಯನ್ನು ಅನಾವರಣಗೊಳಿಸುವ ಅಂತರ ಕಾಲೇಜು ವೇದಿಕೆಯಾಗಿಸಿ ರೂಪಿಸಲಾಗಿತ್ತು. ಬಿಎ, ಬಿಎಸ್‌ಸಿ, ಬಿಕಾಂ, ಬಿಬಿಎ, ಬಿಸಿಎ, ಎಂಎ, ಎಂಎಸ್‌ಸಿ ಹಾಗೂ ಎಂಕಾಂ ವಿಭಾಗಗಳ ವಿವಿಧ ಸ್ಪರ್ಧೆಗಳು, ಆಟಗಳು, ಮನರಂಜನಾ ಕಾರ್ಯಕ್ರಮಗಳು, ವಸ್ತು ಪ್ರದರ್ಶನಗಳು ಮತ್ತು ಕರಕುಶಲ ಪ್ರದರ್ಶನಗಳನ್ನು ಆಯೋಜಿಸಿದ್ದವು.

ಯುವಕ ಸಂಘದ ಆಶ್ರಯದಲ್ಲಿ ವಿವಿಧ ಆಟಗಳು ಮತ್ತು ಚಟುವಟಿಕೆಗಳು ನಡೆದಿದ್ದು, 25ಕ್ಕೂ ಹೆಚ್ಚು ಕಾಲೇಜುಗಳಿಂದ 3,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಭಿನ್ನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಕಾರ್ಯಕ್ರಮದ ಸಮಾರೋಪದ ಅಂಗವಾಗಿ ಸುರಾನ ವಿದ್ಯಾಲಯ, ಸುರಾನ ಪೀಣ್ಯ ಮತ್ತು ಸುರಾನ ಸೌತ್ ಎಂಡ್ ಕಾಲೇಜಿನ ವಿದ್ಯಾರ್ಥಿಗಳು ಹೆಸರಿನ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲೆ ಡಾ. ವೀಣಾ ಕೆ.ಎನ್., ಪಿಯುಸಿ ಪ್ರಾಂಶುಪಾಲ ಪ್ರೊ. ಚಂದ್ರಶೇಖರಪ್ಪ, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 14 ರಾಜ್ಯಗಳಲ್ಲಿ ಭಾರೀ ಮಳೆ ನಿರೀಕ್ಷೆ

ನವದೆಹಲಿ,ಸೆ.21–ಮುಂಗಾರು ಮಾರುತಗಳು ನಿರ್ಗಮಿಸುವ ಮುನ್ನವೇ ದೇಶದಾದ್ಯಂತ ಹವಾಮಾನದಲ್ಲಿ ಪ್ರಮುಖ ಬದಲಾವಣೆಗಳಾಗುತ್ತಿದ್ದು, ಭಾರತೀಯ ಹವಾಮಾನ ಇಲಾಖೆ (ಐಎಂಡಿ) 14 ರಾಜ್ಯಗಳಲ್ಲಿ ಭಾರೀ ಮಳೆಯ ಮುನ್ನೆಚ್ಚರಿಕೆ ನೀಡಿದೆ. ಕರಾವಳಿ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಪ್ರತಿ ಗಂಟೆಗೆ 60 ರಿಂದ 65 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದ್ದು, ಈಶಾನ್ಯ ರಾಜ್ಯಗಳಲ್ಲಿ ಸಿಡಿಲು ಮತ್ತು ಮಿಂಚು ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಬಂಗಾಳಕೊಲ್ಲಿಯ ಪೂರ್ವ–ಮಧ್ಯ ಭಾಗ ಹಾಗೂ ಉತ್ತರ ಅಂಡಮಾನ್ ಸಮುದ್ರ ಪ್ರದೇಶದಲ್ಲಿ ಉಂಟಾಗಿರುವ ಕಡಿಮೆ ಒತ್ತಡದ ಪರಿಣಾಮವಾಗಿ ದಕ್ಷಿಣ ಮತ್ತು ಮಧ್ಯ ಭಾರತದಲ್ಲಿ ಮಳೆಯ ಪ್ರಮಾಣ ತೀವ್ರಗೊಳ್ಳಲಿದೆ. ಮಂಗಳವಾರ ಮತ್ತು ಬುಧವಾರ ಉತ್ತರ ಕರಾವಳಿ ಆಂಧ್ರಪ್ರದೇಶ, ಮಂಗಳವಾರದಿಂದ ಶುಕ್ರವಾರದವರೆಗೆ ದಕ್ಷಿಣ ಒಡಿಶಾ, ಬುಧವಾರದಿಂದ ಶುಕ್ರವಾರದವರೆಗೆ ಛತ್ತೀಸ್‌ಗಢ ಹಾಗೂ ತೆಲಂಗಾಣ ಮತ್ತು ಗುರುವಾರ ಹಾಗೂ ಶುಕ್ರವಾರ ವಿದರ್ಭ ಪ್ರದೇಶಗಳಲ್ಲಿ ಹವಾಮಾನ ಇಲಾಖೆಯು ಸುರಿವ ಮಳೆಯ ತೀವ್ರತೆಯ ಎಚ್ಚರಿಕೆಯನ್ನು ನೀಡಿದೆ.



?ಉತ್ತರ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯ ಮುಂದುವರಿಯಲಿದ್ದು, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಒಡಿಶಾ, ಸಿಕ್ಕಿಂ ಮತ್ತು ಉಪ–ಹಿಮಾಲಯನ್ ಪಶ್ಚಿಮ ಬಂಗಾಳದಲ್ಲಿ ಸೆಪ್ಟೆಂಬರ್ 26 ರವರೆಗೆ ಮಳೆ ಸುರಿಯಲಿದೆ. ಬಿಹಾರದಲ್ಲಿ ಈ ಅವಧಿಯಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆಯಿದ್ದರೆ, ಪಶ್ಚಿಮ ಬಂಗಾಳದ ಗಂಗಾ ಬಯಲು ಸೀಮೆಯಲ್ಲಿ ಸೆಪ್ಟೆಂಬರ್ 22 ರಿಂದ 25 ರ ನಡುವೆ ಹೆಚ್ಚು ಮಳೆಯಾಗಲಿದೆ. ಮಧ್ಯಪ್ರದೇಶ, ವಿದರ್ಭ ಮತ್ತು ಛತ್ತೀಸ್‌ಗಢಗಳಲ್ಲಿ ಸೆಪ್ಟೆಂಬರ್ 21 ರಿಂದ 26 ರವರೆಗೆ ಗುಡುಗು ಮಿಂಚು ಸಹಿತ ಮಳೆ ಮುಂದುವರಿಯಲಿದ್ದು, ಸೆಪ್ಟೆಂಬರ್ 24 ರಂದು ದಕ್ಷಿಣ ಛತ್ತೀಸ್‌ಗಢದಲ್ಲಿ ಭಾರಿ ಪ್ರಮಾಣದ ಮಳೆಯಾಗುವ ನಿರೀಕ್ಷೆಯಿದೆ. ಈಶಾನ್ಯ ರಾಜ್ಯಗಳಾದ ಅಸ್ಸಾಂ ಮತ್ತು ಮೇಘಾಲಯದಲ್ಲಿ ಸೆಪ್ಟೆಂಬರ್ 23 ರಿಂದ 25 ರವರೆಗೆ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದಲ್ಲಿ ಸೆಪ್ಟೆಂಬರ್ 22 ರಿಂದ 24 ರವರೆಗೆ ಮಳೆಯಾಗಲಿದ್ದರೆ, ಅರುಣಾಚಲ ಪ್ರದೇಶದಲ್ಲಿ ಸೋಮವಾರದಿಂದ ಶನಿವಾರದವರೆಗೆ ಸುಂಟರಗಾಳಿ ಹಾಗೂ ಗುಡುಗು ಸಹಿತ ಅತ್ಯಂತ ಭಾರೀ ಮಳೆಯಾಗಲಿದೆ ಎಂದು ಅಂದಾಜಿಸಲಾಗಿದೆ.

# ರಾಜೀನಾಮೆ ನಿರ್ಧಾರ ವಾಪಸ್ಸಿಗೆ ಎಚ್‌ಕೆಪಿ ಗೆ ಗೂಳಿಗೌಡ ಮನವಿ

ಬೆಂಗಳೂರು,ಸೆ.21: ಗದಗ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಎಚ್ಚರಿಸಿರುವ ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಗದಗ ಶಾಸಕ ಎಚ್. ಕೆ. ಪಾಟೀಲ್ ಅವರ ನಿರ್ಧಾರಕ್ಕೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಕಳವಳ ವ್ಯಕ್ತಪಡಿಸಿದ್ದು, ತಮ್ಮ ನಿರ್ಧಾರವನ್ನು ಹಿಂಪಡೆಯುವಂತೆ ಬಹಿರಂಗ ಪತ್ರ ಬರೆದು ಮನವಿ ಮಾಡಿದ್ದಾರೆ.

ಗದಗ ಶಾಸಕರೂ ಹಾಗೂ ಮಾಜಿ ಸಚಿವರೂ ಆದ ಎಚ್.ಕೆ. ಪಾಟೀಲ್ ಅವರು ಕೃಷಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಅಪಾರ ಅನುಭವ ಹೊಂದಿದವರು. ಅಂತಹ ಅನುಭವಿ ನಾಯಕರು ರಾಜೀನಾಮೆಯಂತಹ ನಿರ್ಧಾರ ಪ್ರಕಟಿಸಿರುವುದು ತೀವ್ರ ಬೇಸರ ತಂದಿದೆ ಎಂದು ಗೂಳಿಗೌಡ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಬರ ಘೋಷಣೆಗೆ ಕೇಂದ್ರದ ಮಾರ್ಗದರ್ಶಿಯೇ ಆಧಾರ ರಾಜ್ಯ ಸರ್ಕಾರಕ್ಕೂ ರೈತರ ಹಿತಾಸಕ್ತಿಯ ಬಗ್ಗೆ ಅಪಾರ ಕಾಳಜಿಯಿದ್ದು, ಬರ ಘೋಷಣೆ ವಿಚಾರದಲ್ಲಿ ಯಾವುದೇ ರೀತಿಯ ರಾಜಕೀಯ ಒತ್ತಡ ಅಥವಾ ಪಕ್ಷಪಾತ ಮಾಡುವುದಿಲ್ಲ ಎಂದು ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಕೇಂದ್ರ ಸರ್ಕಾರದ 'ಬರನಿರ್ವಹಣಾ ಕೈಪಿಡಿ–2020' ಹಾಗೂ ನಿಯಮಾವಳಿಗಳ ಅನ್ವಯವೇ ಬರಗಾಲವನ್ನು ಘೋಷಿಸಲಾಗುತ್ತದೆ.

ಬರ ನಿರ್ಧಾರದ ಪ್ರಮುಖ ಮಾನದಂಡಗಳು: ಮಳೆ ಕೊರತೆ: ಸಾಮಾನ್ಯ ಮಳೆ ಪ್ರಮಾಣ ಹಾಗೂ ಸುರಿದ ಮಳೆಯ ನಡುವಿನ ಶೇಕಡಾವಾರು ವ್ಯತ್ಯಾಸ. ಒಣ ಮಳೆಯಾವಧಿ: ಸತತವಾಗಿ ಮಳೆಯಿಲ್ಲದೆ ಒಣ ಹವೆಯು ಮುಂದುವರಿದ ದಿನಗಳು. ಬೆಳೆ ಹಾನಿ: ಬಿತ್ತನೆ ಪ್ರದೇಶ ಹಾಗೂ ಇಳುವರಿಯ ಮೇಲಾಗಿರುವ ವ್ಯತಿರಿಕ್ತ ಪರಿಣಾಮ. ತಾಂತ್ರಿಕ ದತ್ತಾಂಶ: ಉಪಗ್ರಹ ಚಿತ್ರಗಳು, ಮಣ್ಣಿನ ತೇವಾಂಶ, ಅಂತರ್ಜಲ ಮಟ್ಟ ಹಾಗೂ ಜಲಾಶಯಗಳ ನೀರಿನ ಲಭ್ಯತೆ. ಸರ್ಕಾರಕ್ಕೆ ಮಾರ್ಗದರ್ಶಕರಾಗಿರಿ ಗದಗ ತಾಲೂಕಿನಲ್ಲಿ ಬರ ಪರಿಸ್ಥಿತಿಯ ಕುರಿತು ಈಗಾಗಲೇ ಅಧಿಕಾರಿಗಳಿಂದ ವರದಿ ಪಡೆಯಲಾಗಿದ್ದು, ಹಂತ ಹಂತವಾಗಿ ಬರಪೀಡಿತ ತಾಲೂಕುಗಳ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಈ ಸಂಕಷ್ಟದ ಸಮಯದಲ್ಲಿ ಹಿರಿಯ ನಾಯಕರಾದ ಎಚ್.ಕೆ. ಪಾಟೀಲ್ ಅವರು ಸರ್ಕಾರದ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ನೀಡಬೇಕೇ ಹೊರತು ರಾಜೀನಾಮೆಯ ನಿರ್ಧಾರಕ್ಕೆ ಬರಬಾರದು ಎಂದು ದಿನೇಶ್ ಗೂಳಿಗೌಡ ವಿನಂತಿಸಿದ್ದಾರೆ.

ಬರ ಘೋಷಣೆ ವಿವಾದ ಹಾಗೂ ಎಚ್.ಕೆ. ಪಾಟೀಲ್ ಅವರ ರಾಜೀನಾಮೆ ಎಚ್ಚರಿಕೆ–ಯ ಕುರಿತ ವಿಡಿಯೋ ವರದಿ. ಗದಗ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ರಾಜೀನಾಮೆ ನೀಡುವುದಾಗಿ ಎಚ್. ಕೆ. ಪಾಟೀಲ್ ನೀಡಿದ್ದ ಎಚ್ಚರಿಕೆಯು ರಾಜಕೀಯ ವಲಯದಲ್ಲಿ ಸೃಷ್ಟಿಸಿರುವ ಸಂಚಲನ ಮತ್ತು ಬೆಳವಣಿಗೆಗಳ ಕುರಿತು ಈ ವಿಡಿಯೋ ಸ್ಪಷ್ಟ ಮಾಹಿತಿ ನೀಡುತ್ತದೆ.

# ನಿರ್ಮಾಣ ಹಂತದ ಅಪಾರ್ಟ್‌ಮೆಂಟ್‌ಗಳಿಗೆ ಒಂದೇ ದಿನದಲ್ಲಿ 'ಬಿ' ಖಾತೆ: ಎನ್‌ಆರ್‌ಆರ್ ಆರೋಪ

ಬೆಂಗಳೂರು, ಸೆ. 21– ನಿರ್ಮಾಣ ಹಂತದಲ್ಲಿರುವ ಹಾಗೂ ಅಗತ್ಯ ಪ್ರಮಾಣಪತ್ರಗಳನ್ನು ಪಡೆಯದ ಅಪಾರ್ಟ್‌ಮೆಂಟ್‌ಗಳಲ್ಲಿನ ಫ್ಲ್ಯಾಟ್‌ಗಳಿಗೆ ಒಂದೇ ದಿನದಲ್ಲಿ 'ಬಿ' ಖಾತೆ ಮಾಡಿಕೊಟ್ಟಿರುವ ಆರೋಪ ಕೇಳಿಬಂದಿದ್ದು, ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಕಂದಾಯ ವಿಭಾಗದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಇದೀಗ ವಿವಾದಕ್ಕೆ ಕಾರಣವಾಗಿದೆ.

ಬೆಂಗಳೂರು ಪಶ್ಚಿಮ ನಗರಪಾಲಿಕೆಯ ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ನ ಹೊಸಹಳ್ಳಿ ಗ್ರಾಮದಲ್ಲಿರುವ ಶ್ರೀ ಬೃಂದಾವನ ಅಪಾರ್ಟ್‌ಮೆಂಟ್ ಹಾಗೂ ರಾಜರಾಜೇಶ್ವರಿನಗರ ವಾರ್ಡ್‌ನ ಹೊಸಕೆರೆಹಳ್ಳಿ ಗ್ರಾಮದ ಗಿರಿಧಾಮ ಬಡಾವಣೆಯಲ್ಲಿರುವ ನಂದಿ ಸೆರಿನಿಟಿ ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಈ ಆರೋಪ ಮಾಡಲಾಗಿದೆ.

ಈ ಎರಡೂ ಕಟ್ಟಡಗಳಿಗೆ ಇದುವರೆಗೂ Completion Certificate (CC) ಮತ್ತು Occupancy Certificate (OC) ಪಡೆದಿಲ್ಲ. ಅಲ್ಲದೆ, ಕಟ್ಟಡಗಳು ಇನ್ನೂ ನಿರ್ಮಾಣ ಹಂತದಲ್ಲಿದ್ದು, ಃಇಖಅಔಔನಿಂದ ವಿದ್ಯುತ್ ಸಂಪರ್ಕವೂ ಕಲ್ಪಿಸಲಾಗಿಲ್ಲ ಎಂದು ಬಿಜೆಪಿ ಮುಖಂಡ ಎನ್ ಅರ್ ರಮೇಶ್ ಆರೋಪಿಸಿದ್ದಾರೆ.

**ಅರ್ಜಿಯ ದಿನವೇ ಖಾತೆ?**

ಸೆ.4 ಮತ್ತು ಸೆ.7ರಂದು ಬಿಲ್ಡರ್ ಸಂಸ್ಥೆ ಫ್ಲ್ಯಾಟ್‌ಗಳಿಗೆ ಖಾತೆ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸಿದ ದಿನವೇ 32ಕ್ಕೂ ಹೆಚ್ಚು ಫ್ಲ್ಯಾಟ್‌ಗಳಿಗೆ 'ಬಿ' ಖಾತೆ ಮಾಡಿಕೊಡಲಾಗಿದೆ ಎಂದು ಆರೋಪಿಸಲಾಗಿದೆ.

ಆದರೆ, ಈ ಅರ್ಜಿಗಳನ್ನು ಸ್ಥಳೀಯ ಕಂದಾಯ ಅಧಿಕಾರಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ತಿರಸ್ಕರಿಸಿದ್ದರು ಎನ್ನಲಾಗಿದೆ. ಬಳಿಕ ತಿರಸ್ಕೃತ ಅರ್ಜಿಗಳು ಎಂ.ಜಿ. ರಸ್ತೆಯಲ್ಲಿರುವ ಆಡಿಟ್ ಟೀಂಗೆ ವರ್ಗಾವಣೆಯಾಗಿದ್ದು, ಅಲ್ಲಿನ ಮೂವರು AROಗಳು ನಿಯಮಗಳನ್ನು ಉಲ್ಲಂಘಿಸಿ ಖಾತೆ ಮಾಡಿಕೊಟ್ಟಿದ್ದಾರೆ ಎಂಬುದು ದೂರಿನ ಪ್ರಮುಖ ಆರೋಪವಾಗಿದೆ.

**ಲಂಚ ಪಡೆದ ಆರೋಪ**

ಆಡಿಟ್ ಟೀಂನಲ್ಲಿ ಕಾರ್ಯನಿರ್ವಹಿಸುತ್ತಿರುವಂಖಔಗಳಾದ ಮನು, ದೀಪಶ್ರೀ ಮತ್ತು ಲಕ್ಷ್ಮಿ ಅವರು ತಲಾ 50 ಸಾವಿರದಿಂದ 1 ಲಕ್ಷದವರೆಗೆ ಹಣ ಪಡೆದು 'ಬಿ' ಖಾತೆ ಮಾಡಿಕೊಟ್ಟಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. 32ಕ್ಕೂ ಹೆಚ್ಚು ಫ್ಲ್ಯಾಟ್‌ಗಳಿಗೆ ನಕಲಿ ಜ–ಖಅಆ ಸೃಷ್ಟಿಸಿ ಖಾತೆ ಮಾಡಿಕೊಡಲಾಗಿದ್ದು, ಇದರಿಂದ ಪಾಲಿಕೆಗೆ ಸುಮಾರು 2 ಕೋಟಿ ನಷ್ಟವಾಗಿದೆ ಎಂದು ಎಮ್ ಅರ್ ರಮೇಶ್ ದೂರಿನಲ್ಲಿ ಉಲ್ಲೇಖಿಸಿದರೆ.

**ಲೋಕಾಯುಕ್ತರಿಗೂ ದೂರು:**

ಈ ಕುರಿತು ಎನ್ ಅರ್ ರಮೇಶ್ ದಾಖಲೆಗಳೊಂದಿಗೆ ಉಃಂ ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು (ಕಂದಾಯ), ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತರು ಹಾಗೂ ಲೋಕಾಯುಕ್ತ ಖಆಉಕ ಅವರಿಗೆ ದೂರು ಸಲ್ಲಿಸಲಾಗಿದೆ ಎಂದು ಮಾಜಿ ಬಿಬಿಎಂಪಿ ಆಡಳಿತ ಪಕ್ಷದ ನಾಯಕ ರಮೇಶ್ ಎನ್.ಆರ್. ತಿಳಿಸಿದ್ದಾರೆ.

ಆರೋಪ ಎದುರಿಸುತ್ತಿರುವ ಅಧಿಕಾರಿಗಳನ್ನು ಅಮಾನತುಗೊಳಿಸಿ ಇಲಾಖಾ ತನಿಖೆ ನಡೆಸಬೇಕು, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು, ನಿಯಮಬಾಹಿರವಾಗಿ ಮಾಡಿರುವ ಖಾತೆಗಳನ್ನು ರದ್ದುಪಡಿಸಬೇಕು ಹಾಗೂ ಸಂಬಂಧಿಸಿದ ಅನಧಿಕೃತ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ: ಕೃತ್ಯದ ವಿಡಿಯೋ ವೈರಲ್



ಜಮೂಯಿ, ಸೆ.21: ಬಿಹಾರದ ಜಮೂಯಿಯಲ್ಲಿ 10ನೇ ತರಗತಿಯ ಅಪ್ರಾಪ್ತ ಬಾಲಕ ಹಾಗೂ ಬಾಲಕಿಗೆ ಗುಂಪೊಂದು ತಡೆದು ಕಿರುಕುಳ ನೀಡಿದ ಘಟನೆ ನಡೆದಿದ್ದು, ಅದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಘಟನೆ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕೋಚಿಂಗ್ ತರಗತಿ ಮುಗಿಸಿಕೊಂಡು ಸ್ಕೂಟರ್‌ನಲ್ಲಿ ಮನೆಗೆ ಹಿಂದಿರುಗುತ್ತಿದ್ದ ವೇಳೆ ಇಬ್ಬರು ಮಡ್ವಾ ಪಹಾಡ್ ಪ್ರದೇಶಕ್ಕೆ ತೆರಳಿದ್ದರು. ಅಲ್ಲಿಂದ ವಾಪಸ್ ಬರುತ್ತಿದ್ದಾಗ ಕೆಲವರು ಸ್ಕೂಟರ್ ತಡೆದು ಇಬ್ಬರನ್ನೂ ಕೆಳಗಿಳಿಸಿ ನಿಂದಿಸಿದ್ದಾರೆ ಎನ್ನಲಾಗಿದೆ.

ವೈರಲ್ ವಿಡಿಯೋದಲ್ಲಿ ವ್ಯಕ್ತಿಯೊಬ್ಬ ಬಾಲಕನ ಅಂಗಿಯ ಕಾಲರ್ ಹಿಡಿದು ಎಳೆದಾಡುತ್ತಿರುವುದು ಕಂಡುಬಂದಿದೆ. ಬಾಲಕ ಮತ್ತು ಬಾಲಕಿ ಆತನಿಂದ ತಪ್ಪಿಸಿಕೊಂಡು ಅಲ್ಲಿಂದ ತೆರಳಲು ಯತ್ನಿಸಿದಾಗ ಗುಂಪು ಅವರನ್ನು ಹಿಂಬಾಲಿಸಿದೆ.

ಈ ವೇಳೆ ಮತ್ತೊಬ್ಬ ವ್ಯಕ್ತಿ ಬಾಲಕಿಯನ್ನು ಕುತ್ತಿಗೆಯಿಂದ ಹಿಡಿದು ಮೇಲಕ್ಕೆತ್ತಲು ಯತ್ನಿಸಿದ್ದಾನೆ. ಬಾಲಕ ತಕ್ಷಣ ಮಧ್ಯಪ್ರವೇಶಿಸಿ ಆಕೆಯನ್ನು ಬಿಡಿಸಿಕೊಂಡಿದ್ದಾನೆ. ಗಲಾಟೆಯ ಸಂದರ್ಭದಲ್ಲಿ ಬಾಲಕಿಯೊಂದಿಗೆ ಅಸಭ್ಯವಾಗಿ ವರ್ತಿಸಿರುವುದೂ ವಿಡಿಯೋದಲ್ಲಿ ಕಂಡುಬಂದಿದೆ. ಸ್ಕೂಟರ್‌ನಲ್ಲಿ ತೆರಳಲು ಯತ್ನಿಸಿದಾಗಲೂ ಆರೋಪಿಗಳ ಪೈಕಿ ಕೆಲವರು ಬಾಲಕಿಯ ಕೈ ಹಿಡಿದು ತಡೆಯಲು ಪ್ರಯತ್ನಿಸಿದ್ದಾರೆ. ಗುಂಪು ಇಬ್ಬರು ಅಪ್ರಾಪ್ತರಿಂದ ಕ್ಷಮೆ ಕೇಳುವಂತೆ ಒತ್ತಾಯಿಸಿದೆ. ಬಾಲಕಿ ತಮ್ಮನ್ನು ಬಿಟ್ಟುಬಿಡುವಂತೆ ಮನವಿ ಮಾಡುತ್ತಿರುವುದು ವಿಡಿಯೋದಲ್ಲಿ ಕೇಳಿಬರುತ್ತದೆ. ಬಳಿಕ ಇಬ್ಬರಿಗೂ ಅಲ್ಲಿಂದ ತೆರಳಲು ಅವಕಾಶ ನೀಡಲಾಗಿದೆ. ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ಗಮನಕ್ಕೆ ತೆಗೆದುಕೊಂಡು ತನಿಖೆ ಆರಂಭಿಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಘಟನೆ ಹಾಗೂ ವಿಡಿಯೋ ಕುರಿತು ಮಾಹಿತಿ ದೊರೆತಿರುವುದನ್ನು ಖಚಿತಪಡಿಸಿದ್ದಾರೆ.

ಪೊಲೀಸರು ಇಬ್ಬರು ಅಪ್ರಾಪ್ತರಿಂದ ಮಾಹಿತಿ ಪಡೆದುಕೊಂಡಿದ್ದು, ಅವರ ಹೇಳಿಕೆ ಆಧರಿಸಿ ಕೃತ್ಯದಲ್ಲಿ ಭಾಗಿಯಾಗಿರುವವರನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ಮುಂದುವರಿಸಿದ್ದು, ವಿಡಿಯೋದಲ್ಲಿರುವ ಪ್ರತಿಯೊಬ್ಬರ ಪಾತ್ರದ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ.

# ಜಗಳೂರು ಬಂದ್ ಯಶಸ್ವಿ : ಜನಜೀವನ ಅಸ್ತವ್ಯಸ್ತ

ದಾವಣಗೆರೆ, ಸೆ. 21–ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಜಗಳೂರನ್ನು ಕೈಬಿಟ್ಟಿರುವುದನ್ನು ವಿರೋಧಿಸಿ ಬಿಜೆಪಿ ವತಿಯಿಂದ ಕರೆ ನೀಡಲಾಗಿದ್ದ ಜಗಳೂರು ತಾಲೂಕು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು, ಪಟ್ಟಣದ ಬಹುತೇಕ ಅಂಗಡಿ–ಮುಂಗಟ್ಟುಗಳು ಬಂದ್ ಆಗಿವೆ.

ಬಂದ್‌ನಿಂದಾಗಿ ಜಗಳೂರಿನಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ವಾಹನ ಸಂಚಾರ ಹಾಗೂ ವ್ಯಾಪಾರ–ವಹಿವಾಟಿನ ಮೇಲೆ ಪರಿಣಾಮ ಬೀರಿದೆ.

ಬಂದ್ ಹಿನ್ನೆಲೆಯಲ್ಲಿ ಜಗಳೂರಿನಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ರಸ್ತೆಗಳು ಬಣಗುಡುತ್ತಿವೆ. ಬಸ್‌ಗಳ ಸಂಚಾರವೂ ಸ್ಥಗಿತಗೊಂಡಿರುವ ಪರಿಣಾಮ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಡೆದುಕೊಂಡೇ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಜಗಳೂರು ಎಪಿಎಂಸಿಯೂ ಸಂಪೂರ್ಣ ಬಂದ್ ಆಗಿದ್ದು, ಎಪಿಎಂಸಿ ಗೇಟ್ ಮುಂಭಾಗದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ವೇಳೆ ಬಿಜೆಪಿ ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ವಾಗ್ವಾದವೂ ನಡೆಯಿತು.

ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ ಬಿಜೆಪಿ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಸೇರಿದಂತೆ ಬಿಜೆಪಿ ಮುಖಂಡರು, ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಜಗಳೂರನ್ನು ಕೈಬಿಟ್ಟಿರುವುದನ್ನು ಪ್ರಶ್ನಿಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಸ್ಥಳೀಯ ಸಚಿವರು ಹಾಗೂ ಶಾಸಕರ ವಿರುದ್ಧವೂ ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ವಿವಿಧೆಡೆ ಮುನ್ನೆಚ್ಚರಿಕಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು.

# ಸೆ 23 ಆರೋಗ್ಯಕರ ಜೀವನಶೈಲಿ ತಜ್ಞವೈದ್ಯರಿಂದ ಉಚಿತ ಸಲಹೆ ಶಸ್ತ್ರಚಿಕಿತ್ಸೆ ರಹಿತ ಪರಿಹಾರ



ಬೆಂಗಳೂರು: ನಾಗರಬಾವಿಯಲ್ಲಿರುವ ಲೈಫ್ ಟ್ರೀ ಆಯುರ್ವೇದ ಅಂಡ್ ವೆಲ್‌ನೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ವತಿಯಿಂದ ಸಾರ್ವಜನಿಕರಿಗೆ ಮೊಣಕಾಲಿನ ನೋವು, ಬೆನ್ನುನೋವು, ಸ್ನಾಯು ನೋವು ಶಸ್ತ್ರಚಿಕಿತ್ಸೆ ಇಲ್ಲದೇ ನೋವಿಗೇ ಪರಿಹಾರ ಮತ್ತು ಪಂಚಕರ್ಮ ಆರೋಗ್ಯಕರ ಜೀವನಶೈಲಿ ಕುರಿತು ತಜ್ಞ ವೈದ್ಯರುಗಳಿಂದ ಉಚಿತ ಸಲಹೆ ಮಾರ್ಗದರ್ಶನ ಹಾಗೂ ಆರೋಗ್ಯ ಸುರಕ್ಷತೆಗಾಗಿ ಉಚಿತವಾಗಿ ಗಣಕಿಕೃತ ನಾಡಿ ಪರೀಕ್ಷೆ ಇದರ ಪೋಸ್ಟರ್ ಬಿಡುಗಡೆಯನ್ನು ವ್ಯವಸ್ಥಾಪಕ ನಿರ್ದೇಶಕರಾದ ದೊಡ್ಡವೀರಯ್ಯರವರು, ನಿರ್ದೇಶಕ ವಿಜಯ್, ನಿರ್ದೇಶಕಿ ದೀಪ, ಡಾ ಆರ್.ಎಸ್.ಸುಜಿತ್ ರವರು ನೆರವೇರಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ದೊಡ್ಡವೀರಯ್ಯರವರು ಮಾತನಾಡಿ ಭಾರತದ ಪುರಾತನ ಇತಿಹಾಸ ಇರುವ ಆಯುರ್ವೇದ ಪಾರಂಪರಿಕ ಚಿಕಿತ್ಸಾ ಪದ್ಧತಿ. ಗಿಡಮೂಲಿಕೆಗಳಿಂದ ಚಿಕಿತ್ಸೆ ಕೊಡುವ ಯಾವುದೇ ಅಡ್ಡಪರಿಣಾಮವಿರುವುದಿಲ್ಲ. ನಮ್ಮ ಸಂಸ್ಥೆಯಲ್ಲಿ ಬೆನ್ನುನೋವು, ಕೀಲು ನೋವು ಶಸ್ತ್ರ ಚಿಕಿತ್ಸೆ ಇಲ್ಲದೇ ನೋವು ಗುಣಪಡಿಸುವ ಹಾಗೂ ಪಂಚಕರ್ಮದ ಉಪಯೋಗ ಮತ್ತು ಮನುಷ್ಯ ದೇಹದಲ್ಲಿ ಇರುವ ನ್ಯೂನತೆಗಾಗಿ ನಾಡಿ ಪರೀಕ್ಷೆಯನ್ನು ಉಚಿತವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದಿನಾಂಕ 23–9–2026ರ ಬುಧವಾರ ಬೆಳಗ್ಗೆ 10ಗಂಟೆಯಿಂದ ಸಂಜೆ 5ಗಂಟೆವರಗೆ.



ಸಂಜೆವಾಣಿ
ಸೋಮವಾರ, ಸೆಪ್ಟೆಂಬರ್ 21, 2026
ಆರೋಗ್ಯ ವಾಣಿ

# ಹೈಬಿಪಿ – ವಿವಿಧ ಸಮಸ್ಯೆಗಳಿಗೆ ಕಾರಣ

ಅಪಧಮನಿಗಳಿಗೆ ಹಾನಿ: ಆರೋಗ್ಯಕರ ಅಪಧಮನಿಗಳು ಬಲವಾಗಿ, ನಮ್ಯತೆಯಿಂದ ಕೂಡಿರುತ್ತವೆ. ಇವುಗಳ ಒಳಪದರವು ನಯವಾಗಿರುತ್ತದೆ. ಇದು ರಕ್ತ ಸುಲಭವಾಗಿ ಹರಿಯಲು, ಪೋಷಕಾಂಶಗಳು ಹಾಗೂ ಆಮ್ಲಜನಕವು ಪ್ರಮುಖ ಅಂಗಗಳು ಹಾಗೂ ಅಂಗಾಂಶಗಳಿಗೆ ತಲುಪಲು ಸಹಾಯ ಮಾಡುತ್ತದೆ. ಅಧಿಕ ರಕ್ತದೊತ್ತಡವು ಅಪಧಮನಿಗಳ ಮೂಲಕ ಹರಿಯುವ ರಕ್ತದ ಒತ್ತಡ ಹೆಚ್ಚಿಸುತ್ತದೆ.

ಅಪಧಮನಿಗಳಿಗೆ ಹಾನಿ, ಇವುಗಳ ಕಿರಿದಾಗುವುದು: ಅಧಿಕ ರಕ್ತದೊತ್ತಡವು ಅಪಧಮನಿಗಳ ಒಳ ಗೋಡೆಗಳನ್ನು ರೂಪಿಸುವ ಜೀವಕೋಶಗಳಿಗೆ ಹಾನಿ ಉಂಟುಮಾಡಬಹುದು. ಆಹಾರದ ಮೂಲಕ ಸೇವಿಸುವ ಕೊಬ್ಬು ರಕ್ತಪ್ರವಾಹ ಸೇರಿದಾಗ ಅದು ಈ ಹಾನಿಗೊಳಗಾದ ಅಪಧಮನಿಗಳಲ್ಲಿ ಶೇಖರಣೆಯಾಗಬಹುದು. ಅಪಧಮನಿಯ ಗೋಡೆಗಳು ತಮ್ಮ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುತ್ತವೆ. ಇದರಿಂದ ದೇಹದಾದ್ಯಂತ ರಕ್ತದ ಹರಿವು ಕಡಿಮೆಯಾಗುತ್ತದೆ.

ಅನ್ಯೂರಿಜಮ್: ಕಾಲಕ್ರಮೇಣ ದುರ್ಬಲಗೊಂಡ ಅಪಧಮನಿಯ ಮೂಲಕ ಹರಿಯುವ ರಕ್ತದ ನಿರಂತರ ಒತ್ತಡದಿಂದಾಗಿ ಅಪಧಮನಿಯ ಗೋಡೆಯ ಒಂದು ಭಾಗವು ಹೊರಕ್ಕೆ ಉಬ್ಬಿಕೊಳ್ಳಬಹುದು. ಇದನ್ನು ಅನ್ಯೂರಿಜಮ್ ಎಂದು ಕರೆಯಲಾಗುತ್ತದೆ. ಅನ್ಯೂರಿಜಮ್ ಒಡೆದುಹೋಗಬಹುದು, ಇದರಿಂದಾಗಿ ಜೀವಕ್ಕೆ ಅಪಾಯಕಾರಿ ಆಂತರಿಕ ರಕ್ತಸ್ರಾವ ಉಂಟಾಗಬಹುದು. ಅನ್ಯೂರಿಮ್‌ಗಳು (ರಕ್ತನಾಳದ ಉಬ್ಬುವಿಕೆ) ದೇಹದ ಯಾವುದೇ ಅಪಧಮನಿಯಲ್ಲಿ ಉಂಟಾಗಬಹುದು. ಆದರೆ, ಇವು ದೇಹದ ಅತಿದೊಡ್ಡ ಅಪಧಮನಿಯಲ್ಲಿ ಅಂದರೆ ಅಯೋರ್ಟಾದಲ್ಲಿ (ಮಹಾಪಧಮನಿ) ಹೆಚ್ಚು ಸಾಮಾನ್ಯವಾಗಿ ಕಂಡುಬರುತ್ತವೆ.

ಅಧಿಕ ರಕ್ತದೊತ್ತಡವು ಹೃದಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳಿಗೆ ಕಾರಣವಾಗಬಹುದು. ಅಧಿಕ ರಕ್ತದೊತ್ತಡವು ಹೃದಯಕ್ಕೆ ರಕ್ತವನ್ನು ಪೂರೈಸುವ ಅಪಧಮನಿಗಳನ್ನು ಕಿರಿದಾಗಿಸಬಹುದು, ಹಾನಿಗೊಳಿಸಬಹುದು.ಈ ಸ್ಥಿತಿಯನ್ನು 'ಕರೋನರಿ ಅಪಧಮನಿ ಕಾಯಿಲೆ' ಎಂದು ಕರೆಯಲಾಗುತ್ತದೆ. ಹೃದಯಕ್ಕೆ ರಕ್ತದ ಹರಿವು ಕಡಿಮೆಯಾದಾಗ ಎದೆ ನೋವು ಉಂಟಾಗಬಹುದು. ಇದನ್ನು 'ಆಂಜಿನಾ' ಎಂದು ಕರೆಯುತ್ತಾರೆ. ಇದು ಹೃದಯ ಬಡಿತದಲ್ಲಿ ಏರುಪೇರು ಅಥವಾ ಹೃದಯಾಘಾತಕ್ಕೂ



ಕಾರಣವಾಗಬಹುದು.

ಅಧಿಕ ರಕ್ತದೊತ್ತಡವು ಹೃದಯದ ಮೇಲೆ ಒತ್ತಡ ಹೇರುತ್ತದೆ. ಹೃದಯದ ಸ್ನಾಯುಗಳು ದುರ್ಬಲಗೊಳ್ಳಬಹುದು ಇಲ್ಲವೇ ಗಟ್ಟಿಯಾಗಬಹುದು, ಇದರಿಂದ ಅವು ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಅತಿಯಾದ ಒತ್ತಡಕ್ಕೆ ಒಳಗಾದ ಹೃದಯವು ಕ್ರಮೇಣ ವಿಫಲಗೊಳ್ಳಬಹುದು.

ಅಧಿಕ ರಕ್ತದೊತ್ತಡವಿದ್ದಾಗ ದೇಹದ ಉಳಿದ ಭಾಗಗಳಿಗೆ ರಕ್ತವನ್ನು ಪಂಪ್ ಮಾಡಲು ಹೃದಯವು ಹೆಚ್ಚು ಶ್ರಮಪಡಬೇಕಾಗುತ್ತದೆ. ಇದರಿಂದ ಹೃದಯದ ಕೆಳಗಿನ ಎಡ ಕೋಣೆಯ (ಎಡ ವೆಂಟ್ರಿಕಲ್) ಗೋಡೆಯು ದಪ್ಪವಾಗುತ್ತದೆ, ಆ ಕೋಣೆಯೇ ಹಿಗ್ಗುತ್ತದೆ. ಹಿಗ್ಗಿದ, ದಪ್ಪವಾದ ಎಡ ವೆಂಟ್ರಿಕಲ್ ಹೃದಯಾಘಾತ ಹಾಗೂ ಹೃದಯ ವೈಫಲ್ಯದ ಅಪಾಯ ಹೆಚ್ಚಿಸುತ್ತದೆ. ಇದು 'ಸಡನ್ ಕಾರ್ಡಿಯಾಕ್ ಡೆತ್' ಎಂದು ಕರೆಯಲ್ಪಡುವ ಹಾಗೂ ಹೃದಯ ಸ್ತಂಭನದಿಂದ ಉಂಟಾಗುವ ಹಠಾತ್ ಸಾವಿನ ಅಪಾಯ ಹೆಚ್ಚಿಸುತ್ತದೆ.

ಅಧಿಕ ರಕ್ತದೊತ್ತಡವು ಮೆಟಬಾಲಿಕ್ ಸಿಂಡ್ರೋಮ್‌ನ ಅಪಾಯವನ್ನು ಹೆಚ್ಚಿಸುತ್ತದೆ. ಈ ಸಿಂಡ್ರೋಮ್ ಆರೋಗ್ಯ ಸಮಸ್ಯೆಗಳ ಒಂದು ಗುಂಪಾಗಿದೆ. ಇದು ಹೃದಯ ಕಾಯಿಲೆ, ಪಾರ್ಶ್ವವಾಯು ಹಾಗೂ ಮಧುಮೇಹಕ್ಕೆ ಕಾರಣವಾಗಬಹುದು. ಮೆಟಬಾಲಿಕ್ ಸಿಂಡ್ರೋಮ್‌ನಲ್ಲಿ ಸೇರಿರುವ ಆರೋಗ್ಯ ಸಮಸ್ಯೆಗಳೆಂದರೆ, ಅಧಿಕ ರಕ್ತದೊತ್ತಡ, ಅಧಿಕ ರಕ್ತದ ಸಕ್ಕರೆ ಮಟ್ಟ, ರಕ್ತದಲ್ಲಿನ ಕೊಬ್ಬಿನ (ಟ್ರೈಗ್ಲಿಸರೈಡ್‌ಗಳು) ಹೆಚ್ಚಿನ ಮಟ್ಟ, ಕಡಿಮೆ ಸಾಂದ್ರತೆಯ ಲಿಪೊಪ್ರೋಟೀನ್ ಕೊಲೆಸ್ಟ್ರಾಲ್‌ನ ಕಡಿಮೆ ಮಟ್ಟ ಮತ್ತು ಸೊಂಟದ ಸುತ್ತಲೂ ಅತಿಯಾದ ಕೊಬ್ಬಿನ ಶೇಖರಣೆ.

ಮಾಯೋ ಕ್ಲಿನಿಕ್ ತಿಳಿಸುವ ಪ್ರಕಾರ, ಅಧಿಕ ರಕ್ತದೊತ್ತಡವು ಸಾಮಾನ್ಯವಾಗಿ ಹಲವು ವರ್ಷಗಳ ಅವಧಿಯಲ್ಲಿ ಕ್ರಮೇಣ ಹಾನಿಯನ್ನು ಉಂಟುಮಾಡುವ ಸ್ಥಿತಿಯಾಗಿದೆ. ಕೆಲವೊಮ್ಮೆ ರಕ್ತದೊತ್ತಡವು ಎಷ್ಟು ವೇಗವಾಗಿ, ತೀವ್ರವಾಗಿ ಏರಿಕೆಯಾಗಬಹುದು. ವೈದ್ಯಕೀಯ ತುರ್ತು ಪರಿಸ್ಥಿತಿಯಾಗಿ ಪರಿಣಮಿಸುತ್ತದೆ. ಅಂತಹ ಸಂದರ್ಭಗಳಲ್ಲಿ ತಕ್ಷಣದ ಚಿಕಿತ್ಸೆಯ ಅಗತ್ಯವಿರುತ್ತದೆ ಹಾಗೂ ಆಗಾಗ್ಗೆ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಅಧಿಕ ರಕ್ತದೊತ್ತಡವು ಈ ಸಮಸ್ಯೆಗಳಿಗೆ ಕಾರಣವಾಗಬಹುದು.

ಕುರುಡುತನ

ಎದೆ ನೋವು

ಪ್ರಿ–ಎಕ್ಲಾಂಪ್ಸಿಯಾ, ಎಕ್ಲಾಂಪ್ಸಿಯಾದಂತಹ ರಕ್ತದೊತ್ತಡ ಸಂಬಂಧಿತ ಸಮಸ್ಯೆಗಳಂತಹ ಗರ್ಭಧಾರಣೆಯ ತೊಂದರೆಗಳು

ಹೃದಯಾಘಾತ

ಸ್ಮರಣಾಶಕ್ತಿ ನಷ್ಟ, ವ್ಯಕ್ತಿತ್ವ ಬದಲಾವಣೆಗಳು, ಕೇಂದ್ರೀಕರಿಸುವಲ್ಲಿ ತೊಂದರೆ, ಕಿರಿಕಿರಿ ಇಲ್ಲವೇ ಕ್ರಮೇಣ ಪ್ರಜ್ಞೆ ಕಳೆದುಕೊಳ್ಳುವುದು

ದೇಹದ ಮುಖ್ಯ ಅಪಧಮನಿಗೆ ತೀವ್ರ ಹಾನಿ

ಪಾರ್ಶ್ವವಾಯು

ಹಠಾತ್ ಮೂತ್ರಪಿಂಡ ವೈಫಲ್ಯ

ರಕ್ತವನ್ನು ಪಂಪ್ ಮಾಡುವ ಹೃದಯದ ಸಾಮರ್ಥ್ಯದ ಹಠಾತ್ ದುರ್ಬಲತೆ, ಇದು ಶ್ವಾಸಕೋಶದಲ್ಲಿ ದ್ರವ ಸಂಗ್ರಹವಾಗಲು ಕಾರಣವಾಗಬಹುದು, ಇದು ಉಸಿರಾಟದ ತೊಂದರೆಗಳಿಗೆ ಕಾರಣವಾಗಬಹುದು, ಇದನ್ನು ಪಲ್ಮನರಿ ಎಡಿಮಾ ಎಂದು ಕರೆಯಲಾಗುತ್ತದೆ

# ನಿದ್ರೆ ಕಡಿಮೆಯಾದರೆ ಕ್ಯಾನ್ಸರ್ ಅಪಾಯ

ನಿದ್ರೆ ಮಾಡದಿರುವುದು ದೇಹದ ಮೇಲೆ ಪರಿಣಾಮ ಬೀರಬಹುದು

ದೀರ್ಘಕಾಲ ನಿದ್ರೆ ಕೊರತೆಯಿಂದ ದೇಹಕ್ಕೇನಾಗುತ್ತದೆ

ಪ್ರತಿದಿನ ಎಷ್ಟು ಗಂಟೆ ನಿದ್ರೆ ಮಾಡುವುದು ಅಗತ್ಯ

ಕೆಲಸದ ಒತ್ತಡ, ರಾತ್ರಿ ತುಂಬಾ ಸಮಯ ಮೊಬೈಲ್ ನೋಡುವುದು, ಮನರಂಜನೆಗಾಗಿ ತಡರಾತ್ರಿವರೆಗೆ ಎಚ್ಚರವಾಗಿರುವುದು ಸೇರಿದಂತೆ ಹಲವು ಕಾರಣಗಳಿಂದ ನಿದ್ರೆಯ ಸಮಯ ಕಡಿಮೆಯಾಗುತ್ತಿದೆ. ಕೆಲವರು ನಿದ್ರೆಯನ್ನು ದೈನಂದಿನ ಜೀವನದಲ್ಲಿ ಕಡಿಮೆ ಪ್ರಾಮುಖ್ಯತೆಯ ವಿಷಯವೆಂದು ಪರಿಗಣಿಸುತ್ತಾರೆ. ಆದರೆ ಪ್ರತಿದಿನವೂ ಸರಿಯಾಗಿ ನಿದ್ರೆ ಮಾಡದಿರುವುದು ದೇಹದ ಹಲವು ಸಹಜ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ನಿದ್ರೆಯ ಕೊರತೆಯಿಂದ ಕ್ಯಾನ್ಸರ್ ಅಪಾಯ ಹೆಚ್ಚುತ್ತದೆಯೇ ಎಂಬ ಪ್ರಶ್ನೆ ಹಲವರಲ್ಲಿದೆ. ತಜ್ಞರ ಪ್ರಕಾರ, ನಿದ್ರೆಯ ಕೊರತೆ ಮತ್ತು ಕ್ಯಾನ್ಸರ್ ನಡುವೆ ನೇರ ಕಾರಣದ ಪರಿಣಾಮ ಸಂಬಂಧವಿದೆ ಎಂದು ಸದ್ಯದ ಮಾನವ ಅಧ್ಯಯನಗಳು ಸ್ಪಷ್ಟವಾಗಿ ಸಾಬೀತುಪಡಿಸಿಲ್ಲ. ಆದರೆ ದೀರ್ಘಕಾಲ ನಿದ್ರೆಯ ಕೊರತೆ ಮತ್ತು ದೇಹದ ಸಹಜ ಜೈವಿಕ ಗಡಿಯಾರದ ಅಸ್ತವ್ಯಸ್ತತೆ ಕ್ಯಾನ್ಸರ್ ಬೆಳವಣಿಗೆಗೆ ಸಂಬಂಧಿಸಿದ ಕೆಲವು ಜೈವಿಕ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರಬಹುದು.

ಒಂದು ಅಥವಾ ಎರಡು ರಾತ್ರಿ ಕಡಿಮೆ ನಿದ್ರೆ ಮಾಡಿದ ಮಾತ್ರಕ್ಕೆ ಕ್ಯಾನ್ಸರ್ ಅಪಾಯ ಹೆಚ್ಚುತ್ತದೆ ಎಂದು ಆತಂಕಪಡುವ ಅಗತ್ಯವಿಲ್ಲ. ಸಮಸ್ಯೆ ಉಂಟಾಗುವುದು ನಿದ್ರೆಯ ಕೊರತೆ ನಿರಂತರ ಅಭ್ಯಾಸವಾದಾಗ. ಪ್ರತಿದಿನ ತಡವಾಗಿ ಮಲಗುವುದು, ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವುದು ಅಥವಾ ನಿದ್ರೆಯ ಸಮಯದಲ್ಲಿ ಪದೇಪದೇ ಬದಲಾವಣೆ ಆಗುವುದು ದೇಹದ ಸಹಜ ಜೈವಿಕ ಗಡಿಯಾರವಾದ ಸಿರ್ಕಾಡಿಯನ್ ರಿದಮ್‌ಗೆ ತೊಂದರೆ ಉಂಟುಮಾಡಬಹುದು. ಇದರಿಂದ ಹಾರ್ಮೋನ್‌ಗಳ ಸಮತೋಲನ, ಚಯಾಪಚಯ, ರೋಗನಿರೋಧಕ ವ್ಯವಸ್ಥೆ ಮತ್ತು ದೇಹದ ಚೇತರಿಕೆಯ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ನಿದ್ರೆಯ ಎಚ್ಚರದ ಚಕ್ರವನ್ನು ನಿಯಂತ್ರಿಸುವ ಮೆಲಟೋನಿನ್ ಎಂಬ ಹಾರ್ಮೋನ್ ಕೂಡ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾತ್ರಿ ವೇಳೆ ನಿರಂತರವಾಗಿ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ಮೆಲಟೋನಿನ್‌ನ ಸಹಜ ಕಾರ್ಯಕ್ಕೆ ಅಡ್ಡಿಯಾಗಬಹುದು. ದೀರ್ಘಕಾಲದ ನಿದ್ರೆಯ ಕೊರತೆಯಿಂದ ದೇಹದಲ್ಲಿ ಉರಿಯೂತ ಹೆಚ್ಚಾಗುವ ಸಾಧ್ಯತೆಯೂ ಇದೆ. ಜೊತೆಗೆ ಹೆಚ್ಚಿದ ಆಕ್ಸಿಡೇಟಿವ್ ಒತ್ತಡವು ಜೀವಕೋಶಗಳಲ್ಲಿನ ಪ್ರೋಟೀನ್‌ಗಳು ಮತ್ತು ಡಿಎನ್‌ಎಗೆ ಹಾನಿ ಮಾಡಬಹುದು. ಆದರೆ ಡಿಎನ್‌ಎಗೆ ಹಾನಿಯಾದ ಮಾತ್ರಕ್ಕೆ ಕ್ಯಾನ್ಸರ್ ಉಂಟಾಗುತ್ತದೆ ಎಂದರ್ಥವಲ್ಲ, ದೇಹದಲ್ಲಿ ಇಂತಹ ಹಾನಿಯನ್ನು ಸರಿಪಡಿಸುವ ಸಹಜ ವ್ಯವಸ್ಥೆಗಳಿವೆ.



ಹಾಗಾದರೆ ಉತ್ತಮ ನಿದ್ರೆ ಕ್ಯಾನ್ಸರ್ ತಡೆಯುತ್ತದೆಯೇ ಉತ್ತಮ ಗುಣಮಟ್ಟದ ನಿದ್ರೆ ಒಟ್ಟಾರೆ ಆರೋಗ್ಯಕ್ಕೆ ಸಹಾಯಕವಾದರೂ, ಅದೊಂದರಿಂದಲೇ ಕ್ಯಾನ್ಸರ್ ತಡೆಯಬಹುದು ಎಂದು ಹೇಳಲು ಸಾಧ್ಯವಿಲ್ಲ. ವಯಸ್ಕರು ನಿಯಮಿತವಾಗಿ ಕನಿಷ್ಠ ಏಳು ಗಂಟೆಗಳಷ್ಟು ಉತ್ತಮ ಗುಣಮಟ್ಟದ ನಿದ್ರೆ ಪಡೆಯುವುದು ಸಾಮಾನ್ಯವಾಗಿ ಶಿಫಾರಸು ಮಾಡಲಾಗುತ್ತದೆ. ಧೂಮಪಾನದಿಂದ ದೂರವಿರುವುದು, ಆರೋಗ್ಯಕರ ತೂಕ ಕಾಪಾಡಿಕೊಳ್ಳುವುದು, ಮದ್ಯಪಾನ ಕಡಿಮೆ ಮಾಡುವುದು, ವ್ಯಾಯಾಮ ಮಾಡುವುದು ಮತ್ತು ಅಗತ್ಯ ತಪಾಸಣೆ ಮಾಡಿಸಿಕೊಳ್ಳುವುದೂ ಕ್ಯಾನ್ಸರ್ ಅಪಾಯ ಕಡಿಮೆ ಮಾಡುವಲ್ಲಿ ಮುಖ್ಯ.

ಹೀಗಾಗಿ, ನಿದ್ರೆ ಕಡಿಮೆಯಾದರೆ ನೇರವಾಗಿ ಕ್ಯಾನ್ಸರ್ ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ದೀರ್ಘಕಾಲದ ನಿದ್ರೆಯ ಕೊರತೆ ದೇಹದ ಹಲವು ಪ್ರಮುಖ ವ್ಯವಸ್ಥೆಗಳ ಮೇಲೆ ಪರಿಣಾಮ ಬೀರಬಹುದು.

ಆದ್ದರಿಂದ ಪ್ರತಿದಿನ ಸಾಕಷ್ಟು ಮತ್ತು ನಿಯಮಿತ ನಿದ್ರೆ ಪಡೆಯುವುದನ್ನು ಆರೋಗ್ಯಕರ ಜೀವನಶೈಲಿಯ ಪ್ರಮುಖ ಭಾಗವಾಗಿ ಪರಿಗಣಿಸುವುದು ಉತ್ತಮ.



# ಬಾಯಿ ದುರ್ವಾಸನೆ ನಿರ್ಲಕ್ಷ್ಯ ಬೇಡ

ಬೆಳಗ್ಗೆ ಎದ್ದಾಗ ಬಾಯಿಯ ದುರ್ವಾಸನೆ ಬರುವುದು ಸಾಮಾನ್ಯವಾಗಿದೆ. ಹೆಚ್ಚಿನ ಜನರಿಗೆ ಇದು ಯಾವುದೇ ಕಾಯಿಲೆಯ ಲಕ್ಷಣವಲ್ಲ. ಹಲ್ಲುಜ್ಜಿದ ಬಳಿಕವೂ ನಾಲಿಗೆಯನ್ನು ಸ್ವಚ್ಛಗೊಳಿಸಿದ ನಂತರ, ನೀರು ಕುಡಿದ ಬಳಿಕವೂ ದುರ್ವಾಸನೆ ಮುಂದುವರಿದರೆ, ಮೌತ್‌ವಾಶ್ ಇಲ್ಲವೇ ಮಿಂಟ್ ಬಳಸಿ ಮುಚ್ಚಿಹಾಕಲು ಪ್ರಯತ್ನಿಸಬಾರದು. ವೈದ್ಯಕೀಯವಾಗಿ ಇದನ್ನು 'ಹ್ಯಾಲಿಟೋಸಿಸ್' ಎಂದು ಕರೆಯಲ್ಪಡುವ ಸ್ಥಿತಿ ಬಾಯಿಯ ಆರೋಗ್ಯಕ್ಕೆ ಸಂಬಂಧಿಸಿದ ಆಂತರಿಕ ಇಲ್ಲವೇ ಪತ್ತೆಯಾಗದ ಸಮಸ್ಯೆಯ ಆರಂಭಿಕ ಚಿಹ್ನೆ ಆಗಿರಬಹುದು. ಬೆಳಗ್ಗೆ ಬಾಯಿಯ ದುರ್ವಾಸನೆ ಏಕೆ ಬರುವುದೇಕೆ ಹಲ್ಲುಜ್ಜಿದ ನಂತರವೂ ದುರ್ವಾಸನೆ ಏಕೆ ಮುಂದುವರಿಯುತ್ತದೆ ನಿವಾರಿಸಲು ಯಾವೆಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ತಿಳಿಯೋಣ.

ಬೆಳಗ್ಗೆ ಎದ್ದಾಗ ಬಾಯಿಯ ದುರ್ವಾಸನೆ ಬರುವುದು ಏಕೆ ನಮ್ಮ ಬಾಯಿಯಲ್ಲಿರುವ ಲಾಲಾರಸವು ನೈಸರ್ಗಿಕ ಶುಚಿಗೊಳಿಸುವ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತದೆ. ಇದು ಆಹಾರದ ಕಣಗಳನ್ನು ತೊಳೆದುಹಾಕುತ್ತದೆ. ಆಮ್ಲೀಯತೆಯನ್ನು ನಿಯಂತ್ರಿಸುತ್ತದೆ ಹಾಗೂ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ತಡೆಯುತ್ತದೆ. ನಿದ್ದೆಯ ಸಮಯದಲ್ಲಿ ಲಾಲಾರಸದ ಉತ್ಪಾದನೆ, ನುಂಗುವ ಕ್ರಿಯೆ ಹಾಗೂ ನಾಲಿಗೆಯ ಚಲನೆಯು ಗಮನಾರ್ಹವಾಗಿ ಕಡಿಮೆಯಾಗುತ್ತದೆ.

ಬಾಯಿ ಒಣಗುವಿಕೆಗೆ, ಆಮ್ಲಜನಕದ ಮಟ್ಟ ಕಡಿಮೆಯಾಗಲು ಕಾರಣವಾಗುತ್ತದೆ. ನಾಲಿಗೆಯ ಹಿಂಭಾಗದಲ್ಲಿ ಹಲ್ಲುಗಳ ನಡುವೆ ಮತ್ತು ಒಸಡುಗಳ ಸುತ್ತ ಇರುವ ಬ್ಯಾಕ್ಟೀರಿಯಾಗಳು ಆಹಾರದ ಕಣಗಳು, ಲಾಲಾರಸ, ಸತ್ತ ಜೀವಕೋಶಗಳಲ್ಲಿರುವ ಪ್ರೋಟೀನ್‌ಗಳನ್ನು ವಿಭಜಿಸುತ್ತವೆ. ಈ ಪ್ರಕ್ರಿಯೆಯು ದುರ್ವಾಸನೆ ಬೀರುವ ಸಲ್ಫರ್ ಅನಿಲಗಳನ್ನು ನಿರ್ದಿಷ್ಟವಾಗಿ ಹೈಡ್ರೋಜನ್ ಸಲ್ಫೈಡ್ ಹಾಗೂ ಮೀಥೈಲ್ ಮರ್ಕಾಪ್ಟನ್ ಬಿಡುಗಡೆ ಮಾಡುತ್ತದೆ. ಹೀಗಾಗಿ ಎದ್ದಾಗ ಬಾಯಿಯ ದುರ್ವಾಸನೆ ಉಂಟಾಗುತ್ತದೆ. ಬಾಯಿಯ ಮೂಲಕ ಉಸಿರಾಡುವವರು, ಜೋರಾಗಿ ಗೊರಕೆ ಹೊಡೆಯುವವರು, ಮದ್ಯ, ತಂಬಾಕು ಬಳಸುವವರು ಮತ್ತು ಕೆಲವು ಔಷಧಗಳನ್ನು ತೆಗೆದುಕೊಳ್ಳುವವರಲ್ಲಿ ಈ ಸಮಸ್ಯೆ ಹೆಚ್ಚು ತೀವ್ರವಾಗಿರಬಹುದು.



ಹಲ್ಲುಜ್ಜಿದ ಬಳಿಕ ಬಾಯಿಯ ದುರ್ವಾಸನೆ ಬರುತ್ತಿದೆಯೇ ಹಲ್ಲುಜ್ಜುವುದು ಹಲ್ಲುಗಳ ಮೇಲ್ಮೈಯನ್ನು ಸ್ವಚ್ಛಗೊಳಿಸುತ್ತದೆ. ಇದು ನಾಲಿಗೆಯ ಮೇಲಿನ ಬ್ಯಾಕ್ಟೀರಿಯಾದ ಪದರ, ಹಲ್ಲುಗಳ ನಡುವಿನ ಅಂತರದಲ್ಲಿ ಅಡಗಿರುವ ಬ್ಯಾಕ್ಟೀರಿಯಾ, ಒಸಡುಗಳ ಹತ್ತಿರವಿರುವ ಆಳವಾದ ಜಾಗಗಳನ್ನು ಅಥವಾ ಹಲ್ಲಿನ ಕ್ಯಾವಿಟಿ ಬ್ಯಾಕ್ಟೀರಿಯಾವನ್ನು ಸಂಪೂರ್ಣವಾಗಿ ತೆಗೆದುಹಾಕುವುದಿಲ್ಲ. ಬಾಯಿಯ ದುರ್ವಾಸನೆಯ ಹೆಚ್ಚಿನ ಪ್ರಕರಣಗಳಲ್ಲಿ ಅದರ ಮೂಲ ಕಾರಣ ಬಾಯಿಯಲ್ಲೇ ಇರುತ್ತದೆ ಎಂದು ವೈದ್ಯರು ತಿಳಿಸುತ್ತಾರೆ.

**▶ ತೀವ್ರ ಬಾಯಿಯ ದುರ್ವಾಸನೆಗೆ ಕಾರಣಗಳೇನು**

ಕೆಲವು ಅಪರೂಪದ ಸಂದರ್ಭಗಳಲ್ಲಿ ದೇಹದ ಇತರ ಭಾಗಗಳಲ್ಲಿನ ಸಮಸ್ಯೆಗಳಿಂದಲೂ ಬಾಯಿಯ ದುರ್ವಾಸನೆ ಉಂಟಾಗಬಹುದು. ದೀರ್ಘಕಾಲದ ಸೈನಸ್ ಸೋಂಕು, ಮೂಗಿನ ಸ್ರಾವ ಗಂಟಲಿಗೆ ಇಳಿಯುವುದು, ಟಾನ್ಸಿಲ್ ಸೋಂಕು ಇಲ್ಲವೇ ಟಾನ್ಸಿಲ್ ಕಲ್ಲುಗಳಂತಹ ಸಮಸ್ಯೆಗಳು ಇದಕ್ಕೆ ಕಾರಣವಾಗಬಹುದು. ಬಾಯಿಯ ದುರ್ವಾಸನೆಗೆ ಹೊಟ್ಟೆಯ ಸಮಸ್ಯೆಗಳೇ ಕಾರಣ ಎಂಬ ಸಾಮಾನ್ಯ ನಂಬಿಕೆಯಿದೆ. ಅನ್ನನಾಳವು ಸಾಮಾನ್ಯವಾಗಿ ಮುಚ್ಚಿರುವುದರಿಂದ ಹೊಟ್ಟೆಯು ಇದಕ್ಕೆ ಅಪರೂಪಕ್ಕೆ ಮಾತ್ರ ಮೂಲ ಕಾರಣವಾಗಿರುತ್ತದೆ. ಆಸಿಡ್ ರಿಫ್ಲಕ್ಸ್ ಅಥವಾ ಆಮ್ಲೀಯ ಹಿಮ್ಮುಖ ಹರಿವು ಸ್ವಲ್ಪ ಮಟ್ಟಿಗೆ ಈ ಸಮಸ್ಯೆಗೆ ಕಾರಣವಾಗಬಹುದು. ನಿಯಂತ್ರಣದಲ್ಲಿಲ್ಲದ ಮಧುಮೇಹ, ಯಕೃತ್ತು ಇಲ್ಲವೇ ಮೂತ್ರಪಿಂಡದ ತೀವ್ರ ಕಾಯಿಲೆಗಳು ಕೂಡ ಉಸಿರಿನ ವಾಸನೆ ಬದಲಾಯಿಸಬಹುದು.

ಎಚ್ಚರಿಕೆಯ ಚಿಹ್ನೆಗಳೇನು ದೈನಂದಿನ ಸ್ವಚ್ಛತೆಯನ್ನು ಕಾಪಾಡಿಕೊಂಡರೂ ಬಾಯಿಯ ದುರ್ವಾಸನೆಯು ಎರಡು ವಾರಗಳಿಗಿಂತ ಹೆಚ್ಚು ಕಾಲ ಮುಂದುವರಿದರೆ, ಹಲ್ಲುಜ್ಜಿದ ಮತ್ತು ನಾಲಿಗೆಯನ್ನು ಸ್ವಚ್ಛಗೊಳಿಸಿದ ತಕ್ಷಣವೇ ಮತ್ತೆ ದುರ್ವಾಸನೆ ಬರುವುದು. ಒಸಡುಗಳು ಊದಿಕೊಂಡಿದ್ದರೆ ಹಾಗೂ ಕೆಂಪಗಾಗಿದ್ದರೆ ಇಲ್ಲವೇ ರಕ್ತಸ್ರಾವವಾಗುತ್ತಿದ್ದರೆ ಮತ್ತು ಹಲ್ಲುಗಳು ಸಡಿಲವಾಗಿದ್ದರೆ, ಹಲ್ಲಿನ ನೋವು, ಕೀವು ಸೋರುವಿಕೆ ಅಥವಾ ಬಾಯಿಯಲ್ಲಿ ನಿರಂತರವಾಗಿ ಕಹಿ ರುಚಿ ಬರುವುದು. ಜೊತೆಗೆ ಬಾಯಿ ಅತಿಯಾಗಿ ಒಣಗುತ್ತಿದ್ದರೆ, ಮುಖದ ಊತ, ಜ್ವರ, ತೀವ್ರ ಹಲ್ಲಿನ ನೋವು ಇಲ್ಲವೇ ನುಂಗಲು ಕಷ್ಟವಾಗುವುದು, ಇಂತಹ ಸಂದರ್ಭಗಳಲ್ಲಿ ತಕ್ಷಣ ತುರ್ತು ಚಿಕಿತ್ಸೆ ಪಡೆಯಬೇಕಾಗುತ್ತದೆ. ಏಕೆಂದರೆ ಸೋಂಕು ಹರಡುತ್ತಿರಬಹುದು ಎಂದು ವೈದ್ಯರು ಎಚ್ಚರಿಕೆ ನೀಡುತ್ತಾರೆ.

**▶ ಬಾಯಿಯ ದುರ್ವಾಸನೆ ಹೋಗಲಾಡುವುದು ಹೇಗೆ**

**▶ ಬಾಯಿಯ ಸರಿಯಾದ ಸ್ವಚ್ಛತೆ:**

ಫ್ಲೋರೈಡ್ ಇರುವ ಟೂತ್‌ಪೇಸ್ಟ್ ಬಳಸಿ ದಿನಕ್ಕೆ ಎರಡು ಬಾರಿ ಎರಡು ನಿಮಿಷಗಳ ಕಾಲ ಹಲ್ಲುಜ್ಜಿಕೊಳ್ಳ, ಡೆಂಟಲ್ ಫ್ಲಾಸ್ ಅಥವಾ ಇಂಟರ್‌ಡೆಂಟಲ್ ಬ್ರಷ್ ಬಳಸಿ ಹಲ್ಲುಗಳ ನಡುವಿನ ಅಂತರ ಸ್ವಚ್ಛಗೊಳಿಸಿ.

**▶ ನಾಲಿಗೆಯ ಸ್ವಚ್ಛತೆ ಕಾಪಾಡಿಕೊಳ್ಳಿ:**

ಟಂಗ್ ಸ್ಕ್ರೇಪರ್ ಅಂದರೆ, ನಾಲಿಗೆ ಸ್ವಚ್ಛಗೊಳಿಸುವ ಸಾಧನವನ್ನು ಬಳಸಿ ನಾಲಿಗೆಯ ಹಿಂಭಾಗವನ್ನು ನಿಧಾನವಾಗಿ ಸ್ವಚ್ಛಗೊಳಿಸಿ, ಅತಿಯಾಗಿ ಉಜ್ಜಿದರೆ ನಾಲಿಗೆಗೆ ಗಾಯವಾಗಬಹುದು.

- **ಆಗಾಗ್ಗೆ ನೀರು ಕುಡಿಯುವುದು:**
- **ಸಾಕಷ್ಟು ನೀರು ಕುಡಿಯಿರಿ, ಬಾಯಿ ಒಣಗದಂತೆ ನೋಡಿಕೊಳ್ಳಿ.**
- **ಮೌತ್‌ವಾಶ್‌ನ ಸರಿಯಾಗಿ ಉಪಯೋಗಿಸಿ:**

ಮೌತ್‌ವಾಶ್ ತಾತ್ಕಾಲಿಕ ತಾಜಾತನ ನೀಡುತ್ತದೆ. ಇದು ಹಲ್ಲುಗಳ ಮೇಲೆ ಶೇಖರಣೆಯಾದ ಟಾರ್ಟರ್ (ಗಟ್ಟಿಯಾದ ಪದರ) ಅನ್ನು ತೆಗೆದುಹಾಕಲು ಅಥವಾ ಹಲ್ಲುಗಳ ಕೊಳೆತ ಗುಣಪಡಿಸಲು ಸಾಧ್ಯವಿಲ್ಲ. ಆಲ್ಕೋಹಾಲ್ ಆಧಾರಿತ ಮೌತ್‌ವಾಶ್‌ಗಳು ಬಾಯಿಯ ಒಣಗುವಿಕೆಯನ್ನು ಹೆಚ್ಚಿಸಬಹುದು.

ವೈದ್ಯರ ಸಲಹೆಯಿಲ್ಲದೆ ಕ್ಲೋರ್‌ಹೆಕ್ಸಿಡಿನ್‌ನಂತಹ ಪ್ರಬಲ ಆಯಂಟಿಸೆಪ್ಟಿಕ್ ಮೌತ್‌ವಾಶ್‌ಗಳನ್ನು ದೀರ್ಘಕಾಲದವರೆಗೆ ಬಳಸಬೇಡಿ. ಏಕೆಂದರೆ, ಇವು ಹಲ್ಲುಗಳ ಬಣ್ಣವನ್ನು ಬದಲಾಯಿಸಬಹುದು, ಬಾಯಿಯ ಸಹಜ ರುಚಿಯನ್ನು ಬದಲಾಯಿಸಬಹುದು ಎಂದು ದಂತ ವೈದ್ಯರು ತಿಳಿಸುತ್ತಾರೆ.

# ಮೆದುಳಿನ ಆರೋಗ್ಯ ಕಾಪಾಡುವ ಆಹಾರಗಳು

ಬುದ್ಧಿಮಾಂದ್ಯತೆ ತಡೆಗಟ್ಟುವ ಹಾಗೂ ಸ್ಮರಣೆಯನ್ನುಸುಧಾರಿಸುವಶೇ.100ರಷ್ಟು ಗ್ಯಾರಂಟಿ ನೀಡುವ ಯಾವುದೇ ಆಹಾರವಿಲ್ಲ. ಆದರೆ, ಕೆಲವು ವರ್ಷಗಳಲ್ಲಿ ನಮ್ಮ ದೈನಂದಿನ ಆಹಾರ ಕ್ರಮದಲ್ಲಿ ಸೇರಿಸಲಾಗುವಂತಹ ಆಹಾರ ತುಂಬಾ ಪರಿಣಾಮ ಬೀರುತ್ತವೆ. ನಮ್ಮ ಮೆದುಳು ಮತ್ತು ರಕ್ತನಾಳಗಳ ಆರೋಗ್ಯದ ಮೇಲೆ ನೇರ, ಆಳವಾದ ಪರಿಣಾಮ ಉಂಟಾಗುತ್ತದೆ. ಯಾವುದಾದರೂ ಒಂದು ನಿರ್ದಿಷ್ಟ ಸೂಪರ್‌ಫುಡ್ ಅವಲಂಬಿಸುವ ಬದಲಿಗೆ ತರಕಾರಿಗಳು, ಹಣ್ಣುಗಳು, ಧಾನ್ಯಗಳು, ಆರೋಗ್ಯಕರ ಕೊಬ್ಬುಗಳು, ಸರಿಯಾದ ಪ್ರೋಟೀನ್‌ಗಳಲ್ಲಿ ಸಮೃದ್ಧವಾಗಿರುವ ಆಹಾರಗಳನ್ನು ನಿಮ್ಮ ಡಯಟ್?ನಲ್ಲಿ ಸೇರಿಸುವುದು ತುಂಬಾ ಒಳ್ಳೆಯದು. ಇದರಿಂದ ಮೆದುಳನ್ನು ಆರೋಗ್ಯವಾಗಿರಲು ಒಳ್ಳೆಯ ಮಾರ್ಗವಾಗಿದೆ ಎಂದು ತಜ್ಞರು ಸಲಹೆ ನೀಡುತ್ತಾರೆ.

ಮೆದುಳಿನ ಕಾರ್ಯ ಕಾಪಾಡಿಕೊಳ್ಳಲು, ವಯಸ್ಸಾದಂತೆ ಸಂಭವಿಸುವ ನರವೈಜ್ಞಾನಿಕ ಕಾಯಿಲೆ ತಡೆಗಟ್ಟಲು ದೈನಂದಿನ ಡಯಟ್‌ನಲ್ಲಿ ಸರಿಯಾದ ಆಹಾರಗಳನ್ನು ಸೇರಿಸಿಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ಮೆದುಳಿಗೆ ಆಮ್ಲಜನಕ, ಪೋಷಕಾಂಶಗಳನ್ನು ನಿರಂತರವಾಗಿ ಪೂರೈಸುವ ರಕ್ತನಾಳಗಳನ್ನು ಉತ್ತಮ ಸ್ಥಿತಿಯಲ್ಲಿ ಇರಿಸಲು ಮೆದುಳಿನ ಆರೋಗ್ಯ ಕಾಪಾಡುವುದು ಮೊದಲ ಹೆಜ್ಜೆಯಾಗಿದೆ.

ಮಧುಮೇಹ, ಅಧಿಕ ರಕ್ತದೊತ್ತಡ ಹಾಗೂ ಅಧಿಕ ಕೊಲೆಸ್ಟ್ರಾಲ್ ಸಮಸ್ಯೆಗಳು ಮೆದುಳಿನ ಸೂಕ್ಷ್ಮ ರಕ್ತನಾಳಗಳನ್ನು ಹಾನಿ ಮಾಡುತ್ತವೆ. ಇದರ ಪರಿಣಾಮವು ಸ್ಮರಣಶಕ್ತಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ವೈದ್ಯರು ತಿಳಿಸುತ್ತಾರೆ.

ಮೆದುಳಿನ ಆರೋಗ್ಯಕ್ಕೆ ಹೇಳಿ ಮಾಡಿಸಿದ ಆಹಾರಗಳು ಯಾವುವು: ದೈನಂದಿನ ಆಹಾರದಲ್ಲಿ ನಿಯಮಿತವಾಗಿ ಸೇರಿಸಬೇಕಾದ ಐದು ಪ್ರಮುಖ ಆಹಾರಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ವೈದ್ಯರು ಸೂಚಿಸುವಂತಹ ಮೆದುಳಿನ ಆರೋಗ್ಯಕ್ಕೆ ಅತ್ಯುತ್ತಮವಾಗಿರುವ ಆಹಾರಗಳ ಕುರಿತು ಇಲ್ಲಿ ತಿಳಿಯೋಣ.

ಹಸಿರು ಸೊಪ್ಪು ತರಕಾರಿಗಳು: ಮೆಂತ್ಯ, ಪಾಲಕ್ ಹಾಗೂ ಇತರೆ ಹಸಿರು ಸೊಪ್ಪು ಹಾಗೂ ವಿವಿಧ ತರಕಾರಿಗಳಲ್ಲಿ ಫೋಲೇಟ್, ವಿಟಮಿನ್ ಕೆ ಮತ್ತು ಕ್ಯಾರೊಟಿನಾಯ್ಡ್‌ಗಳು ಹೇರಳವಾಗಿ ಕಂಡುಬರುತ್ತವೆ. ಈ ತರಕಾರಿಗಳು ಮೆದುಳಿನ ಆರೋಗ್ಯ ಮಾತ್ರವಲ್ಲದೆ ರಕ್ತನಾಳಗಳ ಆರೋಗ್ಯ ಕಾಪಾಡುತ್ತವೆ. ಮಧುಮೇಹ ಹಾಗೂ ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳನ್ನು ತಡೆಯುತ್ತವೆ ಎಂದು ವೈದ್ಯರು ಸಲಹೆ ನೀಡುತ್ತಾರೆ.

ಮೀನು ಅತ್ಯುತ್ತಮ: ಎಣ್ಣೆಯುಕ್ತ ಮೀನುಗಳು ಅಂದ್ರೆ, ವಿಶೇಷವಾಗಿ ಸಾಲ್ಮನ್, ಸಾರ್ಡೀನ್, ಮ್ಯಾಕೆರೆಲ್ ಮೀನಿನಲ್ಲಿ ಒಮೆಗಾ–3 ಕೊಬ್ಬಿನಾಮ್ಲಗಳು ಸಮೃದ್ಧವಾಗಿವೆ.

ಈ ಕೊಬ್ಬುಗಳು ಮೆದುಳಿನ ಜೀವಕೋಶ ಪೊರೆಗಳ ಪ್ರಮುಖ ಅಂಶಗಳಾಗಿವೆ. ಮೆದುಳು ಹಾಗೂ ಹೃದಯದ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿಯಾಗಿವೆ ಎಂದು ತಜ್ಞರು ತಿಳಿಸುತ್ತಾರೆ.

ಡ್ರೈ ಫ್ರೂಟ್ಸ್: ವಾಲ್ನಟ್ಸ್ ಆರೋಗ್ಯಕರ ಅಪರ್ಯಾಪ್ತ ಕೊಬ್ಬುಗಳು, ಸಸ್ಯ ಪ್ರೋಟೀನ್ ಹಾಗೂ ಫೈಬರ್ ಹೊಂದಿರುತ್ತದೆ. ವಾಲ್ನಟ್ಸ್ ಮೆದುಳಿನ ಆಕಾರವನ್ನು ಹೋಲುತ್ತವೆ, ಮೆದುಳಿನ ಕಾರ್ಯಕ್ಕೆ ಬಹಳ ಪ್ರಯೋಜನಕಾರಿ. ಇವುಗಳಲ್ಲಿ ಕ್ಯಾಲೋರಿ ದಟ್ಟವಾಗಿರುತ್ತವೆ. ಬೆರಳೆಣಿಕೆಯಷ್ಟು ಮಾತ್ರ ಸೇವಿಸಬೇಕಾಗುತ್ತದೆ ಎಂದು ವೈದ್ಯರು ವಿವರಿಸುತ್ತಾರೆ.

ಬೆರ್ರಿಹಣ್ಣುಗಳು ಫೈಬರ್ ಹಾಗೂ ಪಾಲಿಫಿನಾಲ್ ಹಾಗೂ ಆಂಥೋಸಯಾನಿನ್ಸ್ ಎಂಬ ಸಸ್ಯ ಸಂಯುಕ್ತಗಳನ್ನು ಹೊಂದಿರುತ್ತವೆ. ಅವು ಉತ್ಕರ್ಷಣ ನಿರೋಧಕ, ಉರಿಯೂತ ನಿವಾರಕ ಗುಣಗಳನ್ನು ಹೊಂದಿವೆ. ಸ್ಥಳೀಯವಾಗಿ ಲಭಿಸುವಂತಹ ಎಲ್ಲಾ ವರ್ಣದ ಬೆರ್ರಿ ಹಣ್ಣುಗಳನ್ನು ಸೇವಿಸುವುದು ತುಂಬಾ ಮುಖ್ಯವಾಗುತ್ತದೆ. ದುಬಾರಿ ವಿದೇಶಿ ಬೆರ್ರಿಗಳನ್ನು ಮಾತ್ರ ಅವಲಂಬಿಸುವ ಅಗತ್ಯವಿಲ್ಲ ಎಂದು ತಜ್ಞರು ತಿಳಿಸುತ್ತಾರೆ.

ಟೊಮೆಟೊದಲ್ಲಿ ಕ್ಯಾರೊಟಿನಾಯ್ಡ್‌ಗಳು, ಲೈಕೋಪೀನ್, ಶಕ್ತಿಯುತವಾದ ಉತ್ಕರ್ಷಣ ನಿರೋಧಕ ಹಾಗೂ ವಿಟಮಿನ್ ಸಿ ಹೇರಳವಾಗಿ ಕಂಡುಬರುತ್ತದೆ. ಇದರಿಂದ ಮೆದುಳಿನ ಕೋಶಗಳನ್ನು ಸ್ವತಂತ್ರ ರಾಡಿಕಲ್‌ಗಳಿಂದ ರಕ್ಷಣೆ ಮಾಡಬಹುದು.

ಚಹಾ ಹಾಗೂ ಕಾಫಿಯಲ್ಲಿರುವ ಜೈವಿಕ ಸಕ್ರಿಯ ಸಂಯುಕ್ತಗಳು ಹಾಗೂ ಕೆಫೀನ್, ಸರಿಯಾದ ಪ್ರಮಾಣದಲ್ಲಿ ಸೇವಿಸಿದಾಗ, ಮೆದುಳಿನ ಯೋಚಿಸುವ, ಕೇಂದ್ರೀಕರಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಚಹಾ, ಕಾಫಿಯ ಸೀಮಿತ ಸೇವನೆಯು ಮೆದುಳಿಗೆ ಪ್ರಯೋಜನಕಾರಿಯಾಗಿದೆ. ಆತಂಕ, ಹೃದಯ ಬಡಿತ, ನಿದ್ರಾಹೀನತೆ, ಕೆಫೀನ್ ಅಲರ್ಜಿಯಿಂದ ಬಳಲುತ್ತಿರುವವರು ಸೇವನೆ ಮಿತಿಗೊಳಿಸಬೇಕು. ಚಹಾ ಅಥವಾ ಕಾಫಿಗೆ ಹೆಚ್ಚು ಸಕ್ಕರೆ, ಕ್ರೀಮ್ ಸೇರಿಸುವುದರಿಂದ ಅದರ ಪೌಷ್ಟಿಕಾಂಶದ ತೀರಾ ಕಡಿಮೆಯಾಗುತ್ತದೆ ಎಂದು ತಜ್ಞರು ವಿವರಿಸುತ್ತಾರೆ.

ಆಹಾರ ಕ್ರಮ ಸಾಕಾರಗುತ್ತದೆಯೇ ಮೇಲೆ ತಿಳಿಸಿರುವಂತಹ ಆಹಾರಗಳನ್ನು ಸೇವಿಸುವುದರಿಂದ ಮೆದುಳಿನ ಆರೋಗ್ಯ ಸದೃಢವಾಗುವುದಿಲ್ಲ. ಇದರೊಂದಿಗೆ ಪ್ರತಿದಿನ ದೈಹಿಕ ಚಟುವಟಿಕೆಯನ್ನು ಪಡೆಯಿರಿ. 7 ರಿಂದ 8 ಗಂಟೆಗಳ ಕಾಲ ನಿದ್ರೆ ಮಾಡಬೇಕಾಗುತ್ತದೆ. ರಕ್ತದಲ್ಲಿನ ಸಕ್ಕರೆ, ರಕ್ತದೊತ್ತಡ, ಹೈಕೊಲೆಸ್ಟ್ರಾಲ್ ಅನ್ನು ಯಾವಾಗಲೂ ನಿಯಂತ್ರಣದಲ್ಲಿ ಇರಿಸಬೇಕಾಗುತ್ತದೆ.

ಧೂಮಪಾನ ಅಭ್ಯಾಸವನ್ನು ತಪ್ಪಿಸಬೇಕಾಗುತ್ತದೆ. ನಿಮ್ಮ ಸ್ನೇಹಿತರೊಂದಿಗೆ ಬೆರೆಯಿರಿ, ಮೆದುಳನ್ನು ಉತ್ತೇಜಿಸುವ ಆಟಗಳು ತೊಡಗಿಸಿಕೊಳ್ಳಿ ಹಾಗೂ ಒಗಟುಗಳನ್ನು ಬಿಡಿಸುವುದರಲ್ಲಿ ತೊಡಗಿಸಿಕೊಳ್ಳಿ ಎಂದು ತಜ್ಞರು ಸಲಹೆ ನೀಡುತ್ತಾರೆ.

# ಸದಸ್ಯರ ಹಿತವೇ ಸಹಕಾರ ಸಂಘಗಳ ಧ್ಯೇಯ: ರವಿಚಂದ್ರ



ಬೆಂಗಳೂರು,ಸೆ.21–ಸಹಕಾರತತ್ವದ ಆಶಯಗಳನ್ನು ಅಳವಡಿಸಿಕೊಂಡು ಸದಸ್ಯರು ಹಾಗೂ ಗ್ರಾಹಕರ ಹಿತಾಸಕ್ತಿಗೆ ಆದ್ಯತೆ ನೀಡುವುದು ಸಹಕಾರ ಸಂಘಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಆರ್.ರವಿಚಂದ್ರ ಹೇಳಿದರು.

ಹುಣಸಮಾರನಹಳ್ಳಿಯಲ್ಲಿ ನಡೆದ ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಕಳೆದ 16 ವರ್ಷಗಳಿಂದ ಸಹಕಾರಿಯು ನಿರಂತರವಾಗಿ ಉತ್ತಮ ಸೇವೆ ನೀಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಠೇವಣಿ ಸಂಗ್ರಹ ಮತ್ತು ಸಾಲ ವಸೂಲಾತಿಯಲ್ಲಿ ಪ್ರಗತಿ ಸಾಧಿಸಿದೆ ಎಂದರು.

ಬಾಡಿಗೆ ಕಟ್ಟಡದಿಂದ ಆರಂಭಗೊಂಡ ಸಹಕಾರಿಯು ಇದೀಗ ಸ್ವಂತ ಕಟ್ಟಡ ಹೊಂದಿರುವುದು ಹೆಮ್ಮೆಯ ಸಂಗತಿ. ಮುಂದಿನ ದಿನಗಳಲ್ಲಿ ಸದಸ್ಯರಿಗೆ ಮತ್ತಷ್ಟು ಸೌಲಭ್ಯ ಕಲ್ಪಿಸುವ ಉದ್ದೇಶವಿದೆ. ಮಹಿಳಾ ಸಬಲೀಕರಣ ಹಾಗೂ ಗ್ರಾಮೀಣ ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸಾಲ ಸೌಲಭ್ಯ ಹೆಚ್ಚಿಸುವ ಚಿಂತನೆಯೂ ಇದೆ ಎಂದು ತಿಳಿಸಿದರು.

ಪ್ರತಿಭೆಗೆ ಪ್ರೋತ್ಸಾಹ: ಎಸ್ಎಸ್ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹಧನ ನೀಡಿ ಸನ್ಮಾನಿಸಲಾಯಿತು. ಮೃತಪಟ್ಟ ಸದಸ್ಯರ ಕುಟುಂಬಗಳಿಗೆ ಸಹಾಯಧನವನ್ನೂ ವಿತರಿಸಲಾಯಿತು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಬಿಬಿಎಂಪಿ ಮಾಜಿ ಸದಸ್ಯ ವಿ.ಎಂ. ಕೆಂಪೇಗೌಡ, ಓಂಕಾರ್ ಕಾಲೇಜಿನ ಪ್ರಾಂಶುಪಾಲ ಜಿ. ಸುರೇಶ್ ಹಾಗೂ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಭದ್ರಯ್ಯ ಅವರನ್ನು ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಬೆಂಗಳೂರು ಪ್ರಾಂತ್ಯದ ಅಭಿವೃದ್ಧಿ ಅಧಿಕಾರಿ ರವಿಕುಮಾರ್ ಸೇರಿದಂತೆ ಸಹಕಾರಿಯ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

# ಬೆಸ್ಕಾಂ ಪಶ್ಚಿಮ ವೃತ್ತದ ಕಚೇರಿ ಸ್ಥಳಾಂತರ



ಕೆಂಗೇರಿ, ಸೆ. 21 : ಬೆಸ್ಕಾಂ ಪಶ್ಚಿಮ ವೃತ್ತದ ನಾಗರೀಕರ ಹಿತ ದೃಷ್ಟಿಯಿಂದ ಕೆಂಗೇರಿಯಿಂದ ಕೆಂಗೇರಿ ಉಪನಗರದ ಅಂಬೇಡ್ಕರ್ ವೃತ್ತದ ಸಮೀಪದ ಸ್ಥಳಕ್ಕೆ ಕಚೇರಿಯನ್ನು ಸ್ಥಳಾಂತರಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರ ಎನ್.ಶಿವಕುಮಾರ್ ತಿಳಿಸಿದರು.

ಸರ್ ಎಂ. ವಿ ಬಡಾವಣೆ ಒಂದನೇ ಹಂತದ ಡಾ. ಬಿಆರ್ ಅಂಬೇಡ್ಕರ್ ವೃತ್ತ ಸಮೀಪದ ನಂ.1464, 3 ಮತ್ತು 4 ನೇ ಮಹಡಿಗೆ ಬೆಸ್ಕಾಂ ಪಶ್ಚಿಮ ವೃತ್ತದ ಕೆಂಗೇರಿ ವಿಭಾಗ ಕಚೇರಿಯನ್ನು ಸ್ಥಳಾಂತರಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪೂಜೆ ನೆರವೇರಿಸಿ ಮಾತನಾಡಿದರು. ನಾಗರಿಕರಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಆದ್ಯತೆ ನೀಡಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು.

ಶಾಸಕ ಎಸ್.ಟಿ.ಸೋಮಶೇಖರ್ ಅವರ ಸಹಕಾರ ಮತ್ತು ಮಾರ್ಗದರ್ಶನದಿಂದಾಗಿ ವಿದ್ಯುತ್ ಸರಬರಾಜುನಲ್ಲಿ ಯಾವುದೇ ಅಡಚಣೆ ಉಂಟಾಗುತ್ತಿಲ್ಲ ಎಂದು ತಿಳಿಸಿದರು. ಬೆಸ್ಕಾಂ ಸಿಬ್ಬಂದಿಗಳ ಸಂಪೂರ್ಣ ಸಹಕಾರದಿಂದಾಗಿ ಯಾವುದೇ ಅಡಚಣೆ ಇಲ್ಲದೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದರು. ವಿದ್ಯುತ್ ಗ್ರಾಹಕರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದರು. ಬೆಸ್ಕಾಂ ಇಂಜಿನಿಯರಿಂಗ್ ಅಸೋಸಿಯೇಷನ್ ಅಧ್ಯಕ್ಷರಾದ ಬಸವಣ್ಣ. ಪಶ್ಚಿಮ ವಿಭಾಗದ ಲೆಕ್ಕಾಧಿಕಾರಿ ನಿಂಗರಾಜು ಎಲ್. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಿತೇಂದ್ರಕುಮಾರ್. ಪ್ರಕಾಶ್. ಅನುರಾಧ. ಶಿಲ್ಪ. ಹಾಗೂ ಸಿಬ್ಬಂದಿ ಇದ್ದರು.

# ನಾಳೆ ಎಸ್.ಎಸ್. ಮೆಲೋಡಿ ವಾರ್ಷಿಕೋತ್ಸವ



ಬೆಂಗಳೂರು, ಸೆ. 21– ಖ್ಯಾತ ಗಾಯಕ ಡಾ. ಪಿ.ಬಿ. ಶ್ರೀನಿವಾಸ್‌ರವರ 96ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಹಾಗೂ ಎಸ್.ಎಸ್. ಮೆಲೋಡಿಸ್‌ನ 10ನೇ ವರ್ಷದ ವಾರ್ಷಿಕೋತ್ಸವವನ್ನು ನಾಳೆ ಸಂಜೆ 4 ಗಂಟೆಗೆ ಸಂಸ ಬಯಲು ಮಂದಿರ (ರವೀಂದ್ರ ಕಲಾಕ್ಷೇತ್ರ ಹಿಂಭಾಗ) ದಲ್ಲಿ ಏರ್ಪಡಿಸಲಾಗಿದೆ.

ರಾಮು ಮೆಲೋಡಿಸ್‌ನ ರಾಮುರವರ ಸಾರಥ್ಯ ಹಾಗೂ ಅನಂತ್‌ರವರ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಆಕ್ಟೀವ್ ಪಬ್ಲಿಕ್ ಶಾಲೆಯ ಸಂಸ್ಥಾಪಕಿ ಭಾಗ್ಯಶ್ರೀ ರವರು, ಕಾಂಗ್ರೆಸ್ ಮುಖಂಡ ಬಿ.ಎನ್. ನಟರಾಜ್ ರವರು, ಸಮಾಜ ಸೇವಕ, ರಾಜೇಂದ್ರ ಮತ್ತಿತರರು ಆಗಮಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಗಾಯಕ–ಗಾಯಕಿಯರಿಂದ ಗಾಯನ ನಡೆಯಲಿದೆ.



ಕನಕ ಸೌಹಾರ್ದ ಬ್ಯಾಂಕ್ ನ ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ್ದ ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ, ರಾಜ್ಯಸಭಾ ಸದಸ್ಯ ಪ್ರೊ. ನಾಗರಾಜ್‌ರವರನ್ನು ಮಾಜಿ ಬಿಬಿಎಂಪಿ ಸದಸ್ಯ ಡಾ. ಎಸ್. ರಾಜುರವರು ಹಾಗೂ ಬ್ಯಾಂಕಿನ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

# 50 ಲಕ್ಷ ಕುಟುಂಬಗಳಿಗೆ ಸೂರಿಲ್ಲ: ಮಾವಳ್ಳಿ ಶಂಕರ್




ಬೆಂಗಳೂರು, ಸೆ. 21–ಸರ್ಕಾರ ಬಿಡುಗಡೆ ಮಾಡಿರುವ ಇತ್ತೀಚಿನ ವರದಿ ಅನ್ವಯ ರಾಜ್ಯದಲ್ಲಿ ಸುಮಾರು ಐವತ್ತು ಲಕ್ಷ ಬಡ ಕುಟುಂಬಗಳು ವಸತಿ ಇಲ್ಲದೆ ಜೀವನ ನಡೆಸುತ್ತಿದ್ದಾರೆ ಎಂದು ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಡಿ.ಎಸ್.ಎಸ್. ಅಂಬೇಡ್ಕರ್ ವಾದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಕಳವಳ ವ್ಯಕ್ತಪಡಿಸಿದರು.

ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ನಗರದ ಕಬ್ಬನ್ ಪಾರ್ಕ್ ನಲ್ಲಿರುವ ಸಿ.ಎಂ.ಹಾಲ್, ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್ ನಲ್ಲಿ ಹಮ್ಮಿಕೊಳ್ಳಲಾಗಿದ್ದ ಸರ್ವ ಸದಸ್ಯರ ಸಭೆ ಹಾಗು ಮೂರನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಥಮವಾಗಿ

ದಮ್ಮಾಚಾರಿಗಳಾದ ಸತ್ಯಶೀಲನ್ ರವರು ಬುದ್ದಪೂಜೆ ನೆರವೇರಿಸಿ ಶುಭ ಕೋರಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಡವರಿಗೆ ಸೂರು ಕಲ್ಪಿಸುವ ಹಲವಾರು ಯೋಜನೆಗಳು ಜಾರಿಗೆ ತಂದರೂ ರಾಜ್ಯ ಸರ್ಕಾರದ ಇತ್ತೀಚಿನ ವರದಿ ಅನ್ವಯ ರಾಜ್ಯದಲ್ಲಿ ಸುಮಾರು ಐವತ್ತು ಲಕ್ಷ ಬಡ ಕುಟುಂಬಗಳು ವಸತಿ ಇಲ್ಲದೆ ಜೀವನ ನಡೆಸುತ್ತಿದ್ದಾರೆ. ಬಡ ಕುಟುಂಬಗಳು ಗ್ರಾಮೀಣ ಪ್ರದೇಶಗಳಿಂದ ಉದ್ಯೋಗವನ್ನು ಬಯಸಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಬಡವರಿಗಾಗಿ ರಾಜ್ಯ ಸರ್ಕಾರ ನಿರ್ಮಾಣ ಮಾಡಿರುವ ಸ್ಲಂ ಬೋರ್ಡ್ ಮನೆಗಳು ಕಳಪೆ ಕಾಮಗಾರಿಯಿಂದ ಕೂಡಿದ್ದು ವಾಸಕ್ಕೆ ಯೋಗ್ಯವಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇದೆಲ್ಲಾ ಕಾರಣಗಳಿಂದ ಬೆಂಗಳೂರು ವೇಗವಾಗಿ ಬೆಳೆಯುತ್ತಿದ್ದು ಭೂಮಿ ಬೆಲೆಗಳು ಸಹ ಹೆಚ್ಚಾಗುತ್ತಿವೆ. ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಕಡಿಮೆ ಬೆಲೆಯಲ್ಲಿ ನಿವೇಶನ ನೀಡುವ ಪ್ರಮಾಣಿಕ ಪ್ರಯತ್ನ ನಮ್ಮದಾಗಿದ್ದು ಸೂಕ್ತವಾದ ಜಾಗವನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಮಹಿಳೆಯರು ಸಮಾನವಾಗಿ ಕಾರ್ಯಕ್ರಮದಲ್ಲಿ

ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಯಾವುದೆ ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಮುಂದುವರೆದರೆ ಆ ದೇಶ ಮುಂದುವರೆದಂತೆ ಎಂಬುದು ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ ಆಶಯವಾಗಿತ್ತು. ಈಗಾಗಲೆ ನಾವು ಜಮೀನು ನೀಡುವಂತೆ ಉಪ ಮುಖ್ಯಮಂತ್ರಿಗಳಿಗೆ ಸಹ ಮನವಿ ಸಲ್ಲಿಸಿದ್ದೇವೆ. ಸನಿಹದಲ್ಲಿ ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ರಿಯಾಯತಿ ದರದಲ್ಲಿ ನಿವೇಶನ ನೀಡುವ ಕಾರ್ಯ ಮಾಡಲಾಗುವುದು ಎಂದು ತಿಳಿಸಿದರು.

ಇದೆ ವೇಳೆಯಲ್ಲಿ ವರ್ತೂರು ರವಿಕುಮಾರ್ ಸಂಘಕ್ಕೆ ದೇಣಿಗೆಯಾಗಿ 5 ಲಕ್ಷ ರೂ ಚೆಕ್ ನೀಡಿದರು.

ಈ ಸಂದರ್ಭದಲ್ಲಿ ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘದ ಉಪಾಧ್ಯಕ್ಷರಾದ ಆರ್.ನಾರಾಯಣ, ಖಜಾಂಚಿ ಮಣಿಪಾಲ್ ರಾಜಪ್ಪ,

ಪದಾಧಿಕಾರಿಗಳಾದ ಗೋವಿಂದ್ ಕುಮಾರ್, ಮುನಿನಂಜಪ್ಪ, ಶಿವಕುಮಾರ್, ಪುನೀತ್ ರಾಜ್, ನಾರಾಯಣಸ್ವಾಮಿ, ಉಷಾ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

# ಪಿಜ್ಜಾ ಡೆಲಿವರಿ ಬಾಯ್ ಆಸ್ಟ್ರೇಲಿಯಾದಲ್ಲಿ ಶ್ರೀಮಂತ ವ್ಯಕ್ತಿ



ಸಿಡ್ನಿ (ಆಸ್ಟ್ರೇಲಿಯಾ)ಸೆ.21– ವಿದೇಶಕ್ಕೆ ತೆರಳಿ ಶ್ರಮವಹಿಸಿ ದುಡಿದರೆ ಸಾಧನೆ ಮಾಡುವುದು ಅಸಾಧ್ಯವೇನಲ್ಲ ಎಂಬುದಕ್ಕೆ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಭಾರತೀಯ ಮೂಲದ ಯುವಕನೊಬ್ಬ ಅತ್ಯುತ್ತಮ ಉದಾಹರಣೆಯಾಗಿ ಹೊರಹೊಮ್ಮಿದ್ದಾನೆ. ಶಿಕ್ಷಣಕ್ಕಾಗಿ ಆಸ್ಟ್ರೇಲಿಯಾಕ್ಕೆ ತೆರಳಿ ಆರಂಭದಲ್ಲಿ ಜೀವನೋಪಾಯಕ್ಕಾಗಿ ಪಿಜ್ಜಾ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಯುವಕನೊಬ್ಬ, ಇಂದು ತನ್ನ ಕಠಿಣ ಶ್ರಮ ಹಾಗೂ ಸಾಧನೆಯಿಂದಾಗಿ ಮೂರು ಯಶಸ್ವಿ ರೆಸ್ಟೋರೆಂಟ್‌ಗಳ ಮಾಲೀಕನಾಗಿ, ಸ್ವಂತ ಮನೆ ಮತ್ತು ಐಷಾರಾಮಿ ಬಿಎಂಡಬ್ಲ್ಯು ಕಾರನ್ನು ಖರೀದಿಸುವ ಮೂಲಕ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದಾನೆ.

ಈ ಯಶಸ್ಸಿನ ಕಥೆಯನ್ನು ವಿನೀತ್ ಎಂಬ ಬಳಕೆದಾರರು ಸಾಮಾಜಿಕ ಜಾಲತಾಣವಾದ 'ಎಕ್ಸ್ (ಟ್ವಿಟರ್) ನಲ್ಲಿ ಹಂಚಿಕೊಂಡಿದ್ದು, ಸೋಷಿಯಲ್ ಮೀಡಿಯಾದಲ್ಲಿ ವ್ಯಾಪಕವಾಗಿ ವೈರಲ್ ಆಗಿದೆ. ತಮ್ಮ ಭಾವನ ಸಾಹಸಗಾಥೆಯನ್ನು ವಿವರಿಸಿರುವ ವಿನೀತ್ "ಉನ್ನತ ಶಿಕ್ಷಣಕ್ಕಾಗಿ 11 ವರ್ಷಗಳ ಹಿಂದೆ ಆಸ್ಟ್ರೇಲಿಯಾಕ್ಕೆ ತೆರಳಿದ್ದ ನನ್ನ ಭಾವ, ವಿದ್ಯಾಭ್ಯಾಸ ಮುಗಿದ ನಂತರ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಸೂಕ್ತ ಉದ್ಯೋಗ ಸಿಗದೆ ಸಾಕಷ್ಟು ಕಷ್ಟಪಟ್ಟರು. ಕೊನೆಗೆ ಜೀವನ ನಿರ್ವಹಣೆಗಾಗಿ ಸ್ಥಳೀಯ ಪಿಜ್ಜಾ ಶಾಪ್‌ನಲ್ಲಿ ಪೂರ್ಣಾವಧಿ ಕೆಲಸಕ್ಕೆ ಸೇರಿಕೊಂಡರು. ಗ್ರಾಹಕರಿಗೆ ಪಿಜ್ಜಾ ತಲುಪಿಸುವ ಕೆಲಸವೂ ಸೇರಿದಂತೆ ಸಿಕ್ಕ ಸಿಕ್ಕ ಕೆಲಸಗಳನ್ನು ಪ್ರಾಮಾಣಿಕತೆಯಿಂದ ಮಾಡಿದರು" ಎಂದು ಬರೆದುಕೊಂಡಿದ್ದಾರೆ.

ಆರಂಭಿಕ ದಿನಗಳಲ್ಲಿ ಅನುಭವಿಸಿದ ಕಷ್ಟ ಮತ್ತು ಸವಾಲುಗಳ ನಡುವೆಯೂ ಆ ಯುವಕ ಧೃತಿಗೆಡದೆ ತಮ್ಮ ಗಳಿಕೆಯಲ್ಲಿ ಒಂದಷ್ಟು ಹಣವನ್ನು ಉಳಿಸಲು ಪ್ರಾರಂಭಿಸಿದರು. ಮೂರು ವರ್ಷಗಳ ಕಾಲ ಪಿಜ್ಜಾ ಡೆಲಿವರಿ ಕೆಲಸ ಮಾಡಿ ಹಣ ಹಾಗೂ ಅನುಭವವನ್ನು ಕ್ರೋಡೀಕರಿಸಿಕೊಂಡ ನಂತರ, ಸಹಪಾಲುದಾರರ ನೆರವಿನಿಂದ ಪಿಜ್ಜಾ ಫ್ರಾಂಚೈಸಿಯೊಂದನ್ನು ಖರೀದಿಸಿ ತಮ್ಮ ಸ್ವಂತ ಉದ್ಯಮ ಪ್ರಯಾಣವನ್ನು ಆರಂಭಿಸಿದರು.

ಅಲ್ಲಿಂದ ಮುಂದೆ ಹಿಂತಿರುಗಿ ನೋಡದ ಅವರು ತಮ್ಮ ಕಠಿಣ ಪರಿಶ್ರಮ ಮತ್ತು ಉದ್ಯಮಶೀಲತೆಯಿಂದ ಉದ್ಯಮವನ್ನು ವಿಸ್ತರಿಸುತ್ತಾ ಸಾಗಿದರು. ಇಂದು ಅವರು ಆಸ್ಟ್ರೇಲಿಯಾದಲ್ಲಿ ಮೂರು ಪ್ರಸಿದ್ಧ ರೆಸ್ಟೋರೆಂಟ್‌ಗಳ ಯಶಸ್ವಿ ಮಾಲೀಕರಾಗಿದ್ದಾರೆ. ಅಷ್ಟೇ ಅಲ್ಲದೆ, ಆಸ್ಟ್ರೇಲಿಯಾದ ಪೌರತ್ವವನ್ನು ಪಡೆದುಕೊಂಡಿರುವ ಅವರು, ತಮಗಾಗಿ ಒಂದು ಸುಂದರ ಸ್ವಂತ ಮನೆ ಹಾಗೂ ಐಷಾರಾಮಿ 'ಬಿಎಂಡಬ್ಲ್ಯು' ಕಾರನ್ನು ಸಹ ಖರೀದಿಸಿದ್ದಾರೆ.

ವಿದೇಶಕ್ಕೆ ಹೋಗಿ ಶೂನ್ಯದಿಂದ ಆರಂಭಿಸಿ, ಇಂದು ಯಶಸ್ವಿ ಉದ್ಯಮಿಯಾಗಿ ಬೆಳೆದು ನಿಂತಿರುವ ಈ ಭಾರತೀಯ ಯುವಕನ ಕಥೆಯು ನೆಟ್ಟಿಗರ ಮನಗೆದ್ದಿದೆ. "ಕಠಿಣ ಶ್ರಮ, ಆತ್ಮವಿಶ್ವಾಸ ಮತ್ತು ನಿರಂತರ ಪ್ರಯತ್ನವಿದ್ದರೆ ಯಾವುದೇ ಹಂತದಿಂದಲೂ ಉನ್ನತ ಮಟ್ಟಕ್ಕೆ ಬೆಳೆಯಬಹುದು" ಎಂದು ನೆಟ್ಟಿಗರು ಕಮೆಂಟ್ ಮಾಡುವ ಮೂಲಕ ಈ ಯುವಕನ ಸಾಧನೆಗೆ ಶ್ಲಾಘನೆ ವ್ಯಕ್ತಪಡಿಸುತ್ತಿದ್ದಾರೆ.



ನಗರದ ಮಹಾಲಕ್ಷ್ಮೀ ಲೇ ಔಟ್‌ನಲ್ಲಿ ಇಂದು ನಡೆದ ಮಹಾಲಕ್ಷ್ಮಿ ಲೇ ಔಟ್ ವಾಸವಿ ದೇವಸ್ಥಾನ ವತಿಯಿಂದ ರೂಪಿಸಿರುವ ವಾಸವಿ ಸಿರಿ ಗೀತಾಂಜಲಿ ಪುಸ್ತಕವನ್ನು ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸಂಸದ ಡಾ. ಸಿ.ಎನ್. ಮಂಜುನಾಥ್‌ರವರು ಲೋಕಾರ್ಪಣೆ ಮಾಡಿದರು. ಡಾ. ಸಿರೀಷ ಎಸ್. ಕುಮಾರ್, ಡಾ. ಡಿ.ಎಲ್. ನಾಗೇಂದ್ರ, ಆರ್.ಪಿ. ರವಿಶಂಕರ್, ಡಾ. ಪಿ.ಎನ್. ಗೋವಿಂದ ರಾಜುಲು, ಉಮಾ ಸಾಯಿರಾಮ್ ಮತ್ತಿತರರು ಉಪಸ್ಥಿತರಿದ್ದರು.

# ಕ್ವಾಂಟಮ್ ತಂತ್ರಜ್ಞಾನಕ್ಕೆ ಬೆಂಗಳೂರು ಪೂರಕ



ಬೆಂಗಳೂರು,ಸೆ.21–ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ಜಾಗತಿಕ ಮಟ್ಟದ ಸಾಮರ್ಥ್ಯಗಳನ್ನು ನಿರ್ಮಿಸುವತ್ತ ಮುನ್ನಡೆಯುತ್ತಿದ್ದು, ಪ್ರತಿಭೆ, ಸಂಶೋಧನೆ, ನವೋದ್ಯಮಗಳು ಹಾಗೂ ಸುರಕ್ಷಿತ ಡಿಜಿಟಲ್ ಮೂಲಸೌಕರ್ಯ ಸೇರಿದಂತೆ ಕ್ವಾಂಟಮ್ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಬೆಂಗಳೂರು ಅತ್ಯುತ್ತಮ ಪರಿಸರ ವ್ಯವಸ್ಥೆ ಹೊಂದಿದೆ ಎಂದು ಗೃಹ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಕ್ವಾಂಟಮ್ ಭದ್ರತಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಯೂಎನ್‌ಯು ಲ್ಯಾಬ್ಸ್ ಸಂಸ್ಥೆಯ 10ನೇ ವಾರ್ಷಿಕೋತ್ಸವ ಹಾಗೂ ನೂತನ ಉತ್ಪನ್ನ ಕ್ಯೂಶೀಲ್ಡ್ 2.0 ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಂಸ್ಥೆಯ ಮುಂದಿನ ಹಂತದ ಬೆಳವಣಿಗೆಗೆ ಹಾಗೂ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಅದರ ಸಾಧನೆಯನ್ನು ಶ್ಲಾಘಿಸಿದರು.

ಭಾರತದ ಮೊದಲ ಹಾಗೂ ಏಕೈಕ ಕ್ವಾಂಟಮ್ ಕ್ರಿಪ್ಟೋಗ್ರಫಿ ಮತ್ತು ಕ್ವಾಂಟಮ್–ಸೇಫ್ ಸೈಬರ್ ಸುರಕ್ಷತಾ ಸಂಸ್ಥೆಯಾಗಿ ಕ್ಯೂಎನ್‌ಯು ಲ್ಯಾಬ್ಸ್ ಕಾರ್ಯನಿರ್ವಹಿಸುತ್ತಿದ್ದು, ಕಳೆದ ಒಂದು ದಶಕದಲ್ಲಿ ಕ್ವಾಂಟಮ್ ಭದ್ರತಾ ಕ್ಷೇತ್ರದಲ್ಲಿ ಜಾಗತಿಕವಾಗಿ ಗುರುತಿಸಿಕೊಂಡಿರುವ ಸಂಸ್ಥೆಯಾಗಿ ಬೆಳೆದಿದೆ ಎಂದು ತಿಳಿಸಿದರು.

**ಆರಂಭಿಕ ಹಂತದಲ್ಲೇ**

**ಸರ್ಕಾರದ ಬೆಂಬಲ :**

ರಾಜ್ಯದಲ್ಲಿ ನವೋದ್ಯಮಗಳು ಕೇವಲ ಆರಂಭಗೊಳ್ಳುವುದಷ್ಟೇ ಅಲ್ಲದೆ, ಸಂಶೋಧನೆ ಆಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಗುರುತಿಸಿಕೊಳ್ಳಲು ಅಗತ್ಯವಾದ ಪರಿಸರ ವ್ಯವಸ್ಥೆ ರಾಜ್ಯ ಸರ್ಕಾರ ನಿರ್ಮಿಸುತ್ತಿದೆ ಎಂದರು.

ಕ್ಯೂಶೀಲ್ಡ್ 2.0 ಬಿಡುಗಡೆ :

ಕಾರ್ಯಕ್ರಮದಲ್ಲಿ ಕ್ಯೂಎನ್‌ಯು ಲ್ಯಾಬ್ಸ್‌ನ ಬೆಳೆಯಲು ಆರಂಭಿಕ ಹಂತದಲ್ಲಿಯೇ ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಮುಂದಿನ ತಲೆಮಾರಿನ ವೇದಿಕೆಯಾದ ಕ್ಯೂಶೀಲ್ಡ್ 2.0 ಅನ್ನು ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು.

ಸೈಬರ್ ಸುರಕ್ಷತೆ ದಿನದಿಂದ ದಿನಕ್ಕೆ ಹೆಚ್ಚು ಮಹತ್ವ ಪಡೆಯುತ್ತಿರುವ ಸಂದರ್ಭದಲ್ಲಿ, ಕ್ವಾಂಟಮ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಂತಹ ಉದಯೋನ್ಮುಖ ತಂತ್ರಜ್ಞಾನಗಳ ಸಂಯೋಜನೆಯ ಮೂಲಕ ಸುರಕ್ಷಿತ ಡಿಜಿಟಲ್ ವ್ಯವಸ್ಥೆಗಳನ್ನು ನಿರ್ಮಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕದ ಕ್ವಾಂಟಮ್ ರೋಡ್‌ಮ್ಯಾಪ್‌ಗೆ ವೇಗ :

ಕರ್ನಾಟಕದ ಕ್ವಾಂಟಮ್ ರೋಡ್‌ಮ್ಯಾಪ್ ಅನ್ನು ಮುಂದಕ್ಕೆ ಕೊಂಡೊಯ್ಯುವ ಸಂದರ್ಭದಲ್ಲಿ, ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ತನ್ನ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸಿಕೊಳ್ಳುತ್ತಿದೆ. ಈ ಸಾಮರ್ಥ್ಯವನ್ನು ಬಳಸಿಕೊಂಡು ಭಾರತಕ್ಕೆ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಮಹತ್ವದ ತಾಂತ್ರಿಕ ಸಾಮರ್ಥ್ಯಗಳನ್ನು ನಿರ್ಮಿಸುವ ಅವಕಾಶ ಕರ್ನಾಟಕಕ್ಕಿದೆ ಎಂದು ಎಂದು ಪ್ರಿಯಾಂಕ್ ಖರ್ಗೆ ಹೇಳಿದರು

# ಕೆಎಸ್‌ಆರ್‌ಪಿ ಪೊಲೀಸ್ ಪರೀಕ್ಷೆ ಸುಸೂತ್ರ



ಶಿವಮೊಗ್ಗ,ಸೆ.21–ಕೆಎಸ್‌ಆರ್‌ಪಿ ಪೊಲೀಸ್ ಕಾನ್ಸ್‌ಟೆಬಲ್ (ಆರ್‌ಪಿಸಿ ಎನ್‌ಕೆಕೆ ವೃಂದ) ಹಾಗೂ ಆರ್‌ಪಿಸಿ ಎನ್‌ಕೆಕೆ ವೃಂದದ ಲಿಖಿತ ಪರೀಕ್ಷೆಯು, ಶಿವಮೊಗ್ಗ ಹಾಗೂ ಭದ್ರಾವತಿ ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಿತು.

ಆರ್‌ಪಿಸಿ ಎನ್‌ಕೆಕೆ ವೃಂದಕ್ಕೆ ಸಂಬಂಧಿಸಿದಂತೆ ಒಟ್ಟಾರೆ 34 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಶಿವಮೊಗ್ಗದ 29 ಹಾಗೂ ಭದ್ರಾವತಿಯ 5 ಕೇಂದ್ರಗಳಲ್ಲಿ ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿತ್ತು. 9380 ಪ್ರಶಿಕ್ಷಣಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಹಾಗೆಯೇ ಆರ್‌ಪಿಸಿ ಎನ್‌ಕೆಕೆ ವೃಂದಕ್ಕೆ ಸಂಬಂಧಿಸಿದಂತೆ 13 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. 3478 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಪೊಲೀಸ್ ಇಲಾಖೆ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯ ಜೊತೆಗೆ ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಂಡಿತ್ತು. ಪರೀಕ್ಷಾರ್ಥಿಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗಿತ್ತು. ಪ್ರತಿಯೊಂದು ಕೊಠಡಿಗಳಿಗೂ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು. ಅತ್ಯಂತ ಯಶಸ್ವಿಯಾಗಿ ಪರೀಕ್ಷೆ ನಡೆದಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

**CHANGE OF NAME**

I, **SUJATHA RANI** D/o Late **H.A.XAVIER,** aged about 44 years, R/at No.11, Golli Street, Halasuru, Bangalore-560008. have changed my Name from **SUJATHA RANI** to **LILLY JACINTHA,** vide affidavit dated 16-09-2026. Sworn before Notary **VARIJA.C.J,** Bangalore.

**DOCUMENT LOST**

I, M.Anitha have Lost My Original Sale deed documents Situated in "Chokkanathapuram Village of Hosur Taluk, Krishnagiri Dist., Doc No - 1908/1994, Sy No - 28/5A and 28/5B, (Area Extend 0.11 Cents), Field No - 74A in V.G.P Fruit Land Part I, (Present SRO Bagalur), While Some Personal Work in Bangalore Near C.V. Raman Nagar, Case Registered in Byappanahalli, Case No - 2426956/2026, SAKALA NO - P0012S260002365. AFF NO - IN KA 9355023861519Y,
Finder Please Contact or Return to This Address, M.Anitha, Do/No-113, 1st Main, 4th Cross, Saraswathipuram, Halasuru HAL II Stage, B'lore. Phone-9986839986.

**SOUTH INDIAN Bank** Date: 16.09.2026

**GOLD AUCTION NOTICE**

**CHRIST UNIVERSITY BRANCH**
CHRIST UNIVERSITY CAMPUS , HOSUR ROAD, DHARMARAM COLLEGE P.O, **BANGALORE-560 029.**
Ph: 080 - 41226174 Email: br0396@sib.co.in

The Gold articles pledged under the following number/s at **South Indian Bank, Christ University Branch** which are not cleared by payment of Bank dues even after serving registered notice and Gold articles pledged under the same number against which registered notices have been served/returned undelivered will be sold in public auction or private treaty on as is where is condition at **Branch Premises** as under or any other convenient date and time without further notice at the risk and responsibility of the pawners , if they are not released from the branch.Auction of Gold ornaments pledged under the following accounts will be held at South Indian Bank, Christ University Branch on **29/09/2026 at 3.30 p.m. Kindly note that a Caution deposit of Rs. 5000 will be collected before the auction, and the deadline for collection of the same is 3:20 p.m.**

| Sl. No. | Name | A/c No. | Gross Wt (in gms) | Net Wt (in gms) | Loan Amount |
|---|---|---|---|---|---|
| 1 | BANKIM GAIN | 0396.653.10275 | 35 | 31 | 275000 |
| 2 | SIVAKANTHA SETTY | 0396.653.9434 | 34.3 | 29 | 130000 |

*Bank reserves its rights to cancel/ adjourn the auction without giving any reason at any time.* Sd/- Manager

Corporate Office Regd. Office: SIB House, T B Road, Mission Quarters, Thrissur, Kerala - 680001
Telephone Number : + 91-487-2420020, Fax Number : + 91-487-2420020, E-Mail : sibcorporate@sib.co.in,
Website : www.southindianbank.com. Corporate Identity Number: L65191KL1929PLC001017

**ಪ್ರಮೋದ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ (ರಿ)**
ನೋಂದಣಿ ಸಂಖ್ಯೆ: DYR/228/63–64 ದಿನಾಂಕ: 23–05–1963
ಸಂಖ್ಯೆ: 125/1, 50 ಅಡಿ ರಸ್ತೆ, ಪ್ರಮೋದ್ ಲೇಔಟ್, ಪಂತರಪಾಳ್ಯ, ನಾಯಂಡಹಳ್ಳಿ, ಬೆಂಗಳೂರು–560039.

**ಪ್ರಕಟಣೆ**

ದಿನಾಂಕ: 05–09–2026 ಸಂಘದ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, ಸದರಿ ಸಂಘದ 2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 24–09–2026ರಂದು ಸಂಘದ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಸಭೆಗೆ ಆಹ್ವಾನಿಸಿದುದರ ಜೊತೆಗೆ, ಈ ಪತ್ರಿಕಾ ಪ್ರಕಟಣೆಯ ಮೂಲಕವೂ ಸಭೆಗೆ ಹಾಜರಾಗುವಂತೆ ವಿನಂತಿಸಲಾಗಿದೆ.

ಇಂತು,
ಆಡಳಿತ ಮಂಡಳಿಯಪ್ಪಣೆ ಮೇರೆಗೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ



ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್‌ರವರು ಇಂದು ವಿಧಾನಸೌಧದ ತಮ್ಮ ಕೊಠಡಿಯಲ್ಲಿ ಸಚಿವರು ಹಾಗೂ ಪರಿಷತ್ ಸದಸ್ಯರುಗಳ ಸಭೆ ನಡೆಸಿದರು. ಸಚಿವ ಡಾ. ಯತೀಂದ್ರ ಸಿದ್ಧರಾಮಯ್ಯ, ಎಂಎಲ್‌ಸಿ ಬೋಸರಾಜು ಮತ್ತಿತರರ ಸದಸ್ಯರು ಭಾಗವಹಿಸಿದ್ದರು.

# ದಸರಾ ಗೋಲ್ಡ್ ಕಾರ್ಡ್ ಮಾರಾಟ ಆರಂಭ

ಮೈಸೂರು.ಸೆ.21– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಗೋಲ್ಡ್ ಕಾರ್ಡ್ ಹಾಗೂ ವಿವಿಧ ಕಾರ್ಯಕ್ರಮಗಳ ಟಿಕೆಟ್‌ಗಳ ಮಾರಾಟಕ್ಕೆ ಚಾಲನೆ ನೀಡಲಾಗಿದೆ.




ದಸರಾ ಅಧಿಕೃತ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಟಿಕೆಟ್ ಹಾಗೂ ಗೋಲ್ಡ್ ಕಾರ್ಡ್ ಬುಕ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ದಸರಾ ಗೋಲ್ಡ್ ಕಾರ್ಡ್‌ಗೆ 6,500 ದರ ನಿಗದಿಪಡಿಸಲಾಗಿದೆ.ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ 3,500, ಡ್ರೋನ್ ಶೋಗೆ 1,000 ಹಾಗೂ ಪಂಜಿನ ಕವಾಯತು ವೀಕ್ಷಣೆಗೆ 1,500 ದರ ನಿಗದಿಯಾಗಿದೆ.

ಗೋಲ್ಡ್ ಕಾರ್ಡ್ ಹೊಂದಿರುವವರಿಗೆ ದಸರಾ ಮಹೋತ್ಸವದ ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳಿಗೆ ಪ್ರವೇಶದ ಅವಕಾಶ ಇರಲಿದೆ. ಜೊತೆಗೆ ಮೈಸೂರು ಅರಮನೆ, ಮೈಸೂರು ಮೃಗಾಲಯ ಹಾಗೂ ಚಾಮುಂಡಿ ಬೆಟ್ಟಕ್ಕೆ ತಲಾ ಒಂದು ಬಾರಿ ಉಚಿತ ಪ್ರವೇಶದ ಸೌಲಭ್ಯ ಕಲ್ಪಿಸಲಾಗಿದೆ.

ದಸರಾ ಮಹೋತ್ಸವದ ಪ್ರಮುಖ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಆಸಕ್ತರು ಆನ್‌ಲೈನ್ ಮೂಲಕ ಟಿಕೆಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸಬಹುದಾಗಿದೆ.

# ಬರಪೀಡಿತ ತಾಲೂಕು ಘೋಷಣೆ ಎಚ್‌ಕೆಪಿ ಗಡುವು

ಬೆಂಗಳೂರು.ಸೆ.21– ಉತ್ತರ ಕರ್ನಾಟಕದ ಅರ್ಹ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸುವಲ್ಲಿ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಹೆಚ್.ಕೆ. ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಹಲವು ಭಾಗಗಳಲ್ಲಿ ಬರದ ಸಮಸ್ಯೆ ಎದುರಾಗಿದ್ದು, ಮುಖ್ಯಮಂತ್ರಿ ಹಾಗೂ ಸಚಿವರು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ.

ಆದರೆ ಗದಗ ಜಿಲ್ಲೆಯ ಯಾವುದೇ ತಾಲೂಕು ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ ಎಂದು ಹೇಳಿದರು

ಶೇ.20ರಷ್ಟು ಮಳೆ ಕೊರತೆ ಇರುವ ಪ್ರದೇಶಗಳನ್ನು ಬರಪೀಡಿತವೆಂದು ಪರಿಗಣಿಸಲಾಗುತ್ತಿದೆ. ಆದರೆ ಶೇ.49ರಷ್ಟು ಮಳೆ ಕೊರತೆ ದಾಖಲಾಗಿರುವ ಪ್ರದೇಶಗಳನ್ನು ಏಕೆ ಬರಪೀಡಿತವೆಂದು ಘೋಷಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉತ್ತರ ಕರ್ನಾಟಕದ 73 ತಾಲೂಕುಗಳ ಪೈಕಿ 20 ತಾಲೂಕುಗಳನ್ನು ಇನ್ನೂ ಬರಪೀಡಿತ ಎಂದು ಘೋಷಿಸಿಲ್ಲ. ಅರ್ಹ ತಾಲೂಕುಗಳನ್ನು ತಕ್ಷಣ ಬರಪೀಡಿತ ಎಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ಅಕ್ಟೋಬರ್ 2ರೊಳಗೆ ಬರಪೀಡಿತ ತಾಲೂಕುಗಳ ಘೋಷಣೆ ಆಗಬೇಕು. ಅಕ್ಟೋಬರ್ 10ರೊಳಗೆ ಘೋಷಣೆ ಮಾಡದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಬದ್ಧನಾಗಿದ್ದೇನೆ ಎಂದು ಪಾಟೀಲ್ ಎಚ್ಚರಿಕೆ ನೀಡಿದರು

ತಮ್ಮ ಕ್ಷೇತ್ರದ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೆ ಮೂರು ಪುಟಗಳ ಪತ್ರ ಬರೆದಿದ್ದು, ಜಿಲ್ಲಾಧಿಕಾರಿಗಳ ವರದಿ, ಮಳೆ ಕೊರತೆ–ಯ ಅಂಕಿ–ಅಂಶಗಳು, ಬೆಳೆ ವಿಮೆ ಹಾಗೂ ಅಧಿಕಾರಿಗಳ ವಿಳಂಬದ ಕುರಿತು ಮಾಹಿತಿ ನೀಡಿರುವುದಾಗಿ ಅವರು ತಿಳಿಸಿದರು.

ಗದಗ ತಾಲೂಕಿಗೆ ಬೆಳೆ ಪರಿಹಾರ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದರೂ, ಅಧಿಕಾರಿಗಳ ಮಟ್ಟದಲ್ಲಿ ವಿಳಂಬವಾಗುತ್ತಿದೆ ಎಂದು ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ಆದರೆ ರೈತರ ಹಿತಕ್ಕೆ ಧಕ್ಕೆ ಬಂದಾಗ ಸುಮ್ಮನಿರಲು ಸಾಧ್ಯವಿಲ್ಲ ಎಂದು ಅವರು ಹೇಳಿದರು

# ಪೋಖ್ರಾನ್‌ನಲ್ಲಿ 'ಕಲಾ' ದಾಳಿ ಡ್ರೋನ್ ಯಶಸ್ವಿ ಪರೀಕ್ಷೆ

ನವದೆಹಲಿ, ಸೆ.21: ನೋಯ್ಡಾ ಮೂಲದ ಐಜಿ ಡಿಫೆನ್ಸ್ ಸಂಸ್ಥೆ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ದೀರ್ಘವ್ಯಾಪ್ತಿ ಏಕಮುಖ ದಾಳಿ ಡ್ರೋನ್ 'ಕಲಾ (KAL)' ರಾಜಸ್ಥಾನದ ಪೋಖ್ರಾನ್ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಯಶಸ್ವಿಯಾಗಿ ಪರೀಕ್ಷೆಗೆ ಒಳಪಟ್ಟಿದೆ. ಈ ಪರೀಕ್ಷೆಯು ಭಾರತದ ಸ್ವದೇಶಿ ದೀರ್ಘವ್ಯಾಪ್ತಿ ಮಾನವರಹಿತ ದಾಳಿ ಸಾಮರ್ಥ್ಯ ಅಭಿವೃದ್ಧಿಯಲ್ಲಿ ಮಹತ್ವದ ಹಂತವಾಗಿದೆ ಎಂದು ಸಂಸ್ಥೆ ತಿಳಿಸಿದೆ.

'ಕಲಾ' ಡ್ರೋನ್ 1,000 ಕಿ.ಮೀ.ವರೆಗೆ ಕಾರ್ಯಾಚರಣಾ ವ್ಯಾಪ್ತಿ, 7ರಿಂದ 8 ಗಂಟೆಗಳವರೆಗೆ ಹಾರಾಟ ಸಾಮರ್ಥ್ಯ ಹಾಗೂ ಗರಿಷ್ಠ 50 ಕೆ.ಜಿ. ಪೇಲೋಡ್ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಸಮುದ್ರಮಟ್ಟದಿಂದ ಸುಮಾರು 5,000 ಮೀಟರ್ ಎತ್ತರದವರೆಗೆ ಕಾರ್ಯನಿರ್ವಹಿಸುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

### ಸ್ವಯಂಚಾಲಿತ ಹಾರಾಟ ವ್ಯವಸ್ಥೆ

ಡ್ರೋನ್‌ನಲ್ಲಿ ಮಲ್ಟಿ–ಬ್ಯಾಂಡ್ GNSS (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಮತ್ತು INS (ಇನರ್ಷಿಯಲ್ ನ್ಯಾವಿಗೇಷನ್ ಸಿಸ್ಟಂ) ಒಳಗೊಂಡ ನ್ಯಾವಿಗೇಷನ್ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ಕಾರ್ಯಾಚರಣೆಯ ವಿವಿಧ ಹಂತಗಳಲ್ಲಿ ಸ್ವಯಂಚಾಲಿತ ಹಾರಾಟಕ್ಕೆ ನೆರವಾಗಲಿದೆ.ಮೂಲಸೌಕರ್ಯಗಳು, ರಾಡಾರ್ ವ್ಯವಸ್ಥೆಗಳು, ವಾಯು ರಕ್ಷಣಾ ವ್ಯವಸ್ಥೆಗಳು ಸೇರಿದಂತೆ ನಿಗದಿತ ಗುರಿಗಳ ವಿರುದ್ಧ ನಿಖರ ದಾಳಿಗೆ 'ಕಲಾ'ವನ್ನು ವಿನ್ಯಾಸಗೊಳಿಸಲಾಗಿದೆ. ಆದರೆ ಅದರ ಬಳಕೆ ಕಾರ್ಯಾಚರಣೆಯ ವಿನ್ಯಾಸ ಮತ್ತು ಸಂಬಂಧಿತ ಅನುಮತಿಗಳಿಗೆ ಒಳಪಟ್ಟಿರುತ್ತದೆ ಎಂದು ಸಂಸ್ಥೆ ಹೇಳಿದೆ.

### ಯುದ್ಧ ತಂತ್ರಜ್ಞಾನದಲ್ಲಿ ಹೆಚ್ಚುತ್ತಿರುವ ಬಳಕೆ

ರಷ್ಯಾ–ಉಕ್ರೇನ್ ಯುದ್ಧದಲ್ಲಿ ಇರಾನ್ ಮೂಲದ ಶಾಹೆದ್–136 ಮತ್ತು ರಷ್ಯಾದ ಗೆರಾನ್–2 ಮಾದರಿಯ ದೀರ್ಘವ್ಯಾಪ್ತಿ ಡ್ರೋನ್‌ಗಳ ಬಳಕೆ ಮಾನವರಹಿತ ದಾಳಿ ವ್ಯವಸ್ಥೆಗಳ ಮಹತ್ವವನ್ನು ಹೆಚ್ಚಿಸಿದೆ. ಕಡಿಮೆ ವೆಚ್ಚದಲ್ಲಿ ದೀರ್ಘ ದೂರದ ದಾಳಿ ನಡೆಸುವ ಸಾಮರ್ಥ್ಯ ಹಾಗೂ ವಾಯು ರಕ್ಷಣಾ ವ್ಯವಸ್ಥೆಗಳ ಮೇಲೆ ನಿರಂತರ ಒತ್ತಡ ಹೇರುವ ಸಾಧ್ಯತೆಯಿಂದ ಇಂತಹ ಡ್ರೋನ್‌ಗಳು ಆಧುನಿಕ ಯುದ್ಧತಂತ್ರದ ಪ್ರಮುಖ ಭಾಗವಾಗುತ್ತಿವೆ.

ಈ ಹಿನ್ನೆಲೆಯಲ್ಲಿ 'ಕಲಾ'ವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದ್ದು, ಏರ್‌ಫ್ರೇಮ್, ಪ್ರೊಪಲ್ಷನ್, ಏವಿಯಾನಿಕ್ಸ್, ನ್ಯಾವಿಗೇಷನ್ ಮತ್ತು ಮಿಷನ್ ವ್ಯವಸ್ಥೆಗಳ ಸಮಗ್ರ ಕಾರ್ಯಕ್ಷಮತೆಯನ್ನು ಪೋಖ್ರಾನ್ ಪರೀಕ್ಷೆಯಲ್ಲಿ ಪರಿಶೀಲಿಸಲಾಗಿದೆ ಎಂದು ಐಜಿ ಡಿಫೆನ್ಸ್ ತಿಳಿಸಿದೆ.

# 10 ಮೀಟರ್ ಏರ್‌ರೈಫಲ್‌ನಲ್ಲಿ ಭಾರತಕ್ಕೆ ಬೆಳ್ಳಿ

## ರುದ್ರಾಂಕ್ಸ್,ಹಿಮಾಂಶು ಫೈನಲ್‌ಗೆ




ಐಚಿ–ನಗೋಯಾ, ಸೆ.21: ಏಷ್ಯನ್ ಗೇಮ್ಸ್ 2026ರ ಶೂಟಿಂಗ್ ವಿಭಾಗದಲ್ಲಿ ಭಾರತ ಮತ್ತೊಂದು ಬೆಳ್ಳಿ ಪದಕ ಗೆದ್ದಿದೆ. ಪುರುಷರ 10 ಮೀಟರ್ ಏರ್ ರೈಫಲ್ ತಂಡ ಸ್ಪರ್ಧೆಯಲ್ಲಿ ರುದ್ರಾಂಕ್ಷ್ ಪಾಟೀಲ್, ಹಿಮಾಂಶು ಧಿಲ್ಲೋನ್ ಹಾಗೂ ಪಾರ್ಥ್ ಮಾನೆ ಅವರನ್ನೊಳಗೊಂಡ ಭಾರತ ತಂಡ 1890.1 ಅಂಕಗಳೊಂದಿಗೆ ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು.



ಅತ್ಯುತ್ತಮ ಪ್ರದರ್ಶನ ನೀಡಿದ ಚೀನಾ ತಂಡದ ಶೆಂಗ್ ಲಿಹಾವೊ, ಮಾ ಸಿಹಾನ್ ಹಾಗೂ ಝೂಂಗ್ ಚಾಂಗ್‌ಹಾಂಗ್ ಅವರ ತಂಡ 1899.0 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದಿತು. ಚೀನಾದ ಈ ಮೊತ್ತ ಅರ್ಹತಾ ಹಂತದಲ್ಲಿ ವಿಶ್ವ ದಾಖಲೆಯ ಸಾಧನೆಯಾಗಿದೆ.

ಭಾರತದ ಪರ ರುದ್ರಾಂಕ್ಷ್ ಪಾಟೀಲ್ ವೈಯಕ್ತಿಕ ಅರ್ಹತಾ ಸುತ್ತಿನಲ್ಲಿ 631.8 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರೆ, ಹಿಮಾಂಶು ಧಿಲ್ಲೋನ್ 630.0 ಅಂಕಗಳೊಂದಿಗೆ ಏಳನೇ ಸ್ಥಾನ ಗಳಿಸಿದರು. ಪಾರ್ಥ್ ಮಾನೆ 628.3 ಅಂಕಗಳೊಂದಿಗೆ 10ನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಅಗ್ರ ಎಂಟು ಸ್ಥಾನಗಳಲ್ಲಿ ಮೂವರು ಚೀನಾ ಶೂಟರ್‌ಗಳು ಸ್ಥಾನ ಪಡೆದಿದ್ದರೂ, ನಿಯಮದಂತೆ ಒಂದೇ ದೇಶದ ಗರಿಷ್ಠ ಇಬ್ಬರು ಸ್ಪರ್ಧಿಗಳು ಮಾತ್ರ ವೈಯಕ್ತಿಕ ಫೈನಲ್‌ಗೆ ಅರ್ಹರಾಗಬಹುದಾಗಿದೆ. ಹೀಗಾಗಿ ಐದನೇ ಸ್ಥಾನ ಪಡೆದಿದ್ದ ಝೂಂಗ್ ಚಾಂಗ್‌ಹಾಂಗ್ ಫೈನಲ್‌ನಿಂದ ಹೊರಗುಳಿದರು. ಇದರಿಂದ ಭಾರತದ ರುದ್ರಾಂಕ್ಷ್ ಮತ್ತು ಹಿಮಾಂಶು ವೈಯಕ್ತಿಕ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ.

ವೈಯಕ್ತಿಕ ಅರ್ಹತಾ ಸುತ್ತಿನಲ್ಲಿ ಚೀನಾದ ಶೆಂಗ್ ಲಿಹಾವೊ 635.4 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದು ಏಷ್ಯನ್ ಗೇಮ್ಸ್ ಅರ್ಹತಾ ದಾಖಲೆಯನ್ನೂ ನಿರ್ಮಿಸಿದರು. ಮಾ ಸಿಹಾನ್ 633.0 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು.ಮಹಿಳೆಯರ 10 ಮೀಟರ್ ಏರ್ ರೈಫಲ್ ತಂಡ ಸ್ಪರ್ಧೆಯಲ್ಲೂ ಭಾರತ ಬೆಳ್ಳಿ ಪದಕ ಗೆದ್ದಿತ್ತು. ಎಲವೆನಿಲ್ ವಲರಿವನ್, ಸೋನಂ ಮಾಸ್ಕರ್ ಹಾಗೂ ವಿದರ್ಶಾ ವಿನೋದ್ ತಂಡ ಬೆಳ್ಳಿ ಸಾಧನೆ ಮಾಡಿತ್ತು. ಬಳಿಕ ಎಲವೆನಿಲ್ ವೈಯಕ್ತಿಕ ಸ್ಪರ್ಧೆಯಲ್ಲೂ ಪದಕ ಗೆದ್ದಿದ್ದರು.

ಈ ಮೂಲಕ ಏಷ್ಯನ್ ಗೇಮ್ಸ್‌ನ ಶೂಟಿಂಗ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರಿದಿದ್ದು, ಪುರುಷರ ತಂಡದ ಬೆಳ್ಳಿ ಪದಕದ ಬಳಿಕ ರುದ್ರಾಂಕ್ಷ್ ಹಾಗೂ ಹಿಮಾಂಶು ಅವರ ವೈಯಕ್ತಿಕ ಫೈನಲ್ ಮೇಲೂ ಭಾರತದ ಕ್ರೀಡಾಭಿಮಾನಿಗಳ ಗಮನ ನೆಟ್ಟಿದೆ.



# ಇತಿಹಾಸ ಬರೆದ ಸುಚಿಕಾ

## 60 ಕೆ.ಜಿ. ವಿಭಾಗದಲ್ಲಿ ಕಂಚು

ಐಚಿ–ನಗೋಯಾ,ಸೆ.21: ಏಷ್ಯನ್ ಗೇಮ್ಸ್ 2026ರಲ್ಲಿ ಭಾರತಕ್ಕೆ ಮತ್ತೊಂದು ಪದಕ ಒಲಿದುಬಂದಿದ್ದು, ಮಹಿಳಾ ಮಿಶ್ರ ಸಮರಕಲೆ ವಿಭಾಗದಲ್ಲಿ ಸುಚಿಕಾ ತಾರಿಯಾಲ್ ಇತಿಹಾಸ ನಿರ್ಮಿಸಿದ್ದಾರೆ. ಎಂಎಂಎಯ ಮಹಿಳೆಯರ ಟ್ರೆಡಿಷನಲ್ 60 ಕೆ.ಜಿ. ವಿಭಾಗದಲ್ಲಿ ಸುಚಿಕಾ ಕಂಚಿನ ಪದಕ ಗೆದ್ದಿದ್ದು, ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಭಾರತಕ್ಕೆ ಈ ಕ್ರೀಡೆಯ ಮೊದಲ ಪದಕ ತಂದುಕೊಟ್ಟಿದ್ದಾರೆ.

ಸೆಮಿಫೈನಲ್‌ನಲ್ಲಿ ಸಿಂಗಾಪುರದ ಹುಯಿ ಹೂನ್ ಟಿಯೋ ವಿರುದ್ಧ ಸುಚಿಕಾ 0–2 ಅಂತರದಲ್ಲಿ ಸೋಲು ಅನುಭವಿಸಿದರು. ಹೆಚ್ಚುವರಿ ಸುತ್ತಿನಲ್ಲೂ ಗೆಲುವು ಸಾಧಿಸಲು ಸಾಧ್ಯವಾಗದ ಕಾರಣ ಫೈನಲ್ ಪ್ರವೇಶದ ಅವಕಾಶ ಕೈತಪ್ಪಿತು. ಆದರೆ ಸೆಮಿಫೈನಲ್‌ಗೆ ತಲುಪುವ ಮೂಲಕ ಕಂಚಿನ ಪದಕ ಖಚಿತಪಡಿಸಿಕೊಂಡಿದ್ದರು.

ಇದಕ್ಕೂ ಮುನ್ನ ಕ್ವಾರ್ಟರ್‌ಫೈನಲ್‌ನಲ್ಲಿ ಮಂಗೋಲಿಯಾದ ಅಲ್ಟಾಂಚಿಮೆಗ್ ಬೈಗಾಲ್ಮಾ ಅವರನ್ನು 2–0 ಅಂತರದಲ್ಲಿ ಮಣಿಸಿ ಸುಚಿಕಾ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದರು.

36 ವರ್ಷದ ಸುಚಿಕಾ ತಾರಿಯಾಲ್ ಈ ಹಿಂದೆ 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಜೂಡೋದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 2023ರ ಏಷ್ಯನ್ ಗೇಮ್ಸ್‌ನಲ್ಲಿ ಕುರಾಶ್ ಸ್ಪರ್ಧೆಯಲ್ಲೂ ಪಾಲ್ಗೊಂಡಿದ್ದರು. ಇದೀಗ ಎಂಎಂಎಯಲ್ಲಿ ಐತಿಹಾಸಿಕ ಪದಕ ಗೆದ್ದು ತಮ್ಮ ಕ್ರೀಡಾ ಪಯಣದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಎಂಎಂಎ ಇದೇ ಮೊದಲ ಬಾರಿಗೆ ಸ್ಪರ್ಧಾ ಕ್ರೀಡೆಯಾಗಿ ಸೇರ್ಪಡೆಯಾಗಿದ್ದು, ಭಾರತಕ್ಕೆ ಮೊದಲ ಪದಕವೂ ಸುಚಿಕಾ ಅವರಿಂದಲೇ ಬಂದಿದೆ.

ಸುಚಿಕಾ ಅವರ ಕಂಚಿನ ಪದಕದೊಂದಿಗೆ ಏಷ್ಯನ್ ಗೇಮ್ಸ್ 2026ರಲ್ಲಿ ಭಾರತದ ಪದಕಗಳ ಸಂಖ್ಯೆ ನಾಲ್ಕಕ್ಕೆ ಏರಿದೆ. ಇದರಲ್ಲಿ ಮೂರು ಬೆಳ್ಳಿ ಪದಕಗಳು ಶೂಟಿಂಗ್ ವಿಭಾಗದಿಂದ ಬಂದಿವೆ.

ಪುರುಷರ 10 ಮೀಟರ್ ಏರ್ ರೈಫಲ್ ತಂಡ ಸ್ಪರ್ಧೆಯಲ್ಲಿ ರುದ್ರಾಂಕ್ಷ್ ಪಾಟೀಲ್, ಹಿಮಾಂಶು ಧಿಲ್ಲೋನ್ ಮತ್ತು ಪಾರ್ಥ್ ಮಾನೆ ಅವರ ತಂಡ 1890.1 ಅಂಕಗಳೊಂದಿಗೆ ಬೆಳ್ಳಿ ಗೆದ್ದಿದೆ. ಚೀನಾ 1899.0 ಅಂಕಗಳೊಂದಿಗೆ ಚಿನ್ನದ ಪದಕ ಪಡೆದಿದೆ. ಭಾರತದ ರುದ್ರಾಂಕ್ಷ್ ಹಾಗೂ ಹಿಮಾಂಶು ವೈಯಕ್ತಿಕ 10 ಮೀಟರ್ ಏರ್ ರೈಫಲ್ ಫೈನಲ್‌ಗೂ ಅರ್ಹತೆ ಪಡೆದಿದ್ದಾರೆ.

ಇದಕ್ಕೂ ಮುನ್ನ ಮಹಿಳೆಯರ 10 ಮೀಟರ್ ಏರ್ ರೈಫಲ್ ತಂಡ ಸ್ಪರ್ಧೆಯಲ್ಲೂ ಭಾರತ ಬೆಳ್ಳಿ ಪದಕ ಗೆದ್ದಿತ್ತು. ಶೂಟಿಂಗ್‌ನಲ್ಲಿನ ಪದಕ ಸಾಧನೆಯ ನಡುವೆ ಸುಚಿಕಾ ತಾರಿಯಾಲ್ ಅವರ ಎಂಎಂಎ ಕಂಚಿನ ಪದಕ ಭಾರತದ ಪದಕ ಪಟ್ಟಿಗೆ ಹೊಸ ಕ್ರೀಡೆಯೊಂದರ ಸೇರ್ಪಡೆಯಾಗಿದೆ.

# ತರಬೇತಿ ವೇಳೆ ವಿಮಾನ ಅಪಘಾತ ಭಾರತೀಯ ವಿದ್ಯಾರ್ಥಿಗಳ ಸಾವು



ನವದೆಹಲಿ,ಸೆ.21–ವಿಮಾನ ತರಬೇತಿ ಪಡೆಯುತ್ತಿದ್ದ ವೇಳೆಯಲ್ಲಿ ಸಂಭವಿಸಿದ ಭೀಕರ ವಿಮಾನ ಅಪಘಾತದಲ್ಲಿ ಭಾರತದ ಇಬ್ಬರು ತರಬೇತುದಾರ ಪೈಲಟ್‌ಗಳು ದುರಂತ ಸಾವನ್ನಪ್ಪಿದ್ದಾರೆ. ಮೃತರನ್ನು ತಮಿಳುನಾಡಿನ ಮನೋಜ್ ಶಿವಕುಮಾರ್ ಹಾಗೂ ಪುದುಚೇರಿಯ ಶ್ರೀಶರನ್ ತಿರುಜ್ಞಾನ ಸಂಬಂಧಂ ಎಂದು ಗುರುತಿಸಲಾಗಿದೆ. ಕೆನಡಾದ ವ್ಯಾಂಕೂವರ್‌ನಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಕಚೇರಿಯು ಈ ದಾರುಣ ಘಟನೆಯನ್ನು ಅಧಿಕೃತವಾಗಿ ದೃಢಪಡಿಸಿದ್ದು, ಮೃತರ ಕುಟುಂಬಸ್ಥರಿಗೆ ತೀವ್ರ ಸಂತಾಪ ಸೂಚಿಸಿದೆ. ಪೈಲಟ್ ತರಬೇತಿಯ ಅಭ್ಯಾಸ ನಿರತರಾಗಿದ್ದ ಸಂದರ್ಭದಲ್ಲಿ ಈ ವಿಮಾನ ಅಪಘಾತ ಸಂಭವಿಸಿದ್ದು, ಮೃತರ ಪಾರ್ಥಿವ ಶರೀರವನ್ನು ಭಾರತಕ್ಕೆ ತರಲು ಅಗತ್ಯವಿರುವ ಎಲ್ಲಾ ರಾಯಭಾರ ಮತ್ತು ತಾಂತ್ರಿಕ ನೆರವುಗಳನ್ನು ಒದಗಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ವಿದ್ಯಾರ್ಥಿ ಆತ್ಮಹತ್ಯೆ: ಐಐಟಿ ಪ್ರಾಧ್ಯಾಪಕ ದೂಲ್ಲಾ ಅಮಾನತು

ಮುಂಬೈ, ಸೆ.21: ಐಐಟಿ ಬಾಂಬೆಯ ದ್ವಿತೀಯ ವರ್ಷದ ವಿದ್ಯಾರ್ಥಿ ಸಾಹಿಲ್ ವಾಕೋಡೆ ಆತ್ಮಹತ್ಯೆ ಪ್ರಕರಣದ ಬೆನ್ನಲ್ಲೇ, ಸಂಸ್ಥೆಯ ಆಡಳಿತ ವ್ಯವಹಾರಗಳ ಡೀನ್ ಪ್ರೊ. ಸೂರ್ಯನಾರಾಯಣ ದೂಲ್ಲಾ ಅವರ ಡೀನ್ಶಿಪ್ ಅನ್ನು ಅಮಾನತುಗೊಳಿಸಲಾಗಿದೆ. ಈ ಕುರಿತು ಐಐಟಿ ಬಾಂಬೆ ನಿರ್ದೇಶಕರು ವಿದ್ಯಾರ್ಥಿಗಳಿಗೆ ಇ–ಮೇಲ್ ಮೂಲಕ ಮಾಹಿತಿ ನೀಡಿದ್ದಾರೆ. ಆದರೆ ಅಮಾನತಿನ ಅವಧಿ ಹಾಗೂ ನಿಖರ ಕಾರಣಗಳನ್ನು ಸಂಸ್ಥೆ ಬಹಿರಂಗಪಡಿಸಿಲ್ಲ.

ಸಾಹಿಲ್ ವಾಕೋಡೆ ಅವರ ತಂದೆ ನೀಡಿದ ದೂರಿನ ಆಧಾರದ ಮೇಲೆ ಮುಂಬೈ ಪೊಲೀಸರು ಪ್ರೊ. ದೂಲ್ಲಾ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ತಮ್ಮ ಪುತ್ರನಿಗೆ ಕಳೆದ ಮೂರು ತಿಂಗಳಿಂದ ಕಿರುಕುಳ ನೀಡಲಾಗುತ್ತಿತ್ತು ಹಾಗೂ ಪ್ರೊ. ದೂಲ್ಲಾ ಜಾತಿ ನಿಂದನೆಯ ಪದಗಳನ್ನು ಬಳಸಿದ್ದರು ಎಂದು ತಂದೆ ದೂರಿನಲ್ಲಿ ಆರೋಪಿಸಿದ್ದಾರೆ. ಈ ಆರೋಪಗಳು




ಸದ್ಯ ತನಿಖೆಯಲ್ಲಿದ್ದು, ಪೊಲೀಸರು ಅವುಗಳನ್ನು ಇನ್ನೂ ದೃಢಪಡಿಸಿಲ್ಲ. ಪ್ರಕರಣದ ತನಿಖೆಯನ್ನು ಮುಂಬೈ ಪೊಲೀಸ್ ಕ್ರೈಂ ಬ್ರಾಂಚ್ ಕೈಗೆತ್ತಿ–ಕೊಂಡಿದೆ.

ಇದಕ್ಕೂ ಮುನ್ನ ಪರೀಕ್ಷಾ ಕೊಠಡಿಯಲ್ಲಿ ಸಾಹಿಲ್ ಮೊಬೈಲ್ ಫೋನ್ ಬಳಸುತ್ತಿದ್ದುದನ್ನು ಪ್ರೊ. ದೂಲ್ಲಾ ಗಮನಿಸಿದ್ದರು ಎಂದು ಐಐಟಿ ಬಾಂಬೆ ತಿಳಿಸಿತ್ತು. ಪ್ರಶ್ನೆಪತ್ರಿಕೆಯನ್ನು ಚಾಟ್‌ಜಿಪಿಟಿಗೆ ಅಪ್‌ಲೋಡ್ ಮಾಡಿ ಉತ್ತರ ಪಡೆಯಲು ವಿದ್ಯಾರ್ಥಿ ಪ್ರಯತ್ನಿಸಿದ್ದ ಎಂದು ಸಂಸ್ಥೆ ಹೇಳಿದೆ. ಈ ವಿಚಾರವನ್ನು ಐಐಟಿ ಬಾಂಬೆ 'ಶೈಕ್ಷಣಿಕ ಅಕ್ರಮ' ಎಂದು ವಿವರಿಸಿತ್ತು. ಆದರೆ ವಿದ್ಯಾರ್ಥಿಯ ವಿರುದ್ಧ ಯಾವುದೇ ಶಿಸ್ತು ಕ್ರಮ ಆರಂಭಿಸಿರಲಿಲ್ಲ ಎಂದು ಸಂಸ್ಥೆ ಸ್ಪಷ್ಟಪಡಿಸಿತ್ತು.

### ಪ್ರಾಧ್ಯಾಪಕರ ಬೆಂಬಲಕ್ಕೆ ಫ್ಯಾಕಲ್ಟಿ ಫೋರಂ

ಆರೋಪಗಳ ನಡುವೆಯೇ ಐಐಟಿ ಬಾಂಬೆ ಫ್ಯಾಕಲ್ಟಿ ಫೋರಂ ಪ್ರೊ. ದೂಲ್ಲಾ ಅವರಿಗೆ ಬೆಂಬಲ ವ್ಯಕ್ತಪಡಿಸಿದೆ. ಪರೀಕ್ಷೆಯ ವೇಳೆ ಅವರು ಸಂಸ್ಥೆಯ ಸೆನೆಟ್ ಅನುಮೋದಿತ ಶೈಕ್ಷಣಿಕ ನಿಯಮಗಳಂತೆ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಫೋರಂ ಹೇಳಿದೆ. ವಿದ್ಯಾರ್ಥಿ ಅನುಮತಿಯಿಲ್ಲದೆ ಮೊಬೈಲ್ ಬಳಸುತ್ತಿರುವುದನ್ನು ಗಮನಿಸಿದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು ಎಂದು ಫೋರಂ ತಿಳಿಸಿದೆ. ಇದೇ ವೇಳೆ ಸಾಹಿಲ್ ಕುಟುಂಬಕ್ಕೆ ಸಂತಾಪ ಸೂಚಿಸಿದೆ.

ಪ್ರೊ. ಸೂರ್ಯನಾರಾಯಣ ದೂಲ್ಲಾ ಅವರು ಐಐಟಿ ಬಾಂಬೆಯ ಎನರ್ಜಿ ಸೈನ್ಸ್ ಆಂಡ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾಗಿದ್ದಾರೆ. ಪವರ್ ಎಲೆಕ್ಟ್ರಾನಿಕ್ಸ್ ಮತ್ತು ಪವರ್ ಸಿಸ್ಟಮ್ಸ್ ಕ್ಷೇತ್ರದಲ್ಲಿ ಬೋಧನೆ ಹಾಗೂ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ

# ಕೆ.ಆರ್. ವೃತ್ತ ಅಂಡರ್‌ಪಾಸ್ ಮಳೆ ನೀರು ಕಂಟಕಕ್ಕೆ ಮುಕ್ತಿ

**ಒಂದು ವಾರ ಬಂದ್**

ಬೆಂಗಳೂರು, ಸೆ.21: ನಗರದ ಕೆ.ಆರ್. ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆನೀರು ನಿಲ್ಲುವ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಕೇಂದ್ರ ನಗರಪಾಲಿಕೆ ಮುಂದಾಗಿದೆ. ಮಳೆ ಬಂದಾಗಲೆಲ್ಲ ಅಂಡರ್‌ಪಾಸ್‌ನಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಇದೀಗ ಹೆಚ್ಚುವರಿ ಮಳೆನೀರು ಹರಿವು ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಕೆ.ಆರ್. ವೃತ್ತದ ಅಂಡರ್‌ಪಾಸ್‌ನ ಡಾ. ಅಂಬೇಡ್ಕರ್ ವೀದಿ ಬದಿಯಲ್ಲಿ ಮಳೆನೀರು ಒಳನುಗ್ಗುವುದನ್ನು ತಡೆಯಲು ಎಂಎಸ್ ಗ್ರೇಟಿಂಗ್‌ನೊಂದಿಗೆ ಪ್ರೀಕಾಸ್ಟ್ ಡ್ರೈನ್ ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಅಂಡರ್‌ಪಾಸ್‌ನಲ್ಲಿ ನಿರ್ಮಿಸಿರುವ ಮಳೆನೀರಿನ ಡ್ರೈನ್‌ಗೆ ಹೆಚ್ಚುವರಿ ವ್ಯವಸ್ಥೆಯಾಗಿ ಈ ಕಾಮಗಾರಿ ನಡೆಯುತ್ತಿದೆ.



ಮಳೆ ಸಂದರ್ಭದಲ್ಲಿ ರಸ್ತೆಯ ಮೇಲಿನಿಂದ ಹರಿದು ಬರುವ ನೀರು ಅಂಡರ್‌ಪಾಸ್‌ಗೆ ನುಗ್ಗದಂತೆ ತಡೆದು, ನೀರನ್ನು ಸಮರ್ಪಕವಾಗಿ ಹೊರಹರಿಸುವುದು ಹೊಸ ಡ್ರೈನ್ ವ್ಯವಸ್ಥೆಯ ಉದ್ದೇಶವಾಗಿದೆ. ಇದರಿಂದ ಮಳೆ ಬಂದಾಗ ಅಂಡರ್‌ಪಾಸ್‌ನಲ್ಲಿ ನೀರು ಸಂಗ್ರಹವಾಗುವ ಸಾಧ್ಯತೆ ಕಡಿಮೆಯಾಗಲಿದ್ದು, ವಾಹನ ಸವಾರರಿಗೆ ಅನುಕೂಲವಾಗಲಿದೆ ಎಂದು ನಗರಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

### ಮೂರು ವರ್ಷಗಳ ಹಿಂದೆ ದುರಂತ:

ಕೆ.ಆರ್. ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆನೀರು ನಿಲ್ಲುವುದು ಹೊಸ ಸಮಸ್ಯೆಯಲ್ಲ. ಸುಮಾರು ಮೂರು ವರ್ಷಗಳ ಹಿಂದೆ ಭಾರಿ ಮಳೆಯ ಸಂದರ್ಭದಲ್ಲಿ ಅಂಡರ್‌ಪಾಸ್‌ನಲ್ಲಿ ನೀರು ತುಂಬಿಕೊಂಡ ಪರಿಣಾಮ ಕಾರಿನಲ್ಲಿ ಸಿಲುಕಿದ್ದ ಪ್ರಯಾಣಿಕರೊಬ್ಬರು ಮೃತಪಟ್ಟಿದ್ದರು. ಈ ಘಟನೆ ಬಳಿಕವೂ ಮಳೆಗಾಲದಲ್ಲಿ ಅಂಡರ್‌ಪಾಸ್‌ನಲ್ಲಿ ನೀರು ನಿಲ್ಲುವ ಸಮಸ್ಯೆ ಮುಂದುವರಿದಿತ್ತು.

ಪ್ರತಿ ಬಾರಿ ಮಳೆ ಸುರಿದಾಗ ಅಂಡರ್‌ಪಾಸ್‌ನಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿತ್ತು. ಕೆಲ ಸಂದರ್ಭಗಳಲ್ಲಿ ವಾಹನಗಳು ನೀರಿನಲ್ಲಿ ಸಿಲುಕುವ ಆತಂಕವೂ ಎದುರಾಗುತ್ತಿತ್ತು. ಹೀಗಾಗಿ ಮಳೆನೀರು ಸರಾಗವಾಗಿ ಹರಿದುಹೋಗುವಂತೆ ಹೆಚ್ಚುವರಿ ಡ್ರೈನ್ ನಿರ್ಮಾಣಕ್ಕೆ ನಗರಪಾಲಿಕೆ ಮುಂದಾಗಿದೆ.

### ಒಂದು ವಾರ ಅಂಡರ್‌ಪಾಸ್ ಬಂದ್:

ಡ್ರೈನ್ ಕಾಮಗಾರಿ ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ ಸದ್ಯ ಕೆ.ಆರ್. ವೃತ್ತದ ಅಂಡರ್‌ಪಾಸ್‌ನ್ನು ಸಂಪೂರ್ಣವಾಗಿ ಬಂದ್ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ಸುಮಾರು ಒಂದು ವಾರ ಕಾಲಾವಕಾಶ ಬೇಕಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಮಗಾರಿ ಮುಗಿದ ಬಳಿಕ ಅಂಡರ್‌ಪಾಸ್‌ನ್ನು ಮತ್ತೆ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ. ಮಳೆ ಬಂದ ಸಂದರ್ಭದಲ್ಲಿ ನೀರು ಅಂಡರ್‌ಪಾಸ್‌ನಲ್ಲಿ ನಿಲ್ಲದಂತೆ ಹಾಗೂ ವಾಹನ ಸಂಚಾರ ಸುಗಮವಾಗುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ನಗರಪಾಲಿಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಹೆಸರಿಗೆ ಮಾತ್ರ ಪ್ಯಾನಿಕ್ ಬಟನ್

## ಒತ್ತಿದರೂ ಕರೆ ಇಲ್ಲ, ಸಂದೇಶವೂ ಇಲ್ಲ

**ಕ್ಯಾಬ್ ಚಾಲಕರ ಅಳಲು**

ಬೆಂಗಳೂರು, ಸೆ.21– ಮಹಿಳೆಯರು ಹಾಗೂ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಯೆಲ್ಲೋ ಬೋರ್ಡ್ ಕ್ಯಾಬ್‌ಗಳಲ್ಲಿ ಕಡ್ಡಾಯಗೊಳಿಸಿರುವ ಪ್ಯಾನಿಕ್ ಬಟನ್‌ಗಳು ಹೆಸರಿಗೆ ಮಾತ್ರ ಅಳವಡಿಕೆಯಾಗಿದ್ದು, ತುರ್ತು ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿವೆ.

ಪ್ರಯಾಣಿಕರ ಸುರಕ್ಷತೆಗಾಗಿ ಸಾರಿಗೆ ಇಲಾಖೆ ನಿರ್ಭಯ ಯೋಜನೆಯಡಿ ಯೆಲ್ಲೋ ಬೋರ್ಡ್ ಕ್ಯಾಬ್‌ಗಳಲ್ಲಿ ಪ್ಯಾನಿಕ್ ಬಟನ್ ಅಳವಡಿಕೆಯನ್ನು ಕಡ್ಡಾಯಗೊಳಿಸಿತ್ತು. ಬಟನ್ ಅಳವಡಿಸದ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ (ಎಫ್‌ಸಿ) ನೀಡುವುದಿಲ್ಲ ಎಂಬ ಸೂಚನೆಯ ಹಿನ್ನೆಲೆಯಲ್ಲಿ ಚಾಲಕರು ಸಾವಿರಾರು ರೂಪಾಯಿ ಖರ್ಚು ಮಾಡಿ ಬಟನ್ ಅಳವಡಿಸಿಕೊಂಡಿದ್ದಾರೆ. ಆದರೆ, ಬಟನ್ ಅಳವಡಿಸಿ ಹಲವು ತಿಂಗಳು ಕಳೆದರೂ ಅದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ಚಾಲಕರ ಅಳಲು.

### ಮೂರು ಬಟನ್, ಸಾವಿರಾರು ರೂಪಾಯಿ ಖರ್ಚು

ನಗರದ ಹಲವು ಯೆಲ್ಲೋ ಬೋರ್ಡ್ ಕ್ಯಾಬ್‌ಗಳಲ್ಲಿ ಮೂರು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲಾಗಿದೆ. ಪ್ರತಿ ವಾಹನಕ್ಕೆ ಸುಮಾರು 15 ಸಾವಿರದಿಂದ 18 ಸಾವಿರದವರೆಗೆ ಖರ್ಚಾಗಿದೆ ಎನ್ನಲಾಗಿದೆ. ತುರ್ತು ಸಂದರ್ಭದಲ್ಲಿ ಚಾಲಕ ಅಥವಾ ಪ್ರಯಾಣಿಕರು ಬಟನ್ ಒತ್ತಿದ ತಕ್ಷಣ ಸಂಬಂಧಿಸಿದ ವ್ಯವಸ್ಥೆಗೆ ಸಿಗ್ನಲ್ ಹೋಗಬೇಕು. ವಾಹನದ ಜಿಪಿಎಸ್ ಸ್ಥಳ ಮಾಹಿತಿ ಲಭ್ಯವಾಗಬೇಕು ಹಾಗೂ ಅಗತ್ಯವಿದ್ದಲ್ಲಿ ಪೊಲೀಸ್ ಸಿಬ್ಬಂದಿ ಕೂಡಲೇ ಸಂಪರ್ಕಿಸಿ ಸ್ಥಳಕ್ಕೆ ಧಾವಿಸಬೇಕು ಎಂಬುದು ಇದರ ಉದ್ದೇಶ.

ಆದರೆ, ಬಟನ್ ಒತ್ತಿದರೂ ಯಾವುದೇ ಪ್ರತಿಕ್ರಿಯೆ ಬರುತ್ತಿಲ್ಲ ಎಂಬ ಆರೋಪಗಳು ಕೇಳಿ ಬರುತ್ತಿವೆ. ಒಂದು ಬಾರಿ ಮಾತ್ರವಲ್ಲ, ಹಲವು ಬಾರಿ ಪ್ಯಾನಿಕ್ ಬಟನ್ ಒತ್ತಿದರೂ ಕರೆ ಬರುವುದಿಲ್ಲ, ಸಂದೇಶವೂ ಬರುವುದಿಲ್ಲ ಎಂದು ಕೆಲ ಪ್ರಯಾಣಿಕರು ಹಾಗೂ ಚಾಲಕರು ದೂರಿದ್ದಾರೆ.

### ತುರ್ತು ಸಂದರ್ಭದಲ್ಲಿ ಏನು ಗತಿ?

ಕ್ಯಾಬ್ ಪ್ರಯಾಣದ ವೇಳೆ ಪ್ರಯಾಣಿಕರು ಮತ್ತು ಚಾಲಕರ ನಡುವೆ ಕೆಲವೊಮ್ಮೆ ಗಲಾಟೆ, ವಾಗ್ವಾದ ಸೇರಿದಂತೆ ವಿವಿಧ ಸಮಸ್ಯೆಗಳು ಎದುರಾಗುತ್ತವೆ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಮುನ್ನ ಪೊಲೀಸ್ ನೆರವು ಪಡೆಯಲು ಪ್ಯಾನಿಕ್ ಬಟನ್ ಸಹಕಾರಿಯಾಗಬೇಕಿತ್ತು. ಆದರೆ, ತುರ್ತು ಸಮಯದಲ್ಲೇ ಬಟನ್ ಕೆಲಸ ಮಾಡದಿದ್ದರೆ ಅದರ ಉದ್ದೇಶವೇನು ಎಂಬ ಪ್ರಶ್ನೆ ಉದ್ಭವಿಸಿದೆ.

ಮಹಿಳಾ ಪ್ರಯಾಣಿಕರ ಸುರಕ್ಷತೆಯ ವಿಚಾರದಲ್ಲೂ



ಇದು ಪ್ರಮುಖವಾಗಿದ್ದು, ರಾತ್ರಿ ವೇಳೆ ಅಥವಾ ನಿರ್ಜನ ಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿ ಎದುರಾದಾಗ ತಕ್ಷಣ ಸಹಾಯ ಪಡೆಯಲು ಸಾಧ್ಯವಾಗದಿದ್ದರೆ ಸುರಕ್ಷತಾ ವ್ಯವಸ್ಥೆಯ ಮೇಲೆಯೇ ಪ್ರಶ್ನೆ ಮೂಡುತ್ತದೆ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಹಣ ಖರ್ಚು ಮಾಡಿ ಕಾಯುತ್ತಿರುವ ಚಾಲಕರು

"ಪ್ಯಾನಿಕ್ ಬಟನ್ ಕಡ್ಡಾಯ ಎಂದು ಸಾರಿಗೆ ಇಲಾಖೆ ಸೂಚಿಸಿದ್ದರಿಂದ ಎಫ್‌ಸಿ ಸಮಸ್ಯೆಯಾಗಬಾರದು ಎಂದು ಸಾಲ ಮಾಡಿ, ಕೈಯಲ್ಲಿದ್ದ ಹಣ ಹಾಕಿ ಬಟನ್ ಅಳವಡಿಸಿಕೊಂಡಿದ್ದೇವೆ. ಆರು–ಏಳು ತಿಂಗಳು ಕಳೆದರೂ ವ್ಯವಸ್ಥೆ ಸರಿಯಾಗಿಲ್ಲ. ಇವತ್ತು ಸರಿಯಾಗುತ್ತದೆ, ನಾಳೆ ಸರಿಯಾಗುತ್ತದೆ ಎಂದು ಕಾಯುತ್ತಿದ್ದೇವೆ. ಆದರೆ, ಇದುವರೆಗೂ ಪ್ರಯೋಜನವಾಗಿಲ್ಲ" ಎಂದು ಕ್ಯಾಬ್ ಚಾಲಕರು ಅಸಮಾಧಾನ ಹೊರಹಾಕಿದ್ದಾರೆ.

ಸುರಕ್ಷತೆಗಾಗಿ ಅಳವಡಿಸಿರುವ ಸಾಧನವೇ ಕಾರ್ಯನಿರ್ವಹಿಸದಿದ್ದರೆ ಚಾಲಕರು ಹಾಗೂ ಪ್ರಯಾಣಿಕರಿಗೆ ಇದರ ಪ್ರಯೋಜನವೇನು ಎಂಬ ಪ್ರಶ್ನೆಯನ್ನೂ ಅವರು ಎತ್ತಿದ್ದಾರೆ.

ಪ್ಯಾನಿಕ್ ಬಟನ್ ಅಳವಡಿಕೆಗಾಗಿ ಚಾಲಕರಿಂದ ಸಾವಿರಾರು ರೂಪಾಯಿ ಖರ್ಚು ಮಾಡಿಸಿ, ಬಳಿಕ ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲಾಖೆ ಪೊಲೀಸರ ನಡುವೆ ಸಮನ್ವಯ ಅಗತ್ಯ ಎನ್ನುತ್ತಿದ್ದರೆ ಸಾರ್ವಜನಿಕರು.

ಪ್ಯಾನಿಕ್ ಬಟನ್ ಒತ್ತಿದಾಗ ಸಿಗ್ನಲ್ ಯಾರಿಗೆ ತಲುಪುತ್ತದೆ? ಜಿಪಿಎಸ್ ಮಾಹಿತಿ ಯಾವ ವ್ಯವಸ್ಥೆಗೆ ಹೋಗುತ್ತದೆ? ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ರವಾನೆಯಾಗುತ್ತಿದೆಯೇ? ಎಂಬುದನ್ನು ಸಾರಿಗೆ ಇಲಾಖೆ ಸ್ಪಷ್ಟಪಡಿಸಬೇಕಿದೆ.

ಪ್ಯಾನಿಕ್ ಬಟನ್ ವ್ಯವಸ್ಥೆಯ ತಾಂತ್ರಿಕ ದೋಷಗಳನ್ನು ಪರಿಶೀಲಿಸಿ, ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ನಡುವೆ ಸಮನ್ವಯ ಸಾಧಿಸಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಬೇಕು. ಇಲ್ಲದಿದ್ದರೆ ಪ್ರಯಾಣಿಕರ ಸುರಕ್ಷತೆಗಾಗಿ ರೂಪಿಸಿರುವ ವ್ಯವಸ್ಥೆ ಕೇವಲ ವಾಹನಗಳಲ್ಲಿ ಅಳವಡಿಸಿರುವ ಒಂದು ಸಾಧನವಾಗಿ ಉಳಿಯುವ ಆತಂಕವಿದೆ.